ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಭಿನ್ನ ಪಾತ್ರದತ್ತ ರಾಜ್ ಶೆಟ್ಟಿ’ ಮಲಯಾಳ ಸಿನಿಮಾ ‘ಟರ್ಬೊ’ದಲ್ಲಿ ನಟಿಸಿರುವ ಕನ್ನಡ ನಟನ ಸಂದರ್ಶನ

ಆಳ-ಅಗಲ
ಕಾಶ್ಮೀರ ಕಣಿವೆ: ಸ್ಪರ್ಧಿಸದಿದ್ದರೂ ಬಿಜೆಪಿಗೆ ಹಲವು ಸವಾಲುಗಳು

ಆಲಮಟ್ಟಿ: 38 ಕೆ.ಜಿ ತೂಕದ ಮೀನು ಬಲೆಗೆ 8

ಮಳೆ: ಕೃಷಿ ಚಟುವಟಿಕೆ ಶುರು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,987	22,200	₹75,700 (ಬೆಂಗಳೂರು)	₹88,500 (ಬೆಂಗಳೂರು)	83.50

ಹಣ ಅಕ್ರಮ ವರ್ಗಾವಣೆ ಕಾಯ್ದೆಯ ಸೆಕ್ಷನ್ 19ರ ಅಡಿಯ ಕ್ರಮದ ಕುರಿತು ‘ಸುಪ್ರೀಂ’ ಸ್ಪಷ್ಟನೆ

‘ವಿಚಾರಣೆ ಹಂತದಲ್ಲಿ ಬಂಧನ ಸಲ್ಲ’

ನವದೆಹಲಿ (ಪಿಟಿಐ): ವಿಶೇಷ ನ್ಯಾಯಾಲಯವು ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡ ಬಳಿಕ, ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ಕಾಯ್ದೆಯ (ಪಿಎಂಎಲ್ಎ) ಸೆಕ್ಷನ್ 19ರಡಿ ಆರೋಪಿಯನ್ನು ಬಂಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಆರೋಪಿಯು ಸಮನ್ಸ್ ಅನ್ವಯ ನ್ಯಾಯಾಲಯಕ್ಕೆ ಹಾಜರಾದಾಗ, ಅವರನ್ನು ಕಸ್ಟಡಿಗೆ ಪಡೆಯಲು ಸಂಸ್ಥೆಯು ಸಂಬಂಧಿಸಿದ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಿಯಾಂ ಅವರ ಪೀಠ ತಿಳಿಸಿದೆ.

ಆರೋಪಿಯನ್ನು ಕಸ್ಟಡಿಗೆ ಪಡೆಯಬೇಕು ಎಂದು ಇ.ಡಿ ಬಯಸಿದರೆ, ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ವಿಶೇಷ ನ್ಯಾಯಾಲಯವು ಅರ್ಜಿಯನ್ನು ಪರಿಶೀಲಿಸಿ, ಕಸ್ಟಡಿಯ ಕಾರಣಗಳನ್ನು ದಾಖಲಿಸಿಕೊಂಡು ಕಸ್ಟಡಿ ಆದೇಶ ಹೊರಡಿಸುತ್ತದೆ.

ಈ ಹಂತದಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸುವ ಅವಶ್ಯಕತೆ ಇದೆ ಎಂಬುದು ನ್ಯಾಯಾಲಯಕ್ಕೆ ಮನವರಿಕೆ ಆದರೆ ಮಾತ್ರ ಕಸ್ಟಡಿಗೆ ನೀಡುವ ಆದೇಶ ಹೊರಡಿಸಬಹುದು. ಪ್ರಕರಣದಲ್ಲಿ ಆರೋಪಿಯನ್ನು ಒಮ್ಮೆಯೂ ಬಂಧಿಸದಿದ್ದರೂ ಇದು ಅನ್ವಯ ಆಗುತ್ತದೆ.

ಪೀಠ ಹೇಳಿದ ಪ್ರಮುಖಾಂಶಗಳು

- ಆರೋಪಿಯು ವಿಶೇಷ ನ್ಯಾಯಾಲಯಕ್ಕೆ ಸಮನ್ಸ್ ಮೂಲಕ ಹಾಜರಾಗಿದ್ದರೆ, ಅವರನ್ನು ಕಸ್ಟಡಿಯಲ್ಲಿ-ದ್ದಾರೆ ಎಂದು ಪರಿಗಣಿಸಲು ಆಗುವುದಿಲ್ಲ
- ಆರೋಪಿಯು ಸಮನ್ಸ್‌ಗೆ ಅನುಗುಣವಾಗಿ ನ್ಯಾಯಾಲಯದ ಮುಂದೆ ಹಾಜರಾಗಿದ್ದರೆ, ಅವರು ಜಾಮೀನಿಗೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಅವರಿಗೆ ಪಿಎಂಎಲ್ಎ ಸೆಕ್ಷನ್ 45ರಲ್ಲಿ ಇರುವ ಅವಳಿ ಷರತ್ತುಗಳು ಅನ್ವಯಿಸುವುದಿಲ್ಲ
- ಈ ಅವಳಿ ಷರತ್ತುಗಳೆಂದರೆ, ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯು ಜಾಮೀನಿಗೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯವು ಮೊದಲು ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ವಾದವನ್ನು ಆಲಿಸಬೇಕು; ವಿಚಾರಣೆ ವೇಳೆ ಆರೋಪಿ ತಪ್ಪಿತಸ್ಥನಲ್ಲ ಎಂದು ಕಂಡುಬಂದರೆ ಹಾಗೂ ಆರೋಪಿಯನ್ನು ಬಿಡುಗಡೆ ಮಾಡಿದರೆ ತಪ್ಪು ಪುನರಾವರ್ತನೆ ಆಗುವ ಸಾಧ್ಯತೆ ಇಲ್ಲ ಎಂಬುದು ಮನದಟ್ಟಾದರೆ ಮಾತ್ರ ಅವರಿಗೆ ಜಾಮೀನು ನೀಡಬಹುದು
- ವಿಶೇಷ ನ್ಯಾಯಾಲಯವು ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡ ಬಳಿಕ, ಆರೋಪಿಯು ಜಾಮೀನಿಗಾಗಿ ಎರಡು ಅವಳಿ ಷರತ್ತುಗಳನ್ನು ಪೂರೈಸಬೇಕೇ ಎಂಬುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

‘ಕೇಜ್ರಿವಾಲ್‌ಗೆ ವಿನಾಯಿತಿ ತೋರಿಲ್ಲ’

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ನೀಡಿರುವ ಮಧ್ಯಂತರ ಜಾಮೀನು ವಿಚಾರದಲ್ಲಿ ಯಾವುದೇ ವಿನಾಯಿತಿಯನ್ನು ಕೊಟ್ಟಿಲ್ಲ ಎಂದು ಗುರುವಾರ ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ತನ್ನ ತೀರ್ಪಿನ ಕುರಿತ ವಿಮರ್ಶೆಗಳನ್ನು ಸ್ವಾಗತಿಸುವುದಾಗಿ ಹೇಳಿದೆ.

ಎಎಪಿ ರಾಷ್ಟ್ರೀಯ ಸಂಚಾಲಕರಿಗೆ ನೀಡಿರುವ ಮಧ್ಯಂತರ ಜಾಮೀನಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಕೇಜ್ರಿವಾಲ್ ಪರ ವಕೀಲರು ಮಾಡಿದ ವಾದ, ಪ್ರತಿವಾದಗಳನ್ನು ಪರಿಗಣಿಸಲು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರ ಪೀಠ ನಿರಾಕರಿಸಿತು.

‘ನಾವು ಯಾರಿಗೂ ವಿನಾಯಿತಿ ನೀಡಿಲ್ಲ. ಸಮರ್ಥನೆಗೆ ಬೇಕಾದ ಅಂಶಗಳನ್ನು ಆದೇಶದಲ್ಲಿ ಹೇಳಿದ್ದೇವೆ’ ಎಂದು ಪೀಠ ಹೇಳಿತು.

ಇ.ಡಿ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಚುನಾವಣಾ ರ‍್ಯಾಲಿಗಳಲ್ಲಿ ಕೇಜ್ರಿವಾಲ್ ಅವರು, ಜನರು ಎಎಪಿಗೆ ಮತ ನೀಡಿದರೆ ತಾನು ಜೂನ್ 2ರಂದು ಮತ್ತೆ ಜೈಲಿಗೆ ಹೋಗಬೇಕಾಗಿಲ್ಲ ಎಂದು ಭಾಷಣ ಮಾಡಿದ್ದಾರೆ’ ಎಂದು ಆಕ್ಷೇಪಿಸಿದರು.

‘ಇದು ಅವರ ಊಹೆ. ನಾವು ಇದಕ್ಕೆ ಏನನ್ನೂ ಹೇಳಲು ಸಾಧ್ಯವಿಲ್ಲ’ ಎಂದ ಪೀಠ, ‘ಅವರು ಯಾವಾಗ ಶರಣಾಗಬೇಕು ಎಂಬುದರ ಕುರಿತು ನಮ್ಮ ಆದೇಶದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಅದು ಸುಪ್ರೀಂ ಕೋರ್ಟ್‌ನ ಆದೇಶವಾಗಿದೆ’ ಎಂದು ಹೇಳಿತು.

ಅಮಿತ್ ಶಾ ಹೇಳಿಕೆ ಉಲ್ಲೇಖ: ಕೇಜ್ರಿವಾಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ‘ಹಿರಿಯ ಸಚಿವರೊಬ್ಬರು ಎಎಪಿ ನಾಯಕನಿಗೆ ನ್ಯಾಯಾಲಯವು ‘ವಿಶೇಷ ಗೌರವ’ ನೀಡಿದೆ ಎಂದೇ ಹಲವರು ನಂಬಿದ್ದಾರೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ’ ಎಂದು ಗೃಹ ಸಚಿವ ಅಮಿತ್ ಶಾ ಅವರ ಹೆಸರನ್ನು ಉಲ್ಲೇಖಿಸದೆ ತಿಳಿಸಿದರು.

‘ಆ ವಿಷಯಕ್ಕೆ ನಾವು ಹೋಗುವುದಿಲ್ಲ’ ಎಂದು ಪೀಠ ಸಿಂಘ್ವಿ ಅವರಿಗೆ ತಿಳಿಸಿತು.

10ನೇ ಪುಟ ನೋಡಿ

‘ಕಾಲ್ಚಳಕದ ಕಣ್ಮಣಿ’ ಚೆಟ್ರಿ ವಿದಾಯ

ಸುನಿಲ್ ಚೆಟ್ರಿ ನಾಯಕ (ಭಾರತ ಫುಟ್‌ಬಾಲ್ ತಂಡ)

- ವಯಸ್ಸು: 39
- ಆಡುವ ಸ್ಥಾನ: ಫಾರ್ವರ್ಡ್
- ಅಂತರರಾಷ್ಟ್ರೀಯ ಪಂದ್ಯಗಳು: 150
- ಗಳಿಸಿದ ಗೋಲುಗಳು: 94 (ಅತೀ ಹೆಚ್ಚು ಗೋಲು ಗಳಿಸಿದ ವಿಶ್ವದ ನಾಲ್ಕನೇ ಆಟಗಾರ)
- ಪದಾರ್ಪಣೆ: 2005 (ಪಾಕಿಸ್ತಾನ ಎದುರು)
- ಕ್ಲಬ್ ಪಂದ್ಯಗಳು: 339
- ಕ್ಲಬ್ ಗೋಲುಗಳು: 158

ಸುನಿಲ್ ಚೆಟ್ರಿ ಅವರು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಜೂನ್ 6ರಂದು ಕೋಲ್ಕತ್ತದ ಸಾಲ್ಟ್ ಲೇಕ್‌ನಲ್ಲಿ ಕುವೈತ್ ತಂಡದ ಎದುರು ನಡೆಯಲಿರುವ ಫಿಫಾ ವಿಶ್ವಕಪ್ ಕ್ವಾಲಿಫೈಯಿಂಗ್ ಪಂದ್ಯವು ಅವರಿಗೆ ಕೊನೆಯದ್ದಾಗಲಿದೆ.

- ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ಗಳಿಸಿದ ಭಾರತದ ಮೊದಲ ಫುಟ್‌ಬಾಲ್ ಆಟಗಾರ.
- 2018ರ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯಲ್ಲಿ 8 ಗೋಲು ಗಳಿಸಿ ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರ.
- 2008 ಎಎಫ್‌ಸಿ ಚಾಲೆಂಜ್ ಕಪ್ ಟೂರ್ನಿಯಲ್ಲಿ (4 ಗೋಲು) ಟಾಪ್ ಸ್ಕೋರರ್ ಗೌರವ. ಫೈನಲ್‌ನಲ್ಲಿ ಹ್ಯಾಟ್ರಿಕ್ ಸಾಧಿಸಿದ್ದರು

ಶ್ರೀಕಂಠೇಗೌಡ ಮೇಲೆ ಹಲ್ಲೆ • ನಾಮಪತ್ರ ಸಲ್ಲಿಕೆಗೆ ಸಿಗದ ಅವಕಾಶ

ಮೇಲ್ಮನೆಗೂ ಬಂಡಾಯದ ಬೇನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಗುರುವಾರ ಮುಕ್ತಾಯವಾಗಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಂಡಾಯ ಬೇನೆ ಕಾಡಿದೆ.

ಲೋಕಸಭಾ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳು ಬಂಡಾಯದ ಬಿಸಿ ಎದುರಿಸಿದ್ದವು. ಈಗ ವಿಧಾನ ಪರಿಷತ್ ಚುನಾವಣೆಯಲ್ಲೂ ಬಂಡಾಯ ಮುಂದುವರಿದಿದ್ದು, ನಾಮಪತ್ರ ಸಲ್ಲಿಕೆಯ ಕೊನೆಯ ದಿನವೂ ಕೆಲವರು ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧ ನಾಮಪತ್ರ ಸಲ್ಲಿಸಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಮಾಜಿ ಸದಸ್ಯ ಮರಿತಿಬ್ಬೇಗೌಡ ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಪರಿಷತ್‌ನ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅವರು ಜೆಡಿಎಸ್ ಟಿಕೆಟ್ ಆಕಾಂಕ್ಷಿ-ಯಾಗಿದ್ದರು. ಜೆಡಿಎಸ್‌ನ ವಿವೇಕಾನಂದ ಅವರನ್ನು ಬಿಜೆಪಿ-ಜೆಡಿಎಸ್ ಮೈತ್ರಿ ಕೂಟ ಕಣಕ್ಕೆ ಇಳಿಸಿದೆ.

ಪಕ್ಷೇತರ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಬೇಕಿದ್ದ ಶ್ರೀಕಂಠೇಗೌಡ ಅವರನ್ನು ಜೆಡಿಎಸ್ ಕಾರ್ಯಕರ್ತರು ಎಳೆದಾಡಿದ್ದರಿಂದ ಅವರು ಗಾಯಗೊಂಡು ಆಸ್ಪತ್ರೆಗೆ ಸೇರಿದರು. ಹೀಗಾಗಿ, ಅವರಿಗೆ ನಾಮಪತ್ರ ಸಲ್ಲಿಸಲು ಸಾಧ್ಯವಾಗಲಿಲ್ಲ. ಬಿಜೆಪಿಯು ನಿಂಗರಾಜೇಗೌಡ ಅವರ ಹೆಸರನ್ನು ಘೋಷಿಸಿದ್ದು, ಅವರು ಬುಧವಾರ ನಾಮಪತ್ರ ಸಲ್ಲಿಸಿದ್ದರು. ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ, ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್, ಈಶಾನ್ಯ ಪದವೀಧರ ಕ್ಷೇತ್ರಗಳಲ್ಲಿ ಬಿಜೆಪಿ ಬಂಡಾಯ ಬಿಸಿ ಎದುರಿಸುತ್ತಿವೆ.

ನೈರುತ್ಯ ಪದವೀಧರ ಕ್ಷೇತ್ರ

ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಆಯನೂರು ಮಂಜುನಾಥ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿರುವುದರ ವಿರುದ್ಧ ತಿರುಗಿಬಿದ್ದಿರುವ ಎಸ್.ಪಿ. ದಿನೇಶ್, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಹಿಂದಿನ ಎರಡು ಚುನಾವಣೆಗಳಲ್ಲಿ ದಿನೇಶ್, ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು.

ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ ವಿರುದ್ಧ ಉಡುಪಿಯ ಮಾಜಿ ಶಾಸಕ ಕೆ. ರಘುಪತಿ ಭಟ್ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಧುಮುಕಿದ್ದಾರೆ.

ನೈರುತ್ಯ ಶಿಕ್ಷಕರ ಕ್ಷೇತ್ರ: ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಜೆಡಿಎಸ್‌ನ ಹಾಲಿ ಸದಸ್ಯ ಎಸ್.ಎಲ್. ಭೋಜೇಗೌಡ ಸ್ಪರ್ಧಿಸಿದ್ದಾರೆ. ಕೆ.ಕೆ. ಮಂಜುನಾಥ್ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ. ಹಿಂದಿನ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ವಕ್ತಾರ ರಮೇಶ್ ಶೆಟ್ಟಿ ಶಂಕರಘಟ್ಟ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ.

ಈಶಾನ್ಯ ಪದವೀಧರ ಕ್ಷೇತ್ರ: ಹಾಲಿ ಸದಸ್ಯ ಚಂದ್ರಶೇಖರ ಪಾಟೀಲ ಕಾಂಗ್ರೆಸ್ ಹುರಿಯಾಳು. ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಅಮರನಾಥ ಪಾಟೀಲ ಬಿಜೆಪಿ ಅಭ್ಯರ್ಥಿ. ಅವರಿಗೆ ಸಡ್ಡು ಹೊಡೆದ ಪಕ್ಷದ ಮುಖಂಡ, ಕಲಬುರಗಿ-ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಸುರೇಶ ಸಜ್ಜನ ಅವರು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಬಂಡಾಯದ ಬಿಸಿ ಎದುರಾಗಿದ್ದರಿಂದ ಬಿಜೆಪಿ ಇಕ್ಕಟ್ಟಿಗೆ ಸಿಲುಕಿದೆ.

ಬೆಂಗಳೂರು ಪದವೀಧರ ಕ್ಷೇತ್ರ: ಬಿಜೆಪಿಯಿಂದ ಹಾಲಿ ಸದಸ್ಯ ಅ. ದೇವೇಗೌಡ ಸ್ಪರ್ಧಿಸಿದ್ದಾರೆ. ಅವರಿಗೆ ಕಾಂಗ್ರೆಸ್‌ನ ರಾಮೋಜಿ ಗೌಡ ಎದುರಾಳಿ. ಕೆಪಿಸಿಸಿ ಸಾಮಾಜಿಕ ಜಾಲತಾಣದ ಪ್ರಧಾನ ಕಾರ್ಯದರ್ಶಿ ಫರ್ಡಿನಾಂಡ್ ಲಾರೆನ್ಸ್ ಕಾಂಗ್ರೆಸ್ ವಿರುದ್ಧ ಬಂಡಾಯವೆದ್ದು ಕಣಕ್ಕೆ ಇಳಿದಿದ್ದಾರೆ.

ಅಂಕಿ ಅಂಶಗಳು

- 6 ಒಟ್ಟು ಕ್ಷೇತ್ರ
- 103 ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು
- 156 ಸಲ್ಲಿಕೆಯಾದ ನಾಮಪತ್ರ

ಇನ್ನಷ್ಟು ಸುದ್ದಿಗಳು 8

ಕೋವ್ಯಾಕ್ಸಿನ್: ನಿಗಾ ವಹಿಸಲು ಬಿಎಚ್‌ಯು ಅಧ್ಯಯನ ವರದಿ ಸೂಚನೆ

ಶೇ 30 ಮಂದಿಗೆ ಅಡ್ಡ ಪರಿಣಾಮ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್ ಸಂಸ್ಥೆ ತಯಾರಿಸಿದ ‘ಬಿಬಿವಿ152 ಕೋವ್ಯಾಕ್ಸಿನ್’ ಕೋವಿಡ್ ತಡೆ ಲಸಿಕೆ ತೆಗೆದುಕೊಂಡ ಮೂರನೇ ಒಂದರಷ್ಟು ಜನರಲ್ಲಿ ಒಂದು ವರ್ಷದ ಬಳಿಕ ಅಡ್ಡಪರಿಣಾಮಗಳು (ಎಇಎಸ್ಐ) ಕಂಡುಬಂದಿರುವುದು ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ಸಂಶೋಧಕರು ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

2022ರ ಜನವರಿಯಿಂದ 2023ರ ಆಗಸ್ಟ್‌ವರೆಗಿನ ನಡುವೆ ಈ ಅಧ್ಯಯನ ನಡೆಸಲಾಗಿದೆ. 926 ಜನರನ್ನು ಅಧ್ಯಯನಕ್ಕೆ ಪರಿಗಣಿಸಲಾಗಿತ್ತು. ಅವರಲ್ಲಿ 635 ಹದಿ-ಹರೆಯದವರು ಮತ್ತು 291 ಮಂದಿ ವಯಸ್ಕರು.

926 ಜನರ ಪೈಕಿ ಶೇ 50ರಷ್ಟು ಜನರಲ್ಲಿ ಉಸಿರಾಟ ನಾಳದಲ್ಲಿ ಸೋಂಕು (ಗಂಟಲು ಕೆರೆತ, ಕೆಮ್ಮು, ಶೀತ) ಹೆಚ್ಚಾಗಿ ಕಾಣಿಸಿಕೊಂಡಿದೆ.

ಶೇ 1ರಷ್ಟು ಜನರಲ್ಲಿ ಗಂಭೀರ ಅಡ್ಡಪರಿಣಾಮಗಳಾದ ಪಾರ್ಶ್ವವಾಯು ಮತ್ತು ನರವ್ಯೂಹಕ್ಕೆ ಸಂಬಂಧಿಸಿದ ಸಮಸ್ಯೆ ಕಂಡುಬಂದಿದೆ ಎಂದು ‘ಸ್ಪ್ರಿಂಗರ್ ನೇಚರ್’ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿ-ರುವ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

ಕಂಡುಬಂದ ಸಮಸ್ಯೆಗಳೇನು?

(ಹದಿಹರೆಯದವರಲ್ಲಿ)

- ಶೇ 10.5ರಷ್ಟು ಜನರಲ್ಲಿ ಚರ್ಮ ಮತ್ತು ಮಾಂಸಖಂಡಗಳಿಗೆ ಸಂಬಂಧಿಸಿದ ರೋಗಗಳು
- ಶೇ 10.2ರಷ್ಟು ಜನರಲ್ಲಿ ಸಾಮಾನ್ಯ ವ್ಯಾಧಿಗಳು
- ಶೇ 4.7ರಷ್ಟು ಜನರಲ್ಲಿ ನರ ವ್ಯವಸ್ಥೆಗೆ ಸಂಬಂಧಿಸಿದ ರೋಗಗಳು

(ವಯಸ್ಕರಲ್ಲಿ)

- ಶೇ 8.9 ಜನರಲ್ಲಿ ಸಾಮಾನ್ಯ ವ್ಯಾಧಿ,
- ಶೇ 5.8ರಷ್ಟು ಜನರಲ್ಲಿ ಮಾಂಸಖಂಡ, ನರ, ಸ್ನಾಯು, ಸಂಧಿಗಳಿಗೆ ಸಂಬಂಧಿಸಿದ ಕಾಯಿಲೆ
- ಶೇ 5.5ರಷ್ಟು ಜನರಲ್ಲಿ ನರ ವ್ಯವಸ್ಥೆಗೆ ಸಂಬಂಧಿತ ಕಾಯಿಲೆಗಳು

(ಮಹಿಳೆಯರಲ್ಲಿ)

- ಶೇ 4.6 ಮಹಿಳೆಯರಲ್ಲಿ ಋತುಚಕ್ರಕ್ಕೆ ಸಂಬಂಧಿಸಿದ ಸಮಸ್ಯೆಗಳು
- ಶೇ 2.7ರಷ್ಟು ಮಹಿಳೆಯರಲ್ಲಿ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳು
- ಶೇ 0.6ರಷ್ಟು ಮಹಿಳೆಯರಲ್ಲಿ ಹೈಪೊಥೈರಾಯ್ಡಿಸಮ್ (ಥೈರಾಯ್ಡ್ ಕೊರತೆ)

ಅಧ್ಯಯನದ ಅವಧಿಯಲ್ಲಿ ನಾಲ್ವರ ಸಾವು: ಅಧ್ಯಯನದ ಅವಧಿಯಲ್ಲಿ ಮೂವರು ಮಹಿಳೆಯರು ಮತ್ತು ಒಬ್ಬ ಪುರುಷ ಮೃತಪಟ್ಟಿದ್ದಾರೆ. ಮೃತಪಟ್ಟ ಎಲ್ಲರೂ ಮಧುಮೇಹಿಗಳಾಗಿದ್ದರು. ಮೂವರು ಅಧಿಕ ಒತ್ತಡದಂಥ ಸಮಸ್ಯೆಯಿಂದ ಬಳಲುತ್ತಿದ್ದರು. ಮೃತಪಟ್ಟವರಲ್ಲಿ ಇಬ್ಬರು ಪಾರ್ಶ್ವವಾಯುವಿಗೆ ಒಳಗಾಗಿದ್ದರು. ಮತ್ತೊಬ್ಬರು ಕೋವಿಡ್-19 ನಂತರದ ರೈನೋಸೆರಬ್ರಲ್ ಮ್ಯುಕೊರ್‌ಮೈಕೊಸಿಸ್‌ನಿಂದ (ಉಸಿರಾಟದ ವ್ಯವಸ್ಥೆಯಲ್ಲಿಯ ಸೋಂಕು) ಬಳಲುತ್ತಿದ್ದರು. ಮೃತಪಟ್ಟ ಮತ್ತೊಬ್ಬ ಮಹಿಳೆಯು ಲಸಿಕೆ ತೆಗೆದುಕೊಂಡ ಬಳಿಕ ಪದೇ ಪದೇ ಪ್ರಜ್ಞೆ ತಪ್ಪಿ ಬೀಳುತ್ತಿದ್ದರು ಎಂದು ಅಧ್ಯಯನ ಹೇಳಿದೆ.

ಕತ್ತು ಸೀಳಿದ ಸ್ಥಿತಿಯಲ್ಲಿ ವಿದ್ಯಾರ್ಥಿನಿ ಶವ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿ ಬೃಂದಾವನ ಬಡಾವಣೆಯ ಮನೆಯೊಂದರ ಸ್ನಾನದ ಕೋಣೆಯಲ್ಲಿ ಬಿಬಿಎ ವಿದ್ಯಾರ್ಥಿನಿ ಮೃತದೇಹವು ಕತ್ತು ಸೀಳಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಪ್ರಭುದ್ಯಾ (21) ಮೃತಪಟ್ಟ ವಿದ್ಯಾರ್ಥಿನಿ.

ತಮ್ಮ ಮನೆಯ ಸ್ನಾನದ ಕೋಣೆಯಲ್ಲಿ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ. ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಅನುಮಾನಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

4Aನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಂಡ್ಯದಲ್ಲಿ ನಿಲ್ಲದ ದುಷ್ಕೃತ್ಯ • ಸಿಐಡಿ ವರದಿ ಸಲ್ಲಿಸಿದರೂ ದಾಖಲಾಗದ ಪ್ರಕರಣ

ಜಾಮೀನು ಪಡೆದವರಿಂದ ಮತ್ತೆ ಭ್ರೂಣಹತ್ಯೆ

• ಎಂ.ಎನ್.ಯೋಗೇಶ್

ಮಂಡ್ಯ: ಹೆಣ್ಣು ಭ್ರೂಣಹತ್ಯೆ ಸಂಬಂಧ ಸಿಐಡಿ ಅಧಿಕಾರಿಗಳು ವರದಿ ಸಲ್ಲಿಸಿ ತಿಂಗಳಾಗಿದ್ದರೂ ನ್ಯಾಯಾಲಯದಲ್ಲಿ ದೂರು ದಾಖಲಿಸುವ ಪ್ರಕ್ರಿಯೆ ವಿಳಂಬವಾಗಿದೆ. ಹೀಗಾಗಿ ಜಾಮೀನಿನ ಮೇಲೆ ಬಿಡುಗಡೆಯಾದ ಆರೋಪಿಗಳು ಮತ್ತೆ ಕೃತ್ಯ ಮುಂದುವರಿಸಿರುವುದು ಕಂಡುಬಂದಿದೆ.

6 ತಿಂಗಳ ಹಿಂದೆ ತಾಲ್ಲೂಕಿನ ಹಾಡ್ಯ ಬಳಿಯ ಆಲೆಮನೆಯಲ್ಲಿ ಹೆಣ್ಣು ಭ್ರೂಣಲಿಂಗ ಪತ್ತೆ ಚಟುವಟಿಕೆ ಪತ್ತೆಯಾಗಿತ್ತು. ಬೆಂಗಳೂರು, ಮೈಸೂರು, ರಾಮನಗರ ಜಿಲ್ಲೆಗಳಲ್ಲಿ ಜಾಲ ಸಕ್ರಿಯವಾಗಿರುವುದನ್ನು ಪೊಲೀಸರು ಪತ್ತೆ ಮಾಡಿದ್ದರು.

ಈ ಪ್ರಕರಣದ ತೀವ್ರತೆಯನ್ನು ಪರಿಗಣಿಸಿದ ರಾಜ್ಯ ಸರ್ಕಾರ ತನಿಖೆಯನ್ನು ಸಿಐಡಿಗೆ ವಹಿಸಿತ್ತು. ಸಿಐಡಿ ತಂಡ ತನಿಖಾ ವರದಿಯನ್ನು ಆರೋಗ್ಯ ಇಲಾಖೆಗೆ ತಿಂಗಳ ಹಿಂದೆ ಸಲ್ಲಿಸಿದೆ. ಅದರ ಆಧಾರದಲ್ಲಿ ಸಕ್ಷಮ ಪ್ರಾಧಿಕಾರವು ಸ್ಥಳೀಯ ನ್ಯಾಯಾಲಯದಲ್ಲಿ ಖಾಸಗಿ ದೂರು ನೋಂದಣಿ (ಪಿಸಿಆರ್) ಮಾಡಬೇಕು. ಆದರೆ, ಇಲ್ಲಿಯವರೆಗೂ ದೂರು ದಾಖಲಾಗದ ಕಾರಣ ಆರೋಪಿಗಳ ವಿರುದ್ಧ ಕ್ರಮ ಜರುಗಿಸುವುದು ಸಾಧ್ಯವಾಗಿಲ್ಲ.

ಆಗ ಬಂಧಿತರಾಗಿದ್ದವರು: ಆಲೆಮನೆಯಲ್ಲಿ ನಡೆಯುತ್ತಿದ್ದ ಕೃತ್ಯದ ಸಂಬಂಧ ಪೊಲೀಸರು 17 ಮಂದಿಯನ್ನು ಬಂಧಿಸಿದ್ದರು.

ಸಕ್ಷಮ ಪ್ರಾಧಿಕಾರದಿಂದ ದೂರು ದಾಖಲಿಸುವ ಅಧಿಕಾರ ಹಸ್ತಾಂತರವಾಗಿಲ್ಲ. ಈ ಕುರಿತು ವಕೀಲರ ಜೊತೆ ಚರ್ಚಿಸಲಾಗುತ್ತಿದೆ. ವಾರದೊಳಗೆ ಕ್ರಮ ಕೈಗೊಳ್ಳುತ್ತೇವೆ

ಡಾ.ಕೆ.ಮೋಹನ್
ಜಿಲ್ಲಾ ಆರೋಗ್ಯಾಧಿಕಾರಿ

‘ಲಾಡ್ಜ್‌ನ ಕೊಠಡಿ ಸಂಖ್ಯೆ 106ರಲ್ಲಿ ಕೃತ್ಯ’

‘ಆಲೆಮನೆ ಮತ್ತು ಆರೋಗ್ಯ ಇಲಾಖೆ ವಸತಿಗೃಹ ಎರಡೂ ಪ್ರಕರಣಗಳ ಪ್ರಮುಖ ಆರೋಪಿ ನವೀನ್ ಕುಮಾರ್ ಪಾಂಡವಪುರದ ಲಾಡ್ಜ್‌ವೊಂದರ 106 ಸಂಖ್ಯೆಯ ಕೊಠಡಿಗೆ ಗರ್ಭಿಣಿಯರನ್ನು ಕರೆದು ತರುತ್ತಿದ್ದ. ಆತನೇ ಗರ್ಭಪಾತ ಮಾತ್ರೆ ನೀಡುತ್ತಿದ್ದ, ನೋವು ಆರಂಭವಾದ ನಂತರ ವಸತಿಗೃಹಕ್ಕೆ ಕರೆದು ತರುತ್ತಿದ್ದ. ಈತನನ್ನು ಹೊರಗೆ ಬಿಟ್ಟರೆ ಮತ್ತೆ ಮತ್ತೆ ಕೃತ್ಯ ಮುಂದುವರಿಸುತ್ತಾನೆ’ ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ಹೇಳಿದರು.

10ನೇ ಪುಟ ನೋಡಿ

ಆಗಸ್ಟ್- ಸೆಪ್ಟೆಂಬರ್ ಬಳಿಕವೂ ಭಾರಿ ಮಳೆ ಸಾಧ್ಯತೆ • ಎಲ್ ನಿನೊ ಕೊನೆ; ತಟಸ್ಥ ವಾತಾವರಣ ಸೃಷ್ಟಿ

ಮಳೆ ತರುವ ‘ಲಾ ನಿನಾ’ಗೆ ವೇದಿಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬರಗಾಲ ಮರೆಯಾಗುವ ಎಲ್ಲ ಸೂಚನೆಗಳು ಕಂಡು ಬರುತ್ತಿವೆ. ಜೂನ್ 10ರ ಬಳಿಕ ಮುಂಗಾರು ಪ್ರವೇಶಿಸಲಿದ್ದು, ಉತ್ತಮ ಮಳೆಯಾಗುವ ಮುನ್ಸೂಚನೆ ಯೂ ಹವಾಮಾನ ಇಲಾಖೆಯಿಂದ ಬಂದಿದೆ. ಇದಕ್ಕೆ ಮುಖ್ಯ ಕಾರಣ ‘ಎಲ್ ನಿನೊ’ ವಾತಾವರಣ ಮುಗಿದು, ‘ಲಾ ನಿನಾ’ ಕಾಲಿಡುವುದಕ್ಕೆ ಪೂರಕವಾಗಿ ಪೆಸಿಫಿಕ್ ಸಾಗರದ ಮೇಲೆ ‘ತಟಸ್ಥ’ (ನ್ಯೂಟ್ರಲ್) ವಾತಾವರಣ ಸೃಷ್ಟಿಯಾಗಿದೆ.

ಎಲ್ ನಿನೊ ಇದ್ದಾಗ ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿ ತಾಪಮಾನ ಹೆಚ್ಚಾಗುತ್ತದೆ. ಲಾ ನಿನಾ ವಿದ್ಯಮಾನ ಆರಂಭಗೊಂಡಾಗ ಶೀತಲ ವಾತಾವರಣ ಸೃಷ್ಟಿಯಾಗುತ್ತದೆ. ಲಾ ನಿನಾದಿಂದ ಮಳೆ ಚೆನ್ನಾಗಿ ಆಗುತ್ತದೆ. ಕೆಲವೊಮ್ಮೆ ಅಧಿಕ ಮಳೆಯಾಗಿ ಪ್ರವಾಹ ಪರಿಸ್ಥಿತಿಯೂ ಉಂಟಾಗುತ್ತದೆ.

ಎಲ್ ನಿನೊ ನಿರ್ಗಮನದಿಂದ ಈ ಬಾರಿ ವಾಡಿಕೆಗಿಂತ ಅಧಿಕ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ. ಲಾ ನಿನಾ ವಿದ್ಯಮಾನಕ್ಕೂ ಮುಂಚೆ ಇದೀಗ ತಟಸ್ಥ ವಾತಾವರಣ ಸೃಷ್ಟಿಯಾಗಿರುವುದು ಉತ್ತಮ ಬೆಳವಣಿಗೆ. ಜೂನ್‌ನಿಂದ ಆಗಸ್ಟ್‌ನಲ್ಲಿ ಲಾ ನಿನಾ ಪ್ರಕ್ರಿಯೆ ಆರಂಭವಾಗುವುದರಿಂದ ರಾಜ್ಯದಲ್ಲಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆ ಇದೆ ಎನ್ನುತ್ತಾರೆ ತಜ್ಞರು.

ಲಾ ನಿನಾದ ಪರಿಣಾಮ ಜೂನ್ ಬಳಿಕ ಅಂದರೆ ಮುಂಗಾರಿನಲ್ಲೇ ಭಾರತದ ಹಲವು ರಾಜ್ಯಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿ ಪ್ರವಾಹದ ಸ್ಥಿತಿಯೂ ನಿರ್ಮಾಣವಾಗಬಹುದು ಎಂದು ಅಮೆರಿಕಾದ ರಾಷ್ಟ್ರೀಯ ಸಾಗರ ಮತ್ತು ವಾತಾವರಣ ಆಡಳಿತ ಕೇಂದ್ರ ಹೇಳಿದೆ.

ಈ ಹಿಂದೆ ಲಾ ನಿನಾ ಪ್ರಕ್ರಿಯೆ ಘಟಿಸಿದ ವರ್ಷಗಳಲ್ಲಿ ಭಾರತದಲ್ಲಿ ಸಾಮಾನ್ಯಕ್ಕಿಂತ ಅಧಿಕ ಮಳೆಯಾಗಿತ್ತು.

‘ಎಲ್ ನಿನೊ’ ಮತ್ತು ‘ಲಾ ನಿನಾ’ ಎಂದರೆ...

‘ಲಾ ನಿನಾ’ ಪರಿಣಾಮವು ‘ಎಲ್ ನಿನೊ’ಗೆ ಸಂಪೂರ್ಣ ತದ್ವಿರುದ್ಧ. ‘ಎಲ್ ನಿನೊ’ ಇದ್ದಾಗ ಮುಂಗಾರು ದುರ್ಬಲವಾಗುತ್ತದೆ, ಬರ ಕಾಣಿಸಿಕೊಳ್ಳುತ್ತದೆ. ಡಿಸೆಂಬರ್ ಅಂತ್ಯದ ವೇಳೆಗೆ ಪೆಸಿಫಿಕ್ ಸಾಗರದ ಪೆರು ಈಕ್ವೆಡಾರ್ ಬಳಿ ಪ್ರಾರಂಭವಾಗುವ ಒಂದು ಹವಾಮಾನ ವೈಪರೀತ್ಯದ ವಿದ್ಯಮಾನವಿದು. ಇದರ ಪ್ರಾರಂಭದ ಸೂಚನೆಯಾಗಿ ಈ ಭಾಗದ ಪೆಸಿಫಿಕ್ ಸಾಗರದ ಮೇಲೆ ನೀರಿನ ತಾಪ ಸರಾಸರಿಗಿಂತ ಹೆಚ್ಚಾಗಲು ಪ್ರಾರಂಭವಾಗುತ್ತದೆ. ಈ ತಾಪ 0.5 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಹೆಚ್ಚಾಗುತ್ತದೆ. ಈ ಹೆಚ್ಚಳ ಏಕ ಪ್ರಕಾರವಾಗಿ 7ರಿಂದ 9 ತಿಂಗಳು ಮುಂದುವರಿಯುತ್ತದೆ. ಈ ವಿದ್ಯಮಾನವನ್ನೇ ಎಲ್ ನಿನೊ ಎನ್ನಲಾಗುತ್ತದೆ.

ಪೆಸಿಫಿಕ್ ಸಾಗರದ ಮೇಲೆ ಅತ್ಯಂತ ಸಂಕೀರ್ಣವೆನಿಸುವ ನೈಸರ್ಗಿಕ ಪ್ರಕ್ರಿಯೆ ಜರುಗಿದಾಗ ಹವಾಮಾನದಲ್ಲಿ ಬದಲಾವಣೆಯಾಗಿ ಶೀತಲ ವಾತಾವರಣ ನಿರ್ಮಾಣ-ವಾಗುತ್ತದೆ. ಇದಕ್ಕೆ ‘ಲಾ ನಿನಾ’ ಪರಿಣಾಮ ಎನ್ನಲಾಗುತ್ತದೆ. ‘ಲಾ ನಿನಾ’ ಪರಿಣಾಮದಲ್ಲಿ ಪೆಸಿಫಿಕ್ ಸಾಗರ ಮೇಲೆ ಪಶ್ಚಿಮಾಭಿಮುಖವಾಗಿ ಅಂದರೆ ಏಷ್ಯಾ ಕಡೆಯಿಂದ ದಕ್ಷಿಣ ಅಮೆರಿಕದ ಕಡೆಗೆ ಗಾಳಿ ಬೀಸಲಾರಂಭಿಸುತ್ತದೆ. ಸಾಗರದ ಮೇಲ್ಮೈ ಮೇಲೆ ಬೆಚ್ಚಗಿನ ನೀರಿನ ಮೇಲೆ ಗಾಳಿ ಹಾದು ಹೋಗುತ್ತದೆ. ಹೀಗೆ ಬೆಚ್ಚಗಿನ ನೀರು ಚಲಿಸಲು ಆರಂಭವಾಗುತ್ತಿದ್ದಂತೆ, ಶೀತಲ ನೀರು ಮೇಲಕ್ಕೆ ಬರುತ್ತದೆ. ಇದರಿಂದ ಪೆಸಿಫಿಕ್ ಸಾಗರದ ಪೂರ್ವ ಭಾಗದಲ್ಲಿ ನೀರು ಸಾಮಾನ್ಯಕ್ಕಿಂತ ಹೆಚ್ಚು ಶೀತಲವಾಗುತ್ತದೆ. ಚಳಿಗಾಲದಲ್ಲಿ ತಣ್ಣನೆ ಗಾಳಿಯೂ ಪ್ರಬಲವಾಗಿ ಬೀಸುತ್ತದೆ.

5ನೇ ಪುಟ ನೋಡಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL
Admission
FAILED/DISCONTINUED
JOIN Complete B.Com, BBA, B.Tech BCA Diploma MBA. Direct/Private SSLC PUC 9341273990

EDUCATION SUCCESS ಕ್ಲಾಸಿಫೈಡ್ಸ್

ಅರುಣೋದಯ ಇಂಗ್ಲಿಷ್ ಹೈ ಸ್ಕೂಲ್ SSLC - 2024 TOPPERS STATE 10th RANK
22/2, "ಜ್ಞಾನ ಕುಟೀರ" ವಿಶ್ವೇಶ್ವರನಗರ, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು - 560091
ಅರುಣೋದಯ ಪಿಯು ಕಾಲೇಜು ಪಿಯುಸಿ ಟಾಪರ್ಸ್ 2024
22/2, "ಜ್ಞಾನ ಕುಟೀರ" ವಿಶ್ವೇಶ್ವರನಗರ, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು - 560091



PUBLIC NOTICE

PUBLIC NOTICE

Public are hereby informed that my clients have negotiated with **Sri. Ashok Kumar Chowan, Sri. Dhanraj Jain, Sri Dharmichand Jain, Sri Sandeep Chowan and Smt. Leela devi, all at Flat No.54, 5th Floor, Kalpatharu Apartment, No.12, Race Course Road, Bangalore-560001** for purchase of the under mentioned Property from them.

Schedule Property

Immovable property being vacant residential site bearing No: 42/1, PID No: 27-84-42/1, Seshadripuram, Bangalore and the adjoining commercial site bearing No. No: 42, PID No: 27-84-42, 1st Main Road, Seshadripurm, Bangalore, measuring East to West about 70 feet and North to South 80 Feet in all admeasuring about 5600 sq.ft or thereabouts and bounded on :- **East By** : Suraj Ashtalakshmi Apartments bearing No: 41, **West By :** First main road, Seshadripuram, **North By** : Girls School Street and **South By** : Portion by Property NO. 42 and portion by Property bearing No: 194 now belong to Mr. Raghunath Rao K. (earlier belonging to Mr. Venkoba Rao Pawar).

Persons having any claim on the said property or opposing the sale by them, are requested to lodge their claim in writing with supporting documents with the undersigned **within 10 days** from the date of publication of this notice, failing which my clients will proceed with the purchase of the said property from them on the premise that there are no claims on the said property and claims if any, made thereafter will not be entertained

B.N.JAYADEVA, Advocate,
Unit No.203, II Floor, Brigade Links, No.54/1, 1st Main Road, Seshadripuram, Bangalore-560020.

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Quotations are invited from reputed CA Firm, Suppliers /Contractors for following works.
1. Appointment of "Statutory Auditors" for the year 2023-2024 for KRJS Institutions.
2. Interior works at KRJS MC Hall and President Cabin.
3. Construction of Arch at RJS School, Roopenaagrahara.
Submit your sealed quotations within 7 days from the date of this advertisement to General Secretary, KRJS.
More details
www.reddyjanasangha.org
or Contact: 99454 50345.
President General Secretary

REAL ESTATE SELLING
Sites
Kempegowda Layout
NADAPRABHU KEMPEGOWDA LAYOUT,3rd Block 40x60 W/F,30x40 E/F and 7th Block 20x30 S/F Contact:9686469799

REAL ESTATE BUYING
General
General
WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES
Teachers/ Professors
WANTED MONTESSORI Teachers and Science for PMS High School Bettahalasur near Yelahanka Contact:- 9632329017, 9880113895

BUSINESS
Business to Business
Business
WANTED BUSINESS PARTNER ATTRACTIVE INCOME CONTACT: 88925 01007/ 9606701007

PERSONAL
Change of Name
I,SAADAK ALI S/O KOTHAVAL HUSSAIN residing at Alipur Gauribidanur taluk, Chikkaballapura district Karnataka. Have changed my name to MIR SADIQ ALI my father correct name is HYDER HUSSAIN vide affidavit dated 14.05.2024 before notary M.S ANAND Gauribidanur.

I, SINDHU T R., have changed my minor daughter's name from AROUSHI KAMAL to AROUSHI VAINAVI vide affidavit dated: 16/05/2024 Before Notary Shreeshail B.Gobbani Bangalore.

LR CAMBRIDGE SCHOOL
63, 12th Cross, 5th Main, Wilson Garden, Bangalore-30
Phone: 080-48668918 / 9019006835
The Management, Principal, Staff, Wishes Heartly Congratulations to all the SSLC TOPPERS 2023-2024
FARHA FATHIMA 93% MAHESH KUMAR 89% TARUN D.R. 87%
PURVI B. 86% UJWAL NAYAKA 86% OM PRAKASH 82%
SINCHANA 81% MANOJ KUMAR 80% ASRA SADIYA 80%



CONNECT
ವೀಕ್ಷಿಸಿ 'ಮಂಜುನಾಥ್ ಅಡ್ವೊಕೇಟ್' ಎಂಬ ಯೂಟ್ಯೂಬ್ ಚಾನಲ್
YouTube SUBSCRIBE
ಉಚಿತ ಕಾನೂನು ಮಾಹಿತಿಯನ್ನು ಪಡೆಯಲು ಮತ್ತು ಎಲ್ಲಾ ರೀತಿಯ ಕಾನೂನು ಸಮಸ್ಯೆಗಳ ಪರಿಹಾರಕ್ಕಾಗಿ!?

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: • Computer Science • IS • Civil • Mechanical • Automobile • Electrical • Electronics • Fashion Tech • Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

PUBLIC NOTICE

Notice is hereby given to the general public that my client is intending to purchase all that immovable property described in the Schedule hereunder from its present owner Mr. M.V. KESHVAMURTHY, son of Mr. H. Veeraiah, residing at No.634, 19th Main, 24th Cross, BSK II Stage, Bangalore-560 070, who is representing that he is the sole and absolute owner of the Schedule property, he having acquired the same under a Gift deed and other than himself no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within **SEVEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property being land with building bearing No.33, PID No.82-24-33, formed by the Bangalore Development Authority, situated at 2nd Cross, Binnamangala 2nd Stage, Indiranagar, in the Corporation Ward No.82, New Ward No.80, Bangalore and bounded on the:

East by : Road; **West by** : Site bearing No.46; **North by** : Site bearing No.34; **South by** : Site bearing No.32;

measuring East to West 60 feet or 18.288 meters; North to South 40 feet or 12.192 meters; in all measuring a total extent of 2400 square feet or 222.968 square meters, together with a Old Ground and First Floor residential building having a total built up area of about 250.82 square meters.

Bangalore
Dated : 13.05.2024
A. NAGARAJA, Advocate & Notary, No. 6, KHB Buildings, II Block, 13th Cross, Indiranagar II Stage, Bangalore - 560 038.Ph:9448067511.

DH DECCAN HERALD ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164
*Conditions apply

CHANGE OF NAME
I, **Shanil Nassar,** holder of Indian Passport No: V7964621, issued at Dubai on 16/06/2022, permanent Resident of Alif, Pallithekkathil, Vakkom,Trivandrum, Pin: 695308, Kerala, India and presently residing at CornicheTower, Block-D, Flat No: 303, Al Beeshan Street, Khalidiya, Abu Dhabi, United Arab Emirates, do hereby change name of my minor Son **Aadam Shanil** holding Indian Passport No: Y8799108 issued at Dubai on 18/09/2023, from his old name **Aadam Shanil** to new name **Adam Shanil,** with immediate effect. Vide affidavit dated 15.05.2024 before notary B.M. Chandrashekar, Bangalore

CHANGE OF NAME
I, **SWATHI PARAMESH** Residing at No.63, Bairaweshwara Nagara, Nagarabhavi Main Road, Bengaluru- 560056 my name as mentioned **SWATHI PARAMESH** & also **SWAPNA** in the documents. Hereby declaring that above mentioned both names belongs to me., vide affidavit dated 06/02/2024 before notary S.T. Thippeswamy, Bengaluru.

I, KIRAN RACHAMADUGU residing at Bengluru-93 have changed my name as KIRAN BABU KRISHNAIAH RACHAMADUGU vide affidavit dated-16/5/2024 before Notary K.S.Bammappanavar Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ರೋಗ ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ಕ್ರಮ: ಸುರೋಳ್ಕರ್ ವಿಕಾಸ್ ಕಿಶೋರ್

13 ದಿನದಲ್ಲಿ 172 ಡೆಂಗಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಈ ತಿಂಗಳ 13 ದಿನಗಳಲ್ಲಿ 172 ಡೆಂಗಿ ಪ್ರಕರಣಗಳು ಪತ್ತೆಯಾಗಿದ್ದು, ಪೂರ್ವ ಹಾಗೂ ಮಹದೇವಪುರ ವಲಯದಲ್ಲಿ ಅತಿಹೆಚ್ಚು ಜನರಲ್ಲಿ ರೋಗ ಕಂಡುಬಂದಿದೆ.

ನಗರ ವ್ಯಾಪ್ತಿಯಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಡೆಂಗಿ ನಿಯಂತ್ರಣಕ್ಕೆ ಈಗಾಗಲೇ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ರಾಷ್ಟ್ರೀಯ ಡೆಂಗಿ ದಿನಾಚರಣೆ ಅಂಗವಾಗಿ ಪೂರ್ವ ವಲಯದ ರಾಮಸ್ವಾಮಿ ಪಾಳ್ಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಳೆ ಬಂದಾಗ ನೀರು ಸಂಗ್ರಹವಾಗಿ ಸೊಳ್ಳೆಗಳ ಸಂತತಿ ಹೆಚ್ಚಾಗಲಿದ್ದು, ಅದನ್ನು ಫಾಗಿಂಗ್ ಮತ್ತು ಔಷಧಿ ಸಿಂಪಡಿಸುವ ಮೂಲಕ ತಡೆಯಬೇಕು. ಹೂವಿನ ಕುಂಡ, ಬಿಸಾಕಿದ ಟೈರ್, ನೀರು ಸಂಗ್ರಹಿಸುವ ತೊಟ್ಟಿ, ನೀರಿನ ಬಾಟಲ್ ಸೇರಿದಂತೆ ಇತರೆಡೆ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಈ ಸಂಬಂಧ ಅಂತಹ ಜಾಗದಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಡೆಂಗಿ ದಿನಾಚರಣೆ ಅಂಗವಾಗಿ ರಾಮಸ್ವಾಮಿ ಪಾಳ್ಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು

ವಲಯ	ಡೆಂಗಿ ಪ್ರಕರಣ
(1ಮೇ 1ರಿಂದ 13ರವರೆಗೆ)	
ಮಹದೇವಪುರ	44
ಪೂರ್ವ	41
ದಕ್ಷಿಣ	34
ಬೊಮ್ಮನಹಳ್ಳಿ	23
ಪಶ್ಚಿಮ	16
ಆರ್.ಆರ್. ನಗರ	8
ಯಲಹಂಕ	6
ಒಟ್ಟು	172

ಡೆಂಗಿ ಪ್ರಕರಣಗಳನ್ನು ನಿಯಂತ್ರಿಸಲು ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಸೊಳ್ಳೆ ನಿಯಂತ್ರಣ ಕುರಿತು ಅರಿವು ಮೂಡಿಸುವ ಹಾಗೂ ಔಷಧಿ ಸಿಂಪಡಿಸುವ ಕೆಲಸ ಮಾಡಲಾಗುತ್ತಿದೆ. ಆಯಾ ವಲಯದ ವಾರ್ಡ್ ಮಟ್ಟದಲ್ಲಿ ಒಂದು ವಾರ್ಡ್‌ಗೆ 4 ಔಷಧಿ ಸಿಂಪಡಣೆ ಮಾಡುವ ತಂಡಗಳನ್ನು ನಿಯೋಜನೆ ಮಾಡಿದ್ದು, ತಾತ್ಕಾಲಿಕವಾಗಿ ಹಾಗೂ ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳನ್ನು ಗುರುತಿಸಿ ಫಾಗಿಂಗ್ ಮತ್ತು ಔಷಧಿ ಸಿಂಪಡಣೆ ಮಾಡಲಾಗುತ್ತದೆ ಎಂದು ಅವರು ಹೇಳಿದರು.

ಲಾರ್ವಾ ಸಮೀಕ್ಷೆ: ಈಡೀಸ್, ಈಜಿಪ್ಟೈ ಎಂಬ ಸೊಳ್ಳೆಗಳಿಂದ ಡೆಂಗಿ ರೋಗ ಹರಡುತ್ತದೆ. ಪ್ರಾರಂಭಿಕ ಹಂತದಲ್ಲೇ ಸೊಳ್ಳೆ ನಿಯಂತ್ರಣ ಮಾಡಲು ಲಾರ್ವಾ ಉತ್ಪತ್ತಿಯಾಗುವ ತಾಣಗಳನ್ನು ಗುರುತಿಸಿ ನಾಶಪಡಿಸಲಾಗುತ್ತದೆ.

ಕೊಳಚೆ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಣಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ನಮ್ಮ ಕ್ಲಿನಿಕ್ ವೈದ್ಯರ ತಂಡ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ತಂಡಗಳನ್ನು ರಚಿಸಿಕೊಂಡು ಮನೆ-ಮನೆ ಭೇಟಿ ನೀಡಿ ಡೆಂಗಿ ಪ್ರಕರಣಗಳ ಪತ್ತೆ ಹಚ್ಚುವ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಜಾಗೃತಿ ಅಭಿಯಾನ: ನಗರದಲ್ಲಿ ಡೆಂಗಿ ನಿಯಂತ್ರಿಸುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣ, ಆಯಾ ವಲಯಗಳ ವಾರ್ಡ್ ಮಟ್ಟದಲ್ಲಿ ಜಾಗೃತಿ ಜಾಥಾ ಹಾಗೂ ಪಾಲಿಕೆಯ ಕಸ ಸಂಗ್ರಹಿಸುವ ವಾಹನಗಳಲ್ಲಿ ಧ್ವನಿವರ್ಧಕಗಳ ಮೂಲಕ ಡೆಂಗಿ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿಸಲಾಗುತ್ತಿದೆ. ಜೊತೆಗೆ ಮನೆ ಮನೆಗೆ ಡೆಂಗಿ ನಿಯಂತ್ರಣದ ಕುರಿತು ಭಿತ್ತಿಪತ್ರಗಳನ್ನು ವಿತರಿಸಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ.

ಮುಖ್ಯ ಆರೋಗ್ಯಾಧಿಕಾರಿ ಡಾ. ಮದನಿ, ಪೂರ್ವ ವಲಯ ಆರೋಗ್ಯಾಧಿಕಾರಿ ಡಾ. ಭಾಗ್ಯಲಕ್ಷ್ಮಿ, ಡೆಂಗಿ ನೋಡಲ್ ಅಧಿಕಾರಿ ಸುಜಾತಾ, ಕಾಲೇಜು ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಲಮಂಡಳಿ ಫೋನ್ ಇನ್ ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರೊಂದಿಗೆ ಮೇ 17ರಂದು ಶುಕ್ರವಾರ ಬೆಳಿಗ್ಗೆ 9.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದಾಗಿದೆ. ದೂರವಾಣಿ 080-22945119 ಮತ್ತು 080-22229639.

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ
ದಿನಾಂಕ : 11-05-2024
www.ireps.gov.in
South Western Railway - SWR SWRRLY SWRRLY

ನೈಋತ್ಯ ರೈಲ್ವೆ
ದಿನಾಂಕ : 11-05-2024
www.ireps.gov.in
South Western Railway - SWR SWRRLY SWRRLY

₹16.27 ಕೋಟಿ ನಷ್ಟ ಉಂಟು ಮಾಡಿರುವ ಆರೋಪ

ಬಿಬಿಎಂಪಿ ಜಾಹೀರಾತು ವಿಭಾಗದ ಸಹಾಯಕ ಆಯುಕ್ತ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಹೀರಾತು ಪ್ರಕರಣದಲ್ಲಿ ಪಾಲಿಕೆಗೆ ₹16.27 ಕೋಟಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಿಬಿಎಂಪಿ ಜಾಹೀರಾತು ವಿಭಾಗದ ಸಹಾಯಕ ಆಯುಕ್ತ ಶ್ರೀಧರ್‌ಮೂರ್ತಿ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಜಾಹೀರಾತು ಸಂಸ್ಥೆ ಮತ್ತು ಸರ್ಕಾರದ ನಡುವಿನ ಪ್ರಕರಣದಲ್ಲಿ ಹೈಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಪಾಲಿಕೆ ವಕೀಲರಿಗೆ ಸಕಾಲದಲ್ಲಿ ಮಾಹಿತಿ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ನೀಡದೆ ಶ್ರೀಧರ್‌ಮೂರ್ತಿ ಕರ್ತವ್ಯಲೋಪ ಎಸಗಿದ್ದಾರೆ. ಆದ್ದರಿಂದ ನಾಗರಿಕ ಸೇವಾ ನಿಯಮಾವಳಿಗಳ ಪ್ರಕಾರ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಸರ್ಕಾರಿ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಜಾಹೀರಾತು ತೆರಿಗೆ ಮತ್ತು ಶುಲ್ಕವನ್ನು ಪಾವತಿಸುವಂತೆ ಬಿಬಿಎಂಪಿ ₹16.27 ಕೋಟಿ ಪಾವತಿಸುವಂತೆ ಜಾಹೀರಾತು ಸಂಸ್ಥೆಯೊಂದಕ್ಕೆ ಡಿಮ್ಯಾಂಡ್ ನೋಟಿಸ್ ಜಾರಿ ಮಾಡಿತ್ತು. ಆ ಸಂಸ್ಥೆಯ ಆಕ್ಷೇಪಣಾ ಅರ್ಜಿಗಳನ್ನೂ ತಿರಸ್ಕರಿಸಿ, ಅವರಿಗೆ ನೀಡಲಾಗಿದ್ದ ಅನುಮತಿ ಪತ್ರವನ್ನು ಪಾಲಿಕೆ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಸಂಸ್ಥೆ ಅರ್ಜಿ ಸಲ್ಲಿಸಿತ್ತು. ಈ ವಿಚಾರಣೆ ಸಂದರ್ಭದಲ್ಲಿ ವಕೀಲರಿಗೆ ಆದೇಶಗಳು ಸೇರಿದಂತೆ ಇತರೆ ಮಾಹಿತಿಗಳ ಕಡತವನ್ನು ನೀಡಬೇಕಾಗಿತ್ತು. ಈ ಕಡತವನ್ನು ಶ್ರೀಧರ್‌ಮೂರ್ತಿ ಅವರು ತೆಗೆದುಕೊಂಡು ಹೋಗಿದ್ದರು. ವಿಚಾರಣೆಯ ದಿನ ಕಡತವನ್ನು ವಕೀಲರಿಗೆ ತಲುಪಿಸಬೇಕಿತ್ತು.

ಆದರೆ, ವಕೀಲರು ನಿರಂತರವಾಗಿ ಶ್ರೀಧರ್‌ಮೂರ್ತಿ ಅವರನ್ನು ಸಂಪರ್ಕಿಸಲು ಪ್ರಯತ್ನ ಮಾಡಿದರೂ ಅವರು ಸಿಗಲಿಲ್ಲ. ವಿಚಾರಣೆ ಮುಗಿದರೂ ಕೊನೆಗೂ ಕಡತ ವಕೀಲರ ಕೈಗೆ ಸಿಗಲಿಲ್ಲ. ಇದರಿಂದ ನ್ಯಾಯಾಲಯ ಪಾಲಿಕೆಯ ಆದೇಶಕ್ಕೆ ತಡೆಯಾಜ್ಞೆ ನೀಡಿದೆ.

ಪ್ರಕರಣದಲ್ಲಿ ಶ್ರೀಧರ್‌ಮೂರ್ತಿ ಅವರು ಕಡತವನ್ನು ವಕೀಲರಿಗೆ ಸಕಾಲದಲ್ಲಿ ನೀಡದೆ ಕರ್ತವ್ಯ ನಿರ್ವಹಣೆಯಲ್ಲಿ ತೀವ್ರ ನಿರ್ಲಕ್ಷ್ಯ ಎಸಗಿದ್ದಾರೆ ಎಂದು ಅಮಾನತು ಆದೇಶದಲ್ಲಿ ವಿವರಿಸಲಾಗಿದೆ.

ನಗರದಲ್ಲಿ ಇಂದು

ಅನುಪಮಾ ನಿರಂಜನ ಅವರ ಜನ್ಮದಿನ, 'ಡಾ. ಅನುಪಮಾ ನಿರಂಜನ' ಪ್ರಶಸ್ತಿ ಪ್ರದಾನ: ಎಚ್.ಎಲ್. ಪುಷ್ಪ, ಬಹುಮಾನ ವಿತರಣೆ: ರಾಮಣ್ಣ ಎಚ್.ಕೋಡಿಹೊಸಹಳ್ಳಿ, ಆಶಯ ನುಡಿ: ಎ.ಎಸ್. ನಾಗರಾಜಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಬಾ.ಹ. ರಮಾಕುಮಾರಿ, ಕಥಾ ಸ್ಪರ್ಧೆ ವಿಜೇತರು: ಬಿ. ಸತ್ಯವತಿ ಭಟ್ ಕೊಳಚಪ್ಪು, ಗಾಯತ್ರಿ ಕುಲಕರ್ಣಿ, ರಾಧಿಕಾ ವಿಶ್ವನಾಥ್, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಬಿ.ಎಂ.ಶ್ರೀ ಕಲಾಭವನ, 3ನೇ ಮುಖ್ಯರಸ್ತೆ, ಎನ್. ಆರ್. ಕಾಲೊನಿ, ಸಂಜೆ 5

ಹೆಚ್.ಎಲ್.ಪುಷ್ಪ

ಉಚಿತ ರಕ್ತ ತಪಾಸಣಾ ಶಿಬಿರ: **ಆಯೋಜನೆ:** ಸಂಜೀವಿನಿ ಕಲ್ಪ ಫೌಂಡೇಷನ್, ಮುತ್ತೂಟ್ ಸ್ನೇಹಾಶ್ರಯ, ಸೀನಿಯರ್ಸ್ ಸಿಟಿಜನ್ಸ್ ಫೋರಂ, ಸ್ಥಳ: ಶಕ್ತಿಗಣಪತಿ ದೇವಸ್ಥಾನದ ಆವರಣ, ವಿದ್ಯಾನಗರ, ಬನಶಂಕರಿ 3ನೇ ಹಂತ, ಬೆಳಿಗ್ಗೆ 7.30

ಶ್ಯಾಮಸುಂದರ ದಾಸರ ಆರಾಧನಾ ಮಹೋತ್ಸವ, ಮಂಗಳಾಂಗಹರಿ ವಿಠಲ ಧ್ವನಿ ಸುರುಳಿ ಬಿಡುಗಡೆ: **ಅತಿಥಿಗಳು:** ಗುರುರಾಜ್ ಪೋಶೆಟ್ಟಿಹಳ್ಳಿ, ಕೃಷ್ಣಮೂರ್ತಿ ಜಿ.ಎಸ್., ಮಧುಸೂದನ್ ವಿ. ರಾವ್, ಅಧ್ಯಕ್ಷತೆ: ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ, ಆಯೋಜನೆ: ದಾಸವಾಣಿ ಕರ್ನಾಟಕ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, 13ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಗೋಕಲ 1ನೇ ಹಂತ, ಮತ್ತಿಕೆರೆ, ಬೆಳಿಗ್ಗೆ 10ರಿಂದ

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ತೋಮಾಲ ಸೇವೆ, ರಥ ಶುದ್ಧಿ, ಅರವಂಟಿಗೆ ಸೇವೆ, ರಥೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ, ಬೆಳಿಗ್ಗೆ 10ರಿಂದ

ಅಣ್ಣಮ್ಮ ದೇವಿಯ ವಾರ್ಷಿಕೋತ್ಸವ: ಅಣ್ಣಮ್ಮ ದೇವಿ ಉತ್ಸವ, ಸಾಮೂಹಿಕ ಲಲಿತಾ ಸಹಸ್ರನಾಮ, ಅರ್ಚನಾ ಮತ್ತು ಸುಮಂಗಲಿ ಪೂಜೆ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ನವಭಾರತ ಯುವಕರ ಸಂಘ, ನಂ. 487, 8ನೇ ಮುಖ್ಯರಸ್ತೆ, ಕುಮಾರಸ್ವಾಮಿ ದೇವಸ್ಥಾನ ರಸ್ತೆ, ಹನುಮಂತನಗರ, ಸಂಜೆ 4ರಿಂದ

'ಟಿ.ಎಂ. ಬಾಲಕೃಷ್ಣ ಅವರಿಗೆ ನುಡಿನಮನ', 'ಅಲ್ಲೇ ಇದ್ದೋರು' ನಾಟಕ ಪ್ರದರ್ಶನ: ಭಾಗವಹಿಸುವವರು: ವೂಡೇ ಪಿ. ಕೃಷ್ಣ, ವ.ಚ. ಚನ್ನೇಗೌಡ, ಎಸ್.ಎಲ್.ಎನ್.ಸ್ವಾಮಿ, ಕೋದಂಡರಾಮ, ಆಶಾ ರಾಣಿ, ಕುವೆಂಪು ಪ್ರಕಾಶ್, ಓಹಿಲೇಶ್ ಲಕ್ಷ್ಮಣ್, ದರ್ಶನ, ಪದ್ಮಾವತಿ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸಾಂಸ್ಕೃತಿಕ ಕಲಾ ಕುಟೀರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

'ನೃತ್ಯ ವಸಂತಂ' ನೃತ್ಯೋತ್ಸವ-2024: 'ಯುವ ವಸಂತಂ' ಪ್ರದರ್ಶನ, ಭರತನಾಟ್ಯ ಪ್ರದರ್ಶನ: ಮಂಜು ವಿ. ನಾಯರ್, ರಕ್ಷಾ ಕಾರ್ತಿಕ್, ಮೋಹಿನಿ ಅಟ್ಟಂ ಪ್ರದರ್ಶನ: ಶಾಲಿನಿ, ಲಥಿಕಾ, ಆಯೋಜನೆ: ಭಾರತ ಕಲಾಗ್ರಾಮ, ಸ್ಥಳ: ಶುಕ್ರ ಸಭಾಂಗಣ, 16ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30ರಿಂದ

ವಾದ್ಯವೈಭವ-2024: ಸಂಗೀತ ಕಛೇರಿ: ವೀಣೆ: ರಾಜಲಕ್ಷ್ಮಿ ಎಸ್., ಮೃದಂಗ: ಆರ್.ಎಸ್.ಆರ್. ಶ್ರೀಕಾಂತ್, ಘಟ: ಎಸ್. ಮಂಜುನಾಥ್, ಕೊಳಲು: ಎಲ್.ವಿ. ಮುಕುಂದ್, ಪಿಟೀಲು: ವಿ. ನಳಿನಾ ಮೋಹನ್, ಮೃದಂಗ: ಎ. ರೇಣುಕಾಪ್ರಸಾದ್, ಘಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 6ರಿಂದ

'ವೇದವ್ಯಾಸ ವೈಭವ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಉಪಸ್ಥಿತಿ: ವಿದ್ಯೇಶತೀರ್ಥ ಶ್ರೀಪಾದ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಭಾಗವತಕೀರ್ತಿಧಾಮ, ಭಂಡಾರಕೇರಿ ಮಠ, ಗಿರಿನಗರ, ಸಂಜೆ 6

'ಗುಂಡಾಯಣ' ನಾಟಕ ಪ್ರದರ್ಶನ: ರಚನೆ: ನಾ. ಕಸ್ತೂರಿ, ನಿರ್ದೇಶನ: ಜೋಸೆಫ್, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

WONDERLA PARKS AND RESORTS

Wonderla Holidays Limited
Registered Office : 28th K.M., Mysore Road, Bengaluru 562 109; Ph: 080-22010311/322/333
Fax 080-22010324 Website: www.wonderla.com; E-mail: mail.blr@wonderla.com
CIN:L55101KA2002PLC031224

STATEMENT OF FINANCIAL RESULTS FOR THE QUARTER AND YEAR ENDED 31st MARCH, 2024 (₹in lakhs except EPS data)

SL. No.	Particulars	Quarter ended			Year ended	
		31st March 2024	31st December 2023	31st March 2023	31st March 2024	31st March 2023
		Refer Notes 1 & 3	Refer Note 3	Refer Note 3	(Audited) Refer Note 1	(Audited)
1	Total Income from Operations (net)	10,483.14	12,952.12	11,263.36	50,602.52	45,242.41
2	Net Profit for the period (before Tax, Exceptional and/or Extraordinary items)	3,028.96	5,032.76	4,722.50	21,132.20	19,911.42
3	Net Profit for the period before tax (after Exceptional and/or Extraordinary items)	3,028.96	5,032.76	4,722.50	21,132.20	19,911.42
4	Net Profit for the period after tax (after Exceptional and/or Extraordinary items)	2,260.88	3,735.76	3,505.06	15,796.13	14,890.37
5	Total Comprehensive Income for the period [Comprising Profit for the period (after tax) and Other Comprehensive Income / (Loss) (after tax)]	2,265.18	3,743.27	3,523.12	15,750.27	14,888.73
6	Equity Share Capital (Paid Up)	5,657.34	5,657.34	5,655.92	5,657.34	5,655.92
7	Earnings per share (face value of Rs.10/- each) (not annualised for the quarters and six months)					
	Basic:	4.00	6.60	6.20	27.93	26.33
	Diluted:	3.98	6.60	6.20	27.84	26.33

Notes:
1. The above financial results for the quarter and year ended 31st March, 2024 have been reviewed by the Audit Committee and approved by the Board of Directors at their meeting held on 16th May 2024.
2. The Statement has been prepared in accordance with Indian Accounting Standards ('Ind AS') prescribed under section 133 of the Companies Act, 2013 read with the relevant rules thereunder and in terms of SEBI (Listing Obligations and Disclosure Requirements) Regulations, 2015, as amended.
3. The figures for the quarter ended 31st March 2024 are the balancing figures between the audited figures for the year ended 31st March 2024 and the unaudited figures for the nine months ended 31st December 2023 and the figures for the quarter ended 31st March 2023 are the balancing figures between the audited figures for the year ended 31st March 2023 and the unaudited figures for the nine months ended 31st December 2022. The figures for the quarter ended December 2023 and 31st December 2022 have not been audited but have been subject to limited review by Statutory Auditors.

Place: Bengaluru
Date: 16.05.2024
For Wonderla Holidays Limited
Sd/-
Managing Director

ಸಮರೋಪಾದಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತರ ಆದೇಶ

ರಸ್ತೆ ಗುಂಡಿ ಮುಚ್ಚಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮುಖ್ಯ, ಉಪ ಮುಖ್ಯರಸ್ತೆ ಹಾಗೂ ವಾರ್ಡ್ ರಸ್ತೆಗಳಲ್ಲಿರುವ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಮಳೆ ಮುಂಜಾಗ್ರತಾ ಕ್ರಮ, ರಸ್ತೆ ಗುಂಡಿ ಮುಚ್ಚುವುದು ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಗುರುವಾರ ನಡೆದ ವಿಡಿಯೊ ಸಂವಾದದಲ್ಲಿ ಅವರು ಆದೇಶ ನೀಡಿದರು.

ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಡಾಂಬರು ಏಜೆನ್ಸಿಗಳಿಂದ ಹಾಟ್ ಮಿಕ್ಸ್ ಹಾಗೂ ಕೋಲ್ಡ್ ಮಿಕ್ಸ್ ಪಡೆದು ಹಗಲು-ರಾತ್ರಿ ರಸ್ತೆಗುಂಡಿಗಳನ್ನು ಮುಚ್ಚಬೇಕು. ದೋಷಮುಕ್ತ ಅವಧಿಯಲ್ಲಿರುವ (ಡಿಎಲ್‌ಪಿ) ರಸ್ತೆಗಳಲ್ಲಿ ಗುಂಡಿಗಳಾಗಿದ್ದರೆ ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ಮುಚ್ಚಿಸಬೇಕು ಎಂದರು.

ಎಂಟು ವಲಯಗಳ ಆಯುಕ್ತರು ರಸ್ತೆ ಗುಂಡಿಗಳು ಬಿದ್ದಿರುವುದನ್ನು ಪರಿಶೀಲಿಸಿ, ದುರಸ್ತಿಗೆ ಕ್ರಮ ಕೈಗೊಳ್ಳಬೇಕು. ಆಯಾ ವಲಯ ವ್ಯಾಪ್ತಿಯಲ್ಲಿ ಎಷ್ಟು ಡಾಂಬರು ಅವಶ್ಯಕತೆಯಿದೆ ಎಂಬುದನ್ನು ಏಜೆನ್ಸಿಗಳಿಗೆ ತಿಳಿಸಿ ಅಗತ್ಯವಿರುವಷ್ಟು ಡಾಂಬರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಮಳೆಗಾಲದಲ್ಲಿ ರಸ್ತೆಗಳನ್ನು ಅಗೆದರೆ ಸಾಕಷ್ಟು ಸಮಸ್ಯೆಯಾಗಲಿದ್ದು, ಆಯಾ ವಲಯ ವ್ಯಾಪ್ತಿಯಲ್ಲಿ ಯಾವುದೇ ಸಂಸ್ಥೆಗಳು ರಸ್ತೆ ಕತ್ತರಿಸದಂತೆ ಎಚ್ಚರಿಕೆ ವಹಿಸಬೇಕು. ಎಲ್ಲಿಯೂ ಅನಧಿಕೃತವಾಗಿ ರಸ್ತೆ ಕತ್ತರಿಸದಂತೆ ನಿಗಾವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾತ್ಕಾಲಿಕ ವ್ಯವಸ್ಥೆ: 198 ಪ್ರವಾಹಪೀಡಿತ ಪ್ರದೇಶಗಳಲ್ಲಿ 124 ಕಡೆ ಯಾವುದೇ ಸಮಸ್ಯೆಯಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉಳಿದ 74 ಸ್ಥಳಗಳ ಪೈಕಿ 24 ಕಡೆಯೂ ಯಾವುದೇ ಸಮಸ್ಯೆಯಾಗದಂತೆ ಕ್ರಮವಹಿಸಲಾಗುತ್ತಿದ್ದು, ಉಳಿದ 50 ಸ್ಥಳಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಸಭೆಯಲ್ಲಿ ಮಾಹಿತಿ ನೀಡಿದರು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ವಿಪತ್ತು ನಿರ್ವಹಣಾ ವಿಭಾಗದ ವಿಶೇಷ ಆಯುಕ್ತ ಸುರಲ್ಕರ್ ವಿಕಾಸ್ ಕಿಶೋರ್, ಎಲ್ಲಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು ಪಾಲ್ಗೊಂಡಿದ್ದರು.

ರಾಜಕಾಲುವೆ ಒತ್ತುವರಿ ವಿವರ

ವಲಯ	ಒಟ್ಟು ಒತ್ತುವರಿ ಪ್ರಕರಣ	2023ರಿಂದ ಏ.2ರವರೆಗೆ ಒತ್ತುವರಿ	ತೆರವು	ತೆರವು ಬಾಕಿ
ಮಹದೇವಪುರ	1,651	75	1,203	523
ಯಲಹಂಕ	558	308	517	379
ದಾಸರಹಳ್ಳಿ	176	246	56	366
ಬೊಮ್ಮನಹಳ್ಳಿ	368	175	339	204
ಪೂರ್ವ	237	24	135	126
ಕೋರಮಂಗಲ ಕಣಿವೆ	10	110	10	110
ಆರ್.ಆರ್. ನಗರ	75	71	42	104
ಪಶ್ಚಿಮ	48	74	27	95
ದಕ್ಷಿಣ	5	51	0	56
ಒಟ್ಟು	3,158	1,134	2,326	1,963

ಬಿಬಿಎಂಪಿ ಸುದ್ದಿ

ರಾಜಕಾಲುವೆ ಒತ್ತುವರಿ ಹೆಚ್ಚಳ

ಬಿಬಿಎಂಪಿ ಗುರುತಿಸಿದ್ದ ರಾಜಕಾಲುವೆ ಒತ್ತುವರಿ ಪ್ರಕರಣಗಳು ಇದೀಗ ಹೆಚ್ಚಾಗಿದ್ದು, ಅವುಗಳ ಒತ್ತುವರಿ ತೆರವುಗೊಳಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದ್ದಾರೆ.

2023ರ ಆಗಸ್ಟ್ 28ರಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ 3,158 ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿತ್ತು. ರಾಜಕಾಲುವೆ ಒತ್ತುವರಿ ಬಗ್ಗೆ ಮಾಹಿತಿ ನೀಡಲು ಸಾರ್ವಜನಿಕರಿಗೆ ಅವಕಾಶ ನೀಡಿದ ನಂತರ, ಹೊಸದಾಗಿ 1,134 ಒತ್ತುವರಿ ಪ್ರಕರಣಗಳು ದಾಖಲಾಗಿವೆ.

2024ರ ಫೆಬ್ರುವರಿ 2ರಂತೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 2,326 ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡಲಾಗಿದೆ. ಆದರೆ ಹಳೆಯ 829 ಪ್ರಕರಣಗಳ ಒತ್ತುವರಿ ಹಾಗೆಯೇ ಉಳಿದಿದೆ. 162 ಪ್ರಕರಣಗಳು ನ್ಯಾಯಾಲಯದಲ್ಲಿವೆ. 1,639 ಪ್ರಕರಣಗಳಲ್ಲಿ ಒತ್ತುವರಿಯಾಗಿದ್ದರೂ ಇದರ ತೆರವಿಗೆ ಸಂಬಂಧಿಸಿದ ತಹಶೀಲ್ದಾರ್ ಅವರಿಗೆ ಆದೇಶ ಬಂದಿಲ್ಲ. 162 ಪ್ರಕರಣಗಳಲ್ಲಿ ಒತ್ತುವರಿ ತೆರವಿಗೆ ತಹಶೀಲ್ದಾರ್ ಅವರು ಆದೇಶ ನೀಡಿದ್ದರೂ ಅದನ್ನು ಬಿಬಿಎಂಪಿ ಅಧಿಕಾರಿಗಳು ತೆರವು ಮಾಡಿಲ್ಲ. ಮಹದೇವಪುರದಲ್ಲಿ 74, ಯಲಹಂಕದಲ್ಲಿ 48, ಬೊಮ್ಮನಹಳ್ಳಿಯಲ್ಲಿ 16, ದಾಸರಹಳ್ಳಿಯಲ್ಲಿ 12 ಒತ್ತುವರಿಗಳ ತೆರವಿಗೆ ಆದೇಶವಿದ್ದರೂ, ತೆರವಾಗಿಲ್ಲ.

ರಾಜಕಾಲುವೆಗಳ ಸ್ವಚ್ಛತೆಗೆ ಸೂಚನೆ

ನಗರದಲ್ಲಿರುವ ಪ್ರಥಮ, ದ್ವಿತೀಯ ರಾಜಕಾಲುವೆಗಳಲ್ಲಿ ಹೂಳೆತ್ತುವ ಮೂಲಕ ಸ್ವಚ್ಛತೆ ಕಾಪಾಡಬೇಕು. ಎಲ್ಲಿಯೂ ನೀರು ನಿಲ್ಲದೆ ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ರಾಜಕಾಲುವೆಯಿಂದ ತೆಗೆದ ಹೂಳನ್ನು ಅಲ್ಲಿಯೇ ಬಿಡದೆ ಕೂಡಲೆ ತೆರವುಗೊಳಿಸಬೇಕು. ರಾಜಕಾಲುವೆಗಳ ಒತ್ತುವರಿಯನ್ನೂ ತೆರವುಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದರು. ರಸ್ತೆ ಬದಿಗಳಲ್ಲಿ ಕಸ ಸುರಿಯುವ ಸ್ಥಳಗಳಿದ್ದು(ಬ್ಲಾಕ್ ಸ್ಪಾಟ್) ಘನತ್ಯಾಜ್ಯ ವಿಭಾಗವು ಈ ಸ್ಥಳಗಳನ್ನು ಸ್ವಚ್ಛಗೊಳಿಸಬೇಕು. ಮತ್ತೆ ಕಸ ಹಾಕದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಜಲಮಂಡಳಿ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಅವರನ್ನು ಎಫ್‌ಕೆಸಿಸಿಐ ಪದಾಧಿಕಾರಿಗಳು ಸನ್ಮಾನಿಸಿದರು

ಜುಲೈನಿಂದ ಸಮರ್ಪಕವಾಗಿ ನೀರು

ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ನೀರಿನ ಸಮಸ್ಯೆಯನ್ನು ಜಲಮಂಡಳಿ ಸಮರ್ಥವಾಗಿ ನಿಭಾಯಿಸಿದ್ದು, ಈ ವರ್ಷದ ಜುಲೈ 1ರ ವೇಳಗೆ ನಗರಕ್ಕೆ ಅಗತ್ಯವಾದ ನೀರು ಪೂರೈಕೆಯಾಗಲಿದೆ. 2026ರ ವೇಳೆಗೆ ಅಗತ್ಯಕ್ಕಿಂತ ಹೆಚ್ಚಿನ ನೀರು (ಸರ್‌ಪ್ಲಸ್) ಲಭ್ಯವಾಗಲಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಪದಾಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಗುರುವಾರ ನಡೆದ ಸಂವಾದದಲ್ಲಿ ಮಾಹಿತಿ ನೀಡಿದ ಅವರು, ನೀರಿನ ಪೋಲು ನಿಯಂತ್ರಣ, ಕೈಗಾರಿಕೆಗಳಿಗೆ ಸಂಸ್ಕರಿಸಿದ ನೀರು, ಕೊಳವೆಬಾವಿಗಳ ನಿಯಂತ್ರಣಕ್ಕೆ ಎಐ ನಿಯಂತ್ರಿತ ಚಾಟ್‌ಬೋಟ್ಸ್ ಅಳವಡಿಕೆಯಿಂದ ನಗರದಲ್ಲಿ ನೀರಿನ ಸಮಸ್ಯೆಯನ್ನು ನಿಭಾಯಿಸಲಾಗಿದೆ' ಎಂದರು.

ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಸಂಸ್ಕರಿಸಿದ ನೀರಿನ ಬಳಕೆ ಕಡ್ಡಾಯಗೊಳಿಸಿದ್ದರಿಂದ ನಿತ್ಯವೂ 67.5 ಲಕ್ಷ ಲೀಟರ್ ನೀರು ಜಲಮಂಡಳಿಗೆ ಉಳಿತಾಯವಾಗಿದೆ ಎಂದು ಹೇಳಿದರು.

'ನೀರು ಉಳಿತಾಯ ಮತ್ತು ಸದ್ಬಳಕೆ, ಸಂಸ್ಕರಿಸಿದ ನೀರಿನ ಬಳಕೆ ಹಾಗೂ ಮಳೆ ನೀರಿನ ಸಮರ್ಪಕ ಬಳಕೆಯನ್ನು ಪ್ರೋತ್ಸಾಹಿಸುವ ಪಂಚಸೂತ್ರಗಳನ್ನು ಅಳವಡಿಸಿಕೊಂಡು 'ವಾಟರ್ ಸರ್‌ಪ್ಲಸ್ ಬೆಂಗಳೂರು' ಮಾಡಲು ಕೈಗಾರಿಕೋದ್ಯಮಿಗಳು ಕೈಜೋಡಿಸಬೇಕು ಎಂದು ಕರೆ ನೀಡಿದರು.

'ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪ್ರತ್ಯೇಕ ಪೈಪ್‌ಲೈನ್ ಮೂಲಕ ಸಂಸ್ಕರಿಸಿದ ನೀರು ನೀಡಲು ಅಗತ್ಯ ತಯಾರಿಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪೀಣ್ಯ ಕೈಗಾರಿಕಾ ಪ್ರದೇಶ ಹೊರತುಪಡಿಸಿ ಬೇರೆ ಪ್ರದೇಶಗಳಲ್ಲಿರುವ ಕೈಗಾರಿಕೆಗಳಿಗೆ ಟ್ಯಾಂಕರ್ ಮೂಲಕ ಕಡಿಮೆ ದರದಲ್ಲಿ ಸಂಸ್ಕರಿಸಿದ ನೀರನ್ನು ನೀಡಲು ಸಿದ್ಧರಿದ್ದೇವೆ. ಜಲಮಂಡಳಿಯ ಬಳಿ ಸುಮಾರು 1200 ಎಂ.ಎಲ್.ಡಿ ಯಷ್ಟು ಸಂಸ್ಕರಿಸಿದ ನೀರು ಲಭ್ಯವಿದೆ. ಇದರ ಬಳಕೆಯಿಂದ ಕಾವೇರಿ ನೀರಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಸಣ್ಣ ಕೈಗಾರಿಕೆಗಳಿಗೆ ಹಣದ ಉಳಿತಾಯವೂ ಆಗಲಿದೆ' ಎಂದು ಹೇಳಿದರು.

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, 'ನೀರಿನ ಸದ್ಬಳಕೆ ಮತ್ತು ಉಳಿತಾಯ ಹಾಗೂ ಸಂಸ್ಕರಿಸಿದ ನೀರಿನ ಬಳಕೆಯನ್ನು ಪ್ರೋತ್ಸಾಹಿಸುವಂತಹ ಪಂಚಸೂತ್ರಗಳ ಕ್ರಮಗಳನ್ನು ನಮ್ಮ ಕೈಗಾರಿಕಾ ಸಂಸ್ಥೆಯ ಸದಸ್ಯರುಗಳು ಅಳವಡಿಸಿಕೊಳ್ಳಲಿದ್ದಾರೆ' ಎಂದು ತಿಳಿಸಿದರು.

ಸಂವಾದದಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳಾದ ಟಿ. ಸಾಯಿರಾಂ ಪ್ರಸಾದ್, ಎಂ.ಜಿ ಬಾಲಕೃಷ್ಣ, ಉಪಾಧ್ಯಕರಾದ ಉಮಾ ರೆಡ್ಡಿ, ಗೋಪಾಲ್ ರೆಡ್ಡಿ ಉಪಸ್ಥಿತರಿದ್ದರು.

'ರಾಜಕಾಲುವೆ ಒತ್ತುವರಿ ತೆರವುಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಸುರಿಯುತ್ತಿರುವ ಅಲ್ಪಸ್ವಲ್ಪ ಮಳೆಗೆ ರಸ್ತೆಗಳಲ್ಲಿಯೇ ನೀರು ನಿಲ್ಲುತ್ತಿದೆ. ಕಾಲುವೆಗಳೆಲ್ಲ ಉಕ್ಕಿ ಹರಿಯುತ್ತಿರುವುದನ್ನು ನೋಡಿದರೆ ಪುನಃ ಎರಡು ವರ್ಷಗಳ ಹಿಂದಿನ ಭಾರಿ ನೆರೆ ಪರಿಸ್ಥಿತಿ ಬರುವ ಸಾಧ್ಯತೆ ಇದೆ. ಆದ್ದರಿಂದ, ಒತ್ತುವರಿಯಾಗಿರುವ ರಾಜಕಾಲುವೆಗಳನ್ನು ಸರ್ಕಾರ ಕೂಡಲೇ ತೆರವುಗೊಳಿಸಬೇಕು ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಆಗ್ರಹಿಸಿದ್ದಾರೆ.

ಈ ಬಗ್ಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ನಗರದಲ್ಲಿ ಒತ್ತುವರಿ ಆಗಿರುವ ರಾಜಕಾಲುವೆ ತೆರವುಗೊಳಿಸುವ ಮೂಲಕ ನೆರೆ ಭೀತಿಯಿಂದ ಬೆಂಗಳೂರಿನ ಜನರನ್ನು ರಕ್ಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಎರಡು ವರ್ಷದ ಹಿಂದೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಶಾಶ್ವತ ಪರಿಹಾರದ ನಿಟ್ಟಿನಲ್ಲಿ ಒತ್ತುವರಿ ತೆರವುಗೊಳಿಸಬೇಕು ಎಂದು ಎಎಪಿ ಸೇರಿದಂತೆ ಅನೇಕ ಸಂಘಟನೆಗಳು ತೀವ್ರ ಹೋರಾಟ ನಡೆಸಿದ್ದವು.

'ಅಂದು ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್, ಒತ್ತುವರಿ ತೆರವುಗೊಳಿಸದೆ ಬೆಂಗಳೂರಿಗರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಶೇ 40ರಷ್ಟು ಕಮಿಷನ್ ಸರ್ಕಾರ ಎಂದು ಆಡಳಿತ ಪಕ್ಷ ಬಿಜೆಪಿ ವಿರುದ್ಧ ಆಪಾದಿಸಿತ್ತು. ಆದರೆ ಅಧಿಕಾರಕ್ಕೆ ಬಂದು ವರ್ಷವಾದರೂ ಒತ್ತುವರಿ ತೆರವು ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಕ್ರಮ ಕೈಗೊಂಡಿಲ್ಲ ಏಕೆ? ಒತ್ತುವರಿ ತೆರವು ಎಂಬುದು ಬಡವರ ಮನೆಗಷ್ಟೇ ಸೀಮಿತವೇ? ರಾಜಕಾರಣಿಗಳು, ಹಣ ಹೊಂದಿರುವವರು, ಬಿಲ್ಡರ್ ಸಂಸ್ಥೆಗಳ ಕಟ್ಟಡಗಳನ್ನು ಏಕೆ ತೆರವುಗೊಳಿಸಿಲ್ಲ? ಎಂದು ಚಂದ್ರು ಅವರು ಪತ್ರದಲ್ಲಿ ಪ್ರಶ್ನಿಸಿದ್ದಾರೆ.

'ಯಾವ ಪ್ರಭಾವಿ ವ್ಯಕ್ತಿಗಳಿಗೂ ಮಣಿಯದೇ ರಾಜಕಾಲುವೆ ಒತ್ತುವರಿ ತೆರವುಗೊಳಿಸಬೇಕು. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಎಎಪಿ ಬೃಹತ್ ಹೋರಾಟ ಮಾಡಲಿದೆ' ಎಂದು ಎಚ್ಚರಿಸಿದರು.

ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡ ಭಾವಚಿತ್ರ ಇರುವ ಗಿಫ್ಟ್ ಬಾಕ್ಸ್ ಜಪ್ತಿ

ಕೊರಿಯರ್‌ನಲ್ಲಿ ಮತದಾರರಿಗೆ ಉಡುಗೊರೆ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬೆಂಗಳೂರು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡ ಅವರು ಕೊರಿಯರ್ ಮೂಲಕ ಪದವೀಧರ ಮತದಾರರಿಗೆ ಕಳುಹಿಸಿದ್ದಾರೆ ಎನ್ನಲಾದ ಉಡುಗೊರೆಗಳನ್ನು ಚುನಾವಣಾ ನಿಗಾ ಘಟಕದ (ಎಫ್‌ಎಸ್‌ಟಿ) ಸಿಬ್ಬಂದಿ ಗುರುವಾರ ಜಪ್ತಿ ಮಾಡಿಕೊಂಡಿದ್ದಾರೆ.

ಖಚಿತ ಸುಳಿವಿನ ಮೇರೆಗೆ ಪಟ್ಟಣದ ಹೊಸ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಡಿಟಿಡಿಸಿ ಕೊರಿಯರ್ ಕಚೇರಿ ಮೇಲೆ ದಾಳಿ ನಡೆಸಿದ ಚುನಾವಣಾ ನಿಗಾ ಘಟಕದ ಅಧಿಕಾರಿಗಳ ತಂಡವು ಮತದಾರರ ವಿಳಾಸಕ್ಕೆ ರವಾನೆ ಆಗಬೇಕಿದ್ದ ಉಡುಗೊರೆಗಳ ಬಾಕ್ಸ್‌ಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಡಿನ್ನರ್ ಸೆಟ್ ಸೇರಿದಂತೆ ಅಡುಗೆ ಮನೆ ಸಾಮಗ್ರಿಗಳಿರುವ 109ಕ್ಕೂ ಹೆಚ್ಚು ಬಾಕ್ಸ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರತಿ ಬಾಕ್ಸ್ ಮೇಲೆ ರಾಮೋಜಿ ಗೌಡ ಭಾವಚಿತ್ರ ಅಚ್ಚು ಹಾಕಿಸಲಾಗಿದೆ. ಮತ ನೀಡುವಂತೆ ಮನವಿ ಮಾಡಿದ ಕರಪತ್ರ ಅಂಟಿಸಲಾಗಿದೆ.

ಉಡುಗೊರೆ ಬಾಕ್ಸ್ ಮೇಲೆ ಕಂಡು ಬಂದ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡ ಭಾವಚಿತ್ರ

'ಕೊರಿಯರ್ ಮೂಲಕ ಮತದಾರರ ಮನೆಗೆ ನೇರವಾಗಿ ಉಡುಗೊರೆ ತಲುಪಿಸುವ ತಂತ್ರ ರೂಪಿಸಲಾಗಿತ್ತು. ಅದನ್ನು ವಿಫಲಗೊಳಿಸಲಾಗಿದೆ. ಈ ಉಡುಗೊರೆ ಬಾಕ್ಸ್‌ಗಳು ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡರಿಗೆ ಸೇರಿವೆ ಎಂಬುವುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಮೋಜಿ ಗೌಡ ವಿರುದ್ಧ ದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೇಕಲ್‌ನಲ್ಲೂ ಸಾವಿರಾರು ಬಾಕ್ಸ್ ಜಪ್ತಿ

ಆನೇಕಲ್: ಪದವೀಧರ ಕ್ಷೇತ್ರದ ಮತದಾರರಿಗೆ ಹಂಚಲು ತಾಲ್ಲೂಕಿನ ನೆರಳೂರು ಸಮೀಪದ ತಿರುಮಗೊಂಡನಹಳ್ಳಿಯ ಡಿಟಿಡಿಸಿ ಕೊರಿಯರ್ ಗೋದಾಮಿನಲ್ಲಿದ್ದ ನೂರಾರು ಗಿಫ್ಟ್ ಬಾಕ್ಸ್‌ಗಳನ್ನು ಬಿಜೆಪಿ ಕಾರ್ಯಕರ್ತರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಈ ಗಿಫ್ಟ್ ಬಾಕ್ಸ್ ಕೂಡ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡ ಅವರಿಗೆ ಸೇರಿವೆ ಎನ್ನಲಾಗಿದ್ದು ಅತ್ತಿಬೆಲೆ ಪೊಲೀಸರು ಮತ್ತು ಚುನಾವಣೆ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ದೂರು

ಬೆಂಗಳೂರು: ವಿಧಾನಪರಿಷತ್‌ನ ಬೆಂಗಳೂರು ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿ, ಮತದಾರರಿಗೆ ಉಡುಗೊರೆ ಹಂಚುತ್ತಿದ್ದಾರೆ ಎಂದು ಬಿಜೆಪಿ ನಿಯೋಗ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಆಗ್ರಹಿಸಿದೆ.

ಗೋದಾಮಿನಲ್ಲಿ ಉಡುಗೊರೆ ಶೇಖರಿಸಿಡಲಾಗಿದೆ. ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸುವಂತೆ ನಿಯೋಗ ಒತ್ತಾಯಿಸಿದೆ. ನಿಯೋಗದಲ್ಲಿ ಶಾಸಕರಾದ ಎಸ್. ಸುರೇಶ್ ಕುಮಾರ್, ಸಿ.ಕೆ. ರಾಮಮೂರ್ತಿ, ಛಲವಾದಿ ನಾರಾಯಣಸ್ವಾಮಿ ಇದ್ದರು.

ಚುನಾವಣೆ: ಮದ್ಯ ಮಾರಾಟ ನಿಷೇಧ

ಬೆಂಗಳೂರು: ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರ ಕ್ಷೇತ್ರ ಹಾಗೂ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಆದೇಶಿಸಿದ್ದಾರೆ.

ಚುನಾವಣೆಯು ಮುಕ್ತ, ನಿಷ್ಪಕ್ಷಪಾತವಾಗಿ ನಡೆಯಲು ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವ ಸಲುವಾಗಿ ಮತದಾನ ಮುಗಿಯುವ ಅವಧಿಯ ಹಿಂದಿನ 48 ಗಂಟೆಗಳು ಮತ್ತು ಮತ ಎಣಿಕೆ ದಿನದಂದು ಶುಷ್ಕ ದಿನ ಘೋಷಿಸಲಾಗಿದೆ.

ಜೂನ್ 1ರ ಸಂಜೆ 4ರಿಂದ ಜೂನ್ 3ರ ಸಂಜೆ 4 ಗಂಟೆವರೆಗೆ ಹಾಗೂ ಮತ ಎಣಿಕೆ ದಿನವಾದ ಜೂನ್ 6ರ ಬೆಳಿಗ್ಗೆ 6ರಿಂದ ಮಧ್ಯರಾತ್ರಿ 12 ರವರೆಗೆ ಮದ್ಯ, ಇತರೆ ಮಾದಕ ಬಳಕೆ ಮಾರಾಟ, ಸಂಗ್ರಹಣೆ ನಿಷೇಧಿಸಲಾಗಿದೆ. ವೈನ್ ಶಾಪ್, ಬಾರ್, ಹೋಟೆಲ್, ರೆಸ್ಟೊರೆಂಟ್‌ಗಳನ್ನು ಅಂದು ಮುಚ್ಚುವಂತೆ ಆದೇಶಿಸಲಾಗಿದೆ.

ಈಜುಕೊಳ: ಮಳೆನೀರು ಬಳಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜುಕೊಳ ಬಳಸಲು ಅವಕಾಶ ಕಲ್ಪಿಸಿರುವ ಜಲಮಂಡಳಿ, ಕಾವೇರಿ ನೀರಿನ ಬಳಕೆಗೆ ನಿಷೇಧವನ್ನು ಮುಂದುವರಿಸಿದ್ದು, ಈಜುಕೊಳಕ್ಕೆ ಮಳೆನೀರು ಅಥವಾ ಕೊಳವೆಬಾವಿ ನೀರು ಬಳಸಲು ಮಾತ್ರ ಅನುಮತಿ ನೀಡಿದೆ.

ನಗರದಲ್ಲಿ ನೀರು ಪೋಲು ಮಾಡುವುದನ್ನು ತಡೆಗಟ್ಟುವ ಉದ್ದೇಶದಿಂದ ಈಜುಕೊಳ ಬಳಕೆ ನಿರ್ಬಂಧಿಸಿ ಜಲಮಂಡಳಿ ಹೊರಡಿಸಿದ್ದ ಆದೇಶವನ್ನು, ಅಪಾರ್ಟ್‌ಮೆಂಟ್ ಹಾಗೂ ಕ್ರೀಡಾ ಸಂಸ್ಥೆಯವರ ಮನವಿ ಮೇರೆಗೆ ಸಡಿಲಿಸಿದೆ.

ಈಜುಕೊಳಕ್ಕೆ ಕಾವೇರಿ ನೀರನ್ನು ಕಡ್ಡಾಯವಾಗಿ ಬಳಸುವಂತಿಲ್ಲ. ಮಳೆ ನೀರು ಅಥವಾ ಕೊಳವೆ ಬಾವಿಯ ನೀರನ್ನು ಮಾತ್ರ ಬಳಸತಕ್ಕದ್ದು. ಈಜುಕೊಳದ ನೀರನ್ನು ಶುದ್ಧೀಕರಿಸಿ ಮರುಬಳಕೆ ಮಾಡಬೇಕು. ಸಮುಚ್ಚಯದಲ್ಲಿ ಕಡ್ಡಾಯವಾಗಿ ಕೊಳವೆಬಾವಿ ಅಕ್ಕಪಕ್ಕದಲ್ಲಿ ಮಳೆ ನೀರು ಇಂಗುಗುಂಡಿಗಳನ್ನು ನಿರ್ಮಿಸಿರಬೇಕು. ಎಲ್ಲಾ ನಲ್ಲಿಗಳಿಗೆ ಕಡ್ಡಾಯವಾಗಿ ಏರಿಯೇಟರ್ ಅಳವಡಿಸಿಕೊಂಡಿರಬೇಕು. ಕುಡಿಯಲು ಹೊರತುಪಡಿಸಿ ಅನ್ಯ ಬಳಕೆಗೆ ಕಡ್ಡಾಯವಾಗಿ ಸಂಸ್ಕರಿಸಿದ ನೀರನ್ನು ಬಳಸಬೇಕು ಎನ್ನುವ ಷರತ್ತುಗಳನ್ನು ವಿಧಿಸಲಾಗಿದೆ.

ಈಜುಕೊಳಕ್ಕೆ ಕಾವೇರಿ ನೀರು ಬಳಕೆ ಮಾಡುವುದು ಕಂಡಬಂದಲ್ಲಿ ಜಲಮಂಡಳಿಯ ಕಾಯ್ದೆ 1964ರ ಕಲಂ 109 ಅನ್ವಯ ₹5 ಸಾವಿರ ದಂಡ ವಿಧಿಸಲಾಗುವುದು. ಈ ಉಲ್ಲಂಘನೆ ಮರುಕಳಿಸಿದಲ್ಲಿ ದಂಡ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ಪ್ರತಿದಿನ ₹500 ದಂಡ ವಿಧಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಜುಲೈ 31ರೊಳಗೆ ₹20 ಕೋಟಿ ತೆರಿಗೆ ಪಾವತಿ: ಕಂಪನಿಯ ಮುಚ್ಚಳಿಕೆ

ಮಂತ್ರಿಮಾಲ್ ಬೀಗ ತೆರೆಯಲು ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿಸಿಕೊಳ್ಳಲಾಗಿದೆ ಎನ್ನಲಾದ ₹ 41 ಕೋಟಿ ಆಸ್ತಿ ತೆರಿಗೆಯ ಬಾಕಿ ಹಣದ ಪೈಕಿ ₹ 20 ಕೋಟಿಯನ್ನು 2024ರ ಜುಲೈ 31ರೊಳಗೆ ಪಾವತಿಸುವುದಾಗಿ ಮಂತ್ರಿ ಮಾಲ್, ಹೈಕೋರ್ಟ್‌ಗೆ ಮುಚ್ಚಳಿಕೆ ನೀಡಿದೆ. ಈ ಹಿನ್ನೆಲೆಯಲ್ಲಿ ಇದೇ 17ರ (ಶುಕ್ರವಾರ) ಬೆಳಗ್ಗೆ 10 ಗಂಟೆಯ ಒಳಗಾಗಿ ಬೀಗ ತೆರೆಯುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶಿಸಿದೆ.

ಮಾಲ್‌ಗೆ ಬೀಗ ಹಾಕಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ, ಮಂತ್ರಿಮಾಲ್‌ನ 'ಮೆಸರ್ಸ್ ಅಭಿಷೇಕ್ ಪ್ರಾಪ್‌ಬಿಲ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿ'ಯ ಅಧಿಕೃತ ಪ್ರತಿನಿಧಿ ಗಿರೀಶ್ ಗುಪ್ತಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಮಾಲ್‌ನಲ್ಲಿ 250ಕ್ಕೂ ಹೆಚ್ಚಿನ ಮಳಿಗೆ ಹಾಗೂ ವ್ಯಾಪಾರ ಕೇಂದ್ರಗಳಿವೆ. ಹತ್ತಿರತ್ತಿರ 2,500 ಉದ್ಯೋಗಿಗಳಿದ್ದಾರೆ. ಬಿಬಿಎಂಪಿ ಕಾನೂನು ಬಾಹಿರವಾಗಿ ಮಾಲ್‌ಗೆ 2024ರ ಮೇ 10ರಿಂದ ಬೀಗ ಹಾಕಿದೆ. ಇದು ಉದ್ಯೋಗಿಗಳ ಬದುಕಿನ ಮೇಲೆ ದುಷ್ಪರಿಣಾಮ ಬೀರಿದೆ. ನಿತ್ಯವೂ ಅಂದಾಜು ₹ 7 ರಿಂದ 8 ಕೋಟಿ ವ್ಯಾಪಾರ ನಷ್ಟವಾಗುತ್ತಿದೆ' ಎಂದು ವಿವರಿಸಿದರು.

'ಅಕ್ಷಯ ತೃತೀಯಾ ದಿನದಿಂದ ಮಾಲ್ ಒಳಗಿರುವ ಚಿನ್ನಾಭರಣ ಮಳಿಗೆಗಳ ವ್ಯಾಪಾರಕ್ಕೆ ಅಡಚಣೆ ಉಂಟಾಗಿ, ದೊಡ್ಡಮೊತ್ತದ ನಷ್ಟ ಉಂಟಾಗಿದೆ. ಈ ನಡೆ ಮಳಿಗೆಗಳ ಬಾಡಿಗೆದಾರರು ಕಂಪನಿಯ ವಿರುದ್ಧ ಮೊಕದ್ದಮೆ ಹೂಡಲು ಮತ್ತು ಬಾಡಿಗೆ ಪಾವತಿಸಲು ನಿರಾಕರಿಸುವುದನ್ನು ಪ್ರೇರೇಪಿಸುತ್ತದೆ' ಎಂದು ಆರೋಪಿಸಿದರು. ಅಂತೆಯೇ, ಕಂಪನಿ ಪರವಾದ ಪ್ರಮಾಣಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿ, '2024ರ ಜುಲೈ 31ರೊಳಗೆ ₹ 20 ಕೋಟಿ ಮೊತ್ತವನ್ನು ಬಿಬಿಎಂಪಿಗೆ ಪಾವತಿಸಲಾಗುವುದು' ಎಂದು ಮುಚ್ಚಳಿಕೆ ನೀಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಕಂಪನಿಯು 2024ರ ಜೂನ್ 1ರೊಳಗೆ ₹ 3.5 ಕೋಟಿ ಮೊತ್ತವನ್ನು ಬಿಬಿಎಂಪಿಗೆ ಪಾವತಿಸಬೇಕು' ಎಂದು ಸೂಚಿಸಿ ಷರತ್ತುಬದ್ಧ ಮಧ್ಯಂತರ ಆದೇಶ ಮಾಡಿತು. ಕಂಪನಿ ಪರ ಹೈಕೋರ್ಟ್ ವಕೀಲೆ ಪಿ.ಎಲ್.ವಂದನಾ ರೆಡ್ಡಿ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?: 'ಮಂತ್ರಿಮಾಲ್ ಒಟ್ಟು ₹41 ಕೋಟಿ ಮೊತ್ತದ ಆಸ್ತಿ ತೆರಿಗೆ ಪಾವತಿಸಿಲ್ಲ' ಎಂದು ಆರೋಪಿಸಿ ಬಿಬಿಎಂಪಿ ಇದೇ 10ರಂದು ಐದನೇ ಬಾರಿಗೆ ಬೀಗ ಹಾಕಿತ್ತು. ಇದನ್ನು ಪ್ರಶ್ನಿಸಿ ಕಂಪನಿ ಸಿಟಿ ಸಿವಿಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, 'ಬಾಕಿಯಿರುವ ಪೈಕಿ ಶೇ 50ರಷ್ಟು ತೆರಿಗೆ ಹಣವನ್ನು 10 ದಿನಗಳಲ್ಲಿ ಬಿಬಿಎಂಪಿಗೆ ಪಾವತಿಸಬೇಕು. ಹಣ ಪಾವತಿಸಿದ ನಂತರ ಬಿಬಿಎಂಪಿ ಬೀಗ ತೆರೆದು ಮಾಲ್‌ನಲ್ಲಿ ವ್ಯಾಪಾರ ವಹಿವಾಟು ನಡೆಸಲು ಬಿಬಿಎಂಪಿ ಅನುಮತಿ ನೀಡಬೇಕು' ಎಂದು ಬುಧವಾರ (ಮೇ 15ರಂದು) ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

'ಇಂಟ್ರಾ ಆಪರೇಟಿವ್ ರೇಡಿಯೇಶನ್ ಥೆರಪಿ' ಪರಿಚಯಿಸಿದ ಆಸ್ಪತ್ರೆ

ರಾಮಯ್ಯ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮಯ್ಯ ಸ್ಮಾರಕ ಆಸ್ಪತ್ರೆಯು ಕ್ಯಾನ್ಸರ್ ಚಿಕಿತ್ಸೆಗೆ ದೇಶದಲ್ಲಿಯೇ ಮೊದಲ ಬಾರಿಗೆ 'ಇಂಟ್ರಾ ಆಪರೇಟಿವ್ ರೇಡಿಯೇಶನ್ ಥೆರಪಿ (ಐಒಆರ್‌ಟಿ)' ಪರಿಚಯಿಸಿದೆ' ಎಂದು ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಂಕೋಸೈನ್ಸ್‌ನ ನಿರ್ದೇಶಕ ಡಾ. ಕೆ. ಹರೀಶ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಮಯ್ಯ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದಂತೆ ಮೂರು ವಿಧಾನದಲ್ಲಿ ರೇಡಿಯೇಶನ್ ಥೆರಪಿ ಚಿಕಿತ್ಸೆ ನೀಡುವ ದಕ್ಷಿಣ ಭಾರತದ ಮೊದಲ ಆಸ್ಪತ್ರೆಯಾಗಿದೆ. ಕ್ಯಾನ್ಸರ್ ರೋಗಿಯನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸುವ ಸಂದರ್ಭದಲ್ಲಿ ಐಒಆರ್‌ಟಿ ಮೂಲಕ ನಿಗದಿತ ಕ್ಯಾನ್ಸರ್ ಗಡ್ಡೆಯ ಕೋಶಗಳನ್ನು (ಕ್ಯಾನ್ಸರ್ ಬೆಡ್ ಸೆಲ್‌ಗಳು) ನಾಶಪಡಿಸಲಾಗುತ್ತದೆ. ಈ ಚಿಕಿತ್ಸೆ ಆರೋಗ್ಯಕರ ಅಂಗಾಂಶಗಳಿಗೆ ಯಾವುದೇ ಹಾನಿ ಮಾಡುವುದಿಲ್ಲ' ಎಂದು ಅವರು ತಿಳಿಸಿದರು.

'ರಾಮಯ್ಯ ಆಸ್ಪತ್ರೆಯಲ್ಲಿ ಐಒಆರ್‌ಟಿ ಬಳಸಿ ಸ್ತನ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಎರಡನೇ ಹಂತದ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 55 ವರ್ಷ ಹಾಗೂ 49 ವರ್ಷದ ಇಬ್ಬರು ಮಹಿಳೆಯರಿಗೆ ಸರ್ಜಿಕಲ್ ಆ್ಯಂಡ್ ರೇಡಿಯೇಶನ್ ತಂಡ ಐಒಆರ್‌ಟಿ ಮೂಲಕ ಯಶಸ್ವಿಯಾಗಿ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಮಾಡಿದೆ' ಎಂದು ಹೇಳಿದರು.

'ಕ್ಯಾನ್ಸರ್ ರೋಗಿಗಳ ಜೀವನದ ಗುಣಮಟ್ಟ ಹೆಚ್ಚಿಸುವಲ್ಲಿ ಐಒಆರ್‌ಟಿ ಸಹಾಯಕವಾಗಿದೆ. ಇತರೆ ಸಾಂಪ್ರದಾಯಿಕ ಚಿಕಿತ್ಸೆಗಳಿಗೆ ಹೋಲಿಸಿದರೆ ಈ ಚಿಕಿತ್ಸೆಯಲ್ಲಿ ಅಡ್ಡಪರಿಣಾಮ ಕಡಿಮೆ. ಕಡಿಮೆ ಸಮಯ ಮತ್ತು ವೆಚ್ಚದಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳ ಅಡಿಯಲ್ಲಿ ಈ ಚಿಕಿತ್ಸೆಯನ್ನು ನೀಡಲಾಗುತ್ತಿದೆ' ಎಂದು ಡಾ. ಕೀರ್ತಿ ಕೌಶಿಕ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ (ಎಡದಿಂದ) ರಾಮಯ್ಯ ಸ್ಮಾರಕ ಆಸ್ಪತ್ರೆಯ ಡಾ. ಕೀರ್ತಿ ಕೌಶಿಕ್, ಡಾ. ವಿನಾಯಕ್ ವಿ. ಮಾಕಾ, ರಾಮಯ್ಯ ಸ್ಮಾರಕ ಆಸ್ಪತ್ರೆಯ ನಿರ್ದೇಶಕ ಡಾ. ಕೆ. ಹರೀಶ್, ರಾಮಯ್ಯ ಸ್ಮಾರಕ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ ಮದನ್ ಗಾಯಕ್ವಾಡ್ ಮತ್ತು ಗೋಕುಲ ಶಿಕ್ಷಣ ಪ್ರತಿಷ್ಠಾನ ಮತ್ತು ಗೋಕುಲ ಶಿಕ್ಷಣ ಪ್ರತಿಷ್ಠಾನ (ವೈದ್ಯಕೀಯ) ಮುಖ್ಯ ಕಾರ್ಯನಿರ್ವಾಹಕ ಎಂ.ಆರ್ ಶ್ರೀನಿವಾಸ ಮೂರ್ತಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಲೋಕಾಯುಕ್ತ ನ್ಯಾಯಮೂರ್ತಿ ದಿಢೀರ್ ಭೇಟಿ

ಯಲಹಂಕ: ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ನೇತೃತ್ವದ ತಂಡವು ದೊಡ್ಡಬೊಮ್ಮಸಂದ್ರ ಕೆರೆ ಆವರಣಕ್ಕೆ ಗುರುವಾರ ದಿಢೀರ್ ಭೇಟಿ ನೀಡಿ ಪರಿಶೀಲಿಸಿತು.

'ಕೆರೆಗೆ ಹೊಂದಿಕೊಂಡಿರುವ ಖಾಸಗಿ ಜಾಗ ಮತ್ತು ಕೆರೆ ಏರಿ ರಸ್ತೆಯಲ್ಲಿ ರಾತ್ರಿ ವೇಳೆ ಅನಧಿಕೃತವಾಗಿ ಟ್ರ್ಯಾಕ್ಟರ್‌ಗಳಲ್ಲಿ ಕಟ್ಟಡ ತ್ಯಾಜ್ಯಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಇದರಿಂದ ಕೆರೆಯ ಪರಿಸರಕ್ಕೆ ಹಾನಿಯಾಗುತ್ತಿದೆ. ಆದ್ದರಿಂದ ಬಿಬಿಎಂಪಿ ಇದನ್ನು ಗಂಭೀರವಾಗಿ ಪರಿಗಣಿಸಿ, ತ್ಯಾಜ್ಯ ವಿಲೇವಾರಿಯನ್ನು ತಡೆಗಟ್ಟಲು ತಕ್ಷಣ ಕ್ರಮಕೈಗೊಳ್ಳಬೇಕು' ಎಂದು ಬಿ.ಎಸ್.ಪಾಟೀಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಯಲಹಂಕ ವಲಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಕ್ರಿಯಾಯೋಜನೆ ಸಿದ್ಧಪಡಿಸಿ, ಸಲ್ಲಿಸಬೇಕು' ಎಂದು ತಿಳಿಸಿದರು.



ಸಿನಿಮಾ ಪುರವಣಿ

ರಾಜ್ ಬಿ.ಶೆಟ್ಟಿ

‘ಆವೇಶಂ’ನಲ್ಲೂ ರಾಜ್ ನಂಟು

‘ಕೊಂಚ ಮಲಯಾಳ ಮಾತನಾಡಲು ಅರಿತಿರುವ ಕನ್ನಡಿಗ ನಾನು. ಮಲಯಾಳದ ‘ಆವೇಶಂ’ ಸಿನಿಮಾದಲ್ಲಿನ ‘ರಂಗ’ ಎನ್ನುವ ಪಾತ್ರ ಬೆಂಗಳೂರಿನಲ್ಲಿ ನೆಲೆಸಿರುವ ಒಬ್ಬ ಮಲಯಾಳಿ. ಆ ‘ರಂಗ’ ಮಾತನಾಡಬೇಕಾದರೆ ಕನ್ನಡದಲ್ಲಿ ಯೋಚನೆ ಮಾಡಿ ಮಲಯಾಳದಲ್ಲಿ ಮಾತನಾಡಿದಂತೆ ಅನಿಸಬೇಕು. ಅದು ಆಗಬೇಕಿದ್ದರೆ ನಾನು ಯಾವ ರೀತಿ ಯೋಚನೆ ಮಾಡುತ್ತೇನೆ ಎಂದು ಚಿತ್ರತಂಡಕ್ಕೆ ಬೇಕಿತ್ತು. ಪ್ರತಿಯೊಬ್ಬ ಮಲಯಾಳಿ ಆ ಸಿನಿಮಾ ನೋಡಬೇಕಾದರೆ ‘ರಂಗ’ ಮಾತನಾಡುತ್ತಿರುವುದು ನಮ್ಮೂರಿನ ಮಲಯಾಳ ಅಲ್ಲ ಎಂದೆನಿಸಬೇಕು. ‘ರಂಗ’ ಎನ್ನುವ ಪಾತ್ರವನ್ನು ಕೆತ್ತುವಲ್ಲಿ ಚಿತ್ರತಂಡ ನನ್ನ ಸಹಾಯ, ಸಲಹೆಯನ್ನು ಪಡೆದಿತ್ತು. ಚಿತ್ರದಲ್ಲಿ ನನ್ನ ಪಾಲೇನೂ ದೊಡ್ಡದಿಲ್ಲ. ಆದರೂ ನನಗೊಂದು ಧನ್ಯವಾದ ಹೇಳಿದ್ದಾರೆ. ಕನ್ನಡದಲ್ಲಿ ಹಲವು ಸಿನಿಮಾಗಳಿಗೆ ಹೀಗೆ ಸಹಾಯ ಮಾಡಿದ್ದೇನೆ. ಆದರೆ ಅವರ್‍ಯಾರೂ ಥ್ಯಾಂಕ್ಸ್ ಕಾರ್ಡ್‌ನಲ್ಲಿ ನನ್ನ ಹೆಸರು ಹಾಕಿದಂತಿಲ್ಲ’ ಎನ್ನುತ್ತಾರೆ ರಾಜ್.

ಭಿನ್ನ ಪಾತ್ರದತ್ತ ರಾಜ್ ಶೆಟ್ಟಿ

ನಟ ರಾಜ್ ಬಿ.ಶೆಟ್ಟಿ ನಟನೆಯ ಮೊದಲ ಮಲಯಾಳ ಸಿನಿಮಾ ‘ಟರ್ಬೊ’ ಮೇ 23ಕ್ಕೆ ಬಿಡುಗಡೆಯಾಗುತ್ತಿದೆ. ರಾಜ್ ಅವರಿಗೂ ಮಲಯಾಳ ಸಿನಿಮಾ ಇಂಡಸ್ಟ್ರಿಗೂ ನಂಟು ಮೊದಲಿನಿಂದಲೂ ಇದೆ. ಇತ್ತೀಚೆಗೆ ತೆರೆ ಕಂಡ ಫಹಾದ್ ಫಾಸಿಲ್ ನಟನೆಯ ‘ಆವೇಶಂ’ನಲ್ಲೂ ರಾಜ್ ಅವರ ಅಳಿಲು ಸೇವೆ ಇದೆ.

ಅಭಿಲಾಷ್ ಪಿ.ಎಸ್.

● ‘ಟರ್ಬೊ’ದಲ್ಲಿ ಅವಕಾಶ ಸಿಕ್ಕಿದ್ದು ಹೇಗೆ?

ನಾನು ‘ಟೋಬಿ’ ಸಿನಿಮಾ ಪ್ರಚಾರಕ್ಕೆ ಕೇರಳಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ, ‘ಟರ್ಬೊ’ ಚಿತ್ರತಂಡ ಸ್ಕ್ರಿಪ್ಟ್ ಅಂತಿಮಗೊಳಿಸಿ ಚಿತ್ರೀಕರಣಕ್ಕೆ ಸಿದ್ಧವಾಗಿತ್ತು. ಆ ವೇಳೆಯಲ್ಲಿ ಅವರು ನನ್ನನ್ನು ಸಂಪರ್ಕಿಸಿದ್ದರು. ನನಗೆ ಅವರು ವಿವರಿಸಿದ ಆ ಪಾತ್ರ ವಿಶೇಷವಾಗಿತ್ತು. ಆತ ನೋಡಲು ಸಾಮಾನ್ಯನಾಗಿದ್ದರೂ ತುಂಬಾ ಅಸಾಮಾನ್ಯ. ಆ ಪಾತ್ರಕ್ಕೆ ಅಗತ್ಯವಾಗಿದ್ದ ದೈಹಿಕ ಗುಣಲಕ್ಷಣಗಳು ಅವರಿಗೆ ನನ್ನಲ್ಲಿ ಕಂಡವು. ನಾನು ಮೊದಲು ಕಥೆ ಕೇಳಿದೆ. ಆ ಪಾತ್ರ ಬಹಳ ಪರಿಣಾಮ ಬೀರುವ ಪಾತ್ರವಾಗಿತ್ತು. ಮಮ್ಮುಟ್ಟಿ ಅವರ ಜೊತೆ ತೆರೆಹಂಚಿಕೊಳ್ಳುವಂತಹ ಪಾತ್ರ ನನಗೆ ಸಿಗುತ್ತಿದೆಯೇ ಎಂದು ಆಶ್ಚರ್ಯವೂ ಆಯಿತು. ಮಲಯಾಳದಲ್ಲಿ ನಾನು ಯಾವುದೇ ಸಿನಿಮಾ ಮಾಡಿರಲಿಲ್ಲ. ಹೀಗಿರುವಾಗ ಇಂತಹ ಪಾತ್ರದ ಆಫರ್ ಬಂದಿತ್ತು. ಸಿನಿಮಾದಲ್ಲಿ ಕಬೀರ್ ಸಿಂಗ್, ಸುನಿಲ್ ಅವರಂತಹ ಖ್ಯಾತ ನಟರು ಇದ್ದಾರೆ ಎಂದು ಹೇಳಿದ್ದರು. ಅವರೆಲ್ಲರ ನಡುವೆ ನನ್ನದೂ ಒಂದು ಪಾತ್ರ ಎಂದುಕೊಂಡಿದ್ದೆ. ಆದರೆ ನನ್ನದೇ ಪಾತ್ರ ಪ್ರಮುಖವಾದದ್ದು ಎನ್ನುವುದು ತಿಳಿಯಿತು. ಸಿನಿಮಾ ಮತ್ತು ಕಲೆಯ ಶಕ್ತಿ ನೋಡಿ, ಗಡಿಯನ್ನೂ ದಾಟಿ ಹೋಗುತ್ತವೆ. ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ.

● ಸಿನಿಮಾದಲ್ಲಿನ ಪಾತ್ರದ ಬಗ್ಗೆ...

‘ಗರುಡ ಗಮನ..’, ‘ಟೋಬಿ’ ಪಾತ್ರಗಳನ್ನು ನೋಡಿ ನನಗೆ ಈ ಅವಕಾಶ ಲಭಿಸಿದೆ ಎಂದುಕೊಂಡಿದ್ದೇನೆ. ಆ ಸಿನಿಮಾದ ಪಾತ್ರಕ್ಕಿಂತ ಭಿನ್ನವಾದ ಪಾತ್ರ ‘ಟರ್ಬೊ’ದಲ್ಲಿದೆ. ಆ ಪಾತ್ರಗಳಲ್ಲಿ ಸ್ಟೈಲ್ ಎಂಬ ಅಂಶ ಇರಲೇ ಇಲ್ಲ. ಆದರೆ ‘ಟರ್ಬೊ’ದಲ್ಲಿನ ಪಾತ್ರಕ್ಕೆ ಸ್ಟೈಲ್ ಎನ್ನುವುದೇ ಪ್ರಮುಖ ಅಂಶ. ನಾನು ಮಲಯಾಳ ಕಲಿತಿದ್ದೇನೆ. ಹೇಗೆ ‘ಆರ್‌ಸಿಬಿ’ಯ ಒಬ್ಬ ಹೊರ ರಾಜ್ಯದ ಅಥವಾ ವಿದೇಶಿ ಆಟಗಾರ ‘ಹುಟ್ಟಿದರೇ ಕನ್ನಡ ನಾಡಲ್ಲಿ ಹುಟ್ಟಬೇಕು’ ಎಂದು ಹಾಡಿದಾಗ ನಮಗೆ ಹೇಗೆ ಖುಷಿಯಾಗುತ್ತದೆಯೋ, ಅದೇ ರೀತಿ ಆಯಾ ರಾಜ್ಯದಲ್ಲಿ ಅವರ ಭಾಷೆ, ಸಂಸ್ಕೃತಿಗೆ ಸಿಕ್ಕಬೇಕಾದ ಗೌರವ ಹೊರಗಿನವನಿಂದ ಸಿಕ್ಕಾಗ ಅವರಿಗೆ ಖುಷಿಯಾಗುತ್ತದೆ. ಕನ್ನಡ ಹಾಗೂ ತುಳು ಭಾಷೆಯನ್ನು ನಿದ್ದೆಯಿಂದ ಎಬ್ಬಿಸಿ ಮಾತನಾಡಿಸಿದರೂ ಮಾತನಾಡುತ್ತೇನೆ. ಈ ಭಾಷೆಗಳಲ್ಲಿ ಸಿಗುವ ಖುಷಿ, ವ್ಯಕ್ತಿಪಡಿಸುವ ಸ್ವಾತಂತ್ರ್ಯ ಬೇರೆ ಭಾಷೆಯಲ್ಲಿ ಸಿಗುವುದಿಲ್ಲ. ‘ಟರ್ಬೊ’ ಸಿನಿಮಾಗಾಗಿ ಒಬ್ಬ ಸ್ಥಳೀಯ ಮಲಯಾಳ ಬರುವ ವ್ಯಕ್ತಿಯೊಂದಿಗೆ ಒಡನಾಡಿದ್ದೆ. ವಿದ್ಯಾರ್ಥಿಯ ರೀತಿಯಲ್ಲಿ ಆ ಭಾಷೆ ಕಲಿತಿದ್ದೆ. ಸಿನಿಮಾದಲ್ಲಿ ನಾನು ‘ವೆಟ್ರಿವೇಲ್ ಶಣ್ಮುಗಸುಂದರಂ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ತಮಿಳು, ಮಲಯಾಳ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಈ ಪಾತ್ರದ ಸಂಭಾಷಣೆಯಿದೆ.

● ‘ಟೋಬಿ’ ಮಲಯಾಳದಲ್ಲಿ ಹೆಚ್ಚು ಸದ್ದು ಮಾಡಿತು ಅಲ್ಲವೇ?

ಹೌದು. ಕನ್ನಡದಲ್ಲಿ ‘ಟೋಬಿ’ ಬಿಡುಗಡೆ ಮಾಡಿದಾಗ ಆ ಸಿನಿಮಾ ಮೇಲೆ ಜನರಿಗೆ ಹೆಚ್ಚು ನಿರೀಕ್ಷೆ ಇತ್ತು. ಹೀಗೆ ಪ್ರಾಜೆಕ್ಟ್ ಒಂದು ಜನರ ನಿರೀಕ್ಷೆಯನ್ನು ತಲುಪದೇ ಇದ್ದಾಗ ಅವರಿಗೆ ನಿರಾಶೆಯಾಗುತ್ತದೆ. ನಾನು ನೇರವಾಗಿ ಒಂದು ವಿಚಾರ ಒಪ್ಪಿಕೊಳ್ಳುತ್ತೇನೆ. ‘ಟೋಬಿ’ಯಲ್ಲಿ ನಮ್ಮ ತಂಡದ ಸಮಸ್ಯೆಯೂ ಬಹಳ ಇತ್ತು. ನಾವೇನೋ ಮಾಡಬೇಕೆಂದಿದ್ದೆವು, ಅದು ಕನ್ನಡದಲ್ಲಿ ಮಾಡಲು ಸಾಧ್ಯವಾಗಲಿಲ್ಲ. ಮಲಯಾಳದಲ್ಲಿ ಅದನ್ನೆಲ್ಲಾ ಬದಲಾಯಿಸಿಕೊಂಡು ಸಿನಿಮಾ ನೀಡಿದಾಗ, ಅದು ಕನ್ನಡದ ಆವೃತ್ತಿಗಿಂತ ಉತ್ತಮವಾಗಿತ್ತು. ಆ ಬದಲಾವಣೆಯನ್ನು ಹೇಳುವುದು ಈ ಸಂದರ್ಭದಲ್ಲಿ ಸೂಕ್ತವಲ್ಲ ಎಂದುಕೊಂಡಿದ್ದೇನೆ. ನಮ್ಮ ತಂಡಕ್ಕೆ ಸಮರ್ಪಕವಾಗಿ ಸಿನಿಮಾವನ್ನು ತಲುಪಿಸಲು ಸಾಧ್ಯವಾಗದಿರುವುದು ಸಿನಿಮಾದ ಹಿನ್ನಡೆಗೆ ಕಾರಣ ಹೊರತುಪಡಿಸಿ, ಕನ್ನಡ ಪ್ರೇಕ್ಷಕರಲ್ಲ. ಪ್ರೇಕ್ಷಕರು ಎಲ್ಲ ಕಡೆ ಒಳ್ಳೆಯ ಸಿನಿಮಾವನ್ನು ನಿರೀಕ್ಷಿಸುತ್ತಾರೆ. ಒಳ್ಳೆಯ ಸಿನಿಮಾಗಳನ್ನು ಇಷ್ಟಪಡುತ್ತಾರೆ. ಜನರಿಗೆ ಇಷ್ಟವಾಗಿಲ್ಲ ಎಂದು ಅವರನ್ನು ದೂಷಿಸಲು ಸಾಧ್ಯವಿಲ್ಲ. ಮಲಯಾಳದಲ್ಲಿ ಹಿಟ್ ಆದ ಸಿನಿಮಾಗಳು ಕರ್ನಾಟಕದಲ್ಲೂ ಹಿಟ್ ಆಗಿವೆಯಲ್ಲವೇ. ಹೀಗಾಗಿ ಪ್ರೇಕ್ಷಕರು ಎಲ್ಲ ಕಡೆ ಪ್ರೇಕ್ಷಕರೇ.

● ‘45’ ಸಿನಿಮಾ ಎಲ್ಲಿಯವರೆಗೆ ಬಂದಿದೆ?

ಈ ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ. ಇದೊಂದು ದೊಡ್ಡ ಪ್ರಾಜೆಕ್ಟ್. ಮೂವರು ಪ್ರಮುಖ ನಟರು ಇದರಲ್ಲಿದ್ದು, ನಮ್ಮೆಲ್ಲರ ಶೂಟಿಂಗ್ ದಿನಗಳನ್ನು ನೋಡಿಕೊಂಡು ಚಿತ್ರೀಕರಣ ನಡೆಯುತ್ತಿದೆ. ಸುಮಾರು ಶೇ 85ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಉಳಿದ ಭಾಗದ ಚಿತ್ರೀಕರಣಕ್ಕೆ ಖಂಡಿತವಾಗಿಯೂ ಸಮಯ ಬೇಕು. ಈ ವರ್ಷದಲ್ಲೇ ಚಿತ್ರೀಕರಣ ಪೂರ್ಣಗೊಳ್ಳಲಿದೆ. ಇದೊಂದು ಒಳ್ಳೆಯ ಸಿನಿಮಾ ಆಗಿ ಮೂಡಿಬರಲಿದೆ ಎನ್ನುವ ನಂಬಿಕೆ ಇದೆ.

● ಹೊಸ ಕಥೆ ಬರೆಯುತ್ತಿದ್ದೀರಂತೆ...

ಹೌದು. ಇಷ್ಟು ಕೆಲಸಗಳ ನಡುವೆ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದೇನೆ. ಶೇ 50ರಷ್ಟು ಬರವಣಿಗೆ ಪೂರ್ಣಗೊಳಿಸಿದ್ದೇನೆ. ಶೇ 20ರಷ್ಟು ಪ್ರಿಪ್ರೊಡಕ್ಷನ್ ಕೆಲಸಗಳು ನಡೆದಿದೆ. ❖

ಮಾನಸಿ

‘ವಿದ್ಯಾರ್ಥಿ ವಿದ್ಯಾರ್ಥಿನಿಯರೇ’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ರ್‍ಯಾಪರ್ ಚಂದನ್ ಶೆಟ್ಟಿ ಸಿನಿಮಾದಲ್ಲಿ ಖಳ ನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆಯೇ ಎನ್ನುವ ಕುತೂಹಲವನ್ನು ಟ್ರೇಲರ್ ಉಳಿಸಿದೆ.

‘ವಿದ್ಯಾರ್ಥಿ..’ಗಳಿಗೆ ಚಂದನ್ ಶೆಟ್ಟಿ ವಿಲನ್?

ಅರುಣ್ ಅಮುಕ್ತ ಆ್ಯಕ್ಷನ್ ಕಟ್ ಹೇಳಿರುವ ‘ವಿದ್ಯಾರ್ಥಿ ವಿದ್ಯಾರ್ಥಿನಿಯರೇ’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ರ್‍ಯಾಪರ್ ಚಂದನ್ ಶೆಟ್ಟಿ ಸಿನಿಮಾದಲ್ಲಿ ಖಳನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆಯೇ ಎನ್ನುವ ಕುತೂಹಲವನ್ನು ಟ್ರೇಲರ್ ಉಳಿಸಿದೆ.

ಸಿನಿಮಾ ಎರಡು ಭಾಗಗಳಲ್ಲಿ ಬಿಡುಗಡೆಯಾಗುವುದು ಸಾಮಾನ್ಯ. ಆದರೆ ನಿರ್ದೇಶಕ ಅರುಣ್ ಟ್ರೇಲರ್ ಅನ್ನೇ ಎರಡು ಭಾಗಗಳಲ್ಲಿ ಬಿಡುಗಡೆ ಮಾಡುತ್ತಿದ್ದಾರೆ. ‘ಇದೀಗ ಟ್ರೇಲರ್‌ನ ‘A’ ಭಾಗ ಬಿಡುಗಡೆಗೊಂಡಿದೆ. ಹದಿನೈದು ದಿನಗಳಲ್ಲಿ ಭಾಗ ‘B’ ರಿಲೀಸ್ ಆಗಲಿದೆ. ಆದರೆ ಸಿನಿಮಾ ಒಂದೇ ಭಾಗದಲ್ಲಿ ಇರಲಿದೆ’ ಎಂದಿದ್ದಾರೆ. ಜೂನ್‌ನಲ್ಲಿ ಸಿನಿಮಾ ತೆರೆಗೆ ಬರುವ ಸಾಧ್ಯತೆ ಇದೆ. ಭ್ರಷ್ಟ ರಾಜಕಾರಣಿಯೊಬ್ಬನ ಪುತ್ರನ ಸುತ್ತ ಚಿತ್ರದ ಕಥಾಹಂದರವಿದೆ. ಶೀರ್ಷಿಕೆಯೇ ಹೇಳುವಂತೆ ಇದೊಂದು ಯೂತ್ ಸಬ್ಜೆಕ್ಟ್ ಸಿನಿಮಾ. ಕಾಲೇಜು ವಾತಾವರಣ, ಹದಿಹರೆಯದ ಹುಚ್ಚಾಟಗಳು, ಹೊಡೆದಾಟ ಹೀಗೆ ಹಲವು ಅಂಶಗಳನ್ನು ನಿರ್ದೇಶಕರು ಕಟ್ಟಿಕೊಟ್ಟಿದ್ದಾರೆ. ‘ಶೈಕ್ಷಣಿಕ ಪರಿಸರದ ಕ್ರೌರ್ಯದ ಮುಖವೊಂದನ್ನು ಬಯಲಾಗಿಸುವ ಪ್ರಯತ್ನವೂ ಸಿನಿಮಾದಲ್ಲಿದೆ. ಮೋಜು ಮಸ್ತಿಯಲ್ಲಿ ಮೈಮರೆತ ಮನಃಸ್ಥಿತಿ, ಪೋಷಕರ ಹಿಡಿತ ತಪ್ಪಿದ ಮಕ್ಕಳನ್ನು ಹಾದಿಗೆ ತರುವ ಯತ್ನ ಸಿನಿಮಾದಲ್ಲಿದೆ’ ಎಂದಿದೆ ಚಿತ್ರತಂಡ.

ಟ್ರೇಲರ್‌ನ ಅಂತ್ಯದಲ್ಲಿ ಚಂದನ್ ಶೆಟ್ಟಿ ಪಾತ್ರವನ್ನು ಪರಿಚಯಿಸಲಾಗಿದೆ. ಭಿನ್ನವಾದ ಪಾತ್ರದಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದು, ಆ ಪಾತ್ರವನ್ನು ಗೌಪ್ಯವಾಗಿ ಇರಿಸಿದೆ ಚಿತ್ರತಂಡ. ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕುಮಾರ್ ಗೌಡ ಛಾಯಾಚಿತ್ರಗ್ರಹಣ, ‘ಭರ್ಜರಿ’ ಚೇತನ್ ಮತ್ತು ವಾಸುಕಿ ವೈಭವ್ ಸಾಹಿತ್ಯ, ಪವನ್ ಗೌಡ ಸಂಕಲನ, ಟೈಗರ್ ಶಿವು, ನರಸಿಂಹ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಂದನ್ ಶೆಟ್ಟಿ, ಅಮರ್, ಭಾವನಾ, ಮಾನಸಿ, ವಿವಾನ್, ಭವ್ಯ, ಸುನೀಲ್ ಪುರಾಣಿಕ್, ಅರವಿಂದ ರಾವ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಸಂಪತ್

‘ಮೂರನೇ ಕೃಷ್ಣಪ್ಪ’ನಾಗಿ ನಟ ಸಂಪತ್ ಕುಮಾರ್ ತೆರೆಗೆ ಬರಲು ಸಜ್ಜಾಗಿದ್ದಾರೆ. ನವೀನ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾ ಮೇ 24ರಂದು ತೆರೆಕಾಣುತ್ತಿದೆ. ಚಿತ್ರೀಕರಣದ ಅನುಭವ, ಸಿನಿಮಾದಲ್ಲಿನ ಭಾಷೆಯ ಪ್ರಯೋಗ ಹಾಗೂ ತಮ್ಮ ಮುಂದಿನ ಸಿನಿಮಾ ಪಯಣದ ಕುರಿತು ಸಂಪತ್ ‘ಸಿನಿಮಾ ಪುರವಣಿ’ ಜೊತೆ ಮಾತನಾಡಿದ್ದಾರೆ.

ಸಂಪತ್‌ಗೆ ಭಾಷೆಯೇ ಸಂಪತ್ತು

ಎ.ಪಿ.ಎಸ್.

‘ಕನ್ನಡ ಭಾಷೆಯೊಳಗೆ ಇರುವ ಹಲವು ಸ್ಲ್ಯಾಂಗ್‌ಗಳನ್ನು ಬಳಸಿಕೊಂಡು ಇತ್ತೀಚೆಗೆ ಕನ್ನಡ ಸಿನಿಮಾಗಳಲ್ಲಿ ಒಳ್ಳೊಳ್ಳೆಯ ಪ್ರಯತ್ನಗಳು ಆಗಿವೆ. ಒಂದು ನಿರ್ದಿಷ್ಟ ಅಂತರದಲ್ಲಿ ಕನ್ನಡದ ಸ್ಲ್ಯಾಂಗ್ ಬದಲಾಗುತ್ತಲೇ ಇರುತ್ತದೆ. ಪ್ರತಿ ದ್ರಾವಿಡ ಭಾಷೆಗೂ ಇದೇ ವಿಶೇಷತೆ ಇದೆ. ಭಾಷೆಯ ಜೊತೆಗೆ ಆಹಾರ, ವಸ್ತ್ರ ಸಂಸ್ಕೃತಿಯೂ ಬದಲಾಗುತ್ತದೆ. ಒಂದೇ ಕರ್ನಾಟಕದಲ್ಲಿ ಹಲವು ಕನ್ನಡಗಳನ್ನು ನಾವು ಕಾಣಬಹುದು. ಈ ಭಿನ್ನವಾದ ಕನ್ನಡಗಳಲ್ಲಿ ಒಂದು ಕವಿತೆಯ ಗುಣ ಹೊಂದಿದೆ. ‘ಮೂರನೇ ಕೃಷ್ಣಪ್ಪ’ ಸಿನಿಮಾದಲ್ಲೂ ಆನೇಕಲ್ ಭಾಗದ ಕನ್ನಡ ಸ್ಲ್ಯಾಂಗ್ ಕಾಣಬಹುದು. ಇಡೀ ಸಿನಿಮಾ ಇದೇ ಸ್ಲ್ಯಾಂಗ್‌ನಲ್ಲಿದೆ. ಆನೇಕಲ್‌ನಿಂದ ಹಿಡಿದು ಗೌರಿಬಿದನೂರುವರೆಗೂ ಹರಡಿರುವ ಈ ಸ್ಲ್ಯಾಂಗ್‌ನಲ್ಲಿ ಒಂಥರಾ ಮಜಾ ಇದೆ. ಆ ಭಾಷೆಯನ್ನು ಸಿನಿಮಾಗಳಲ್ಲಿ ಪ್ರಮುಖವಾಗಿ ಬಳಸಿರಲಿಲ್ಲ’ ಎನ್ನುತ್ತಾರೆ ಸಂಪತ್.

‘ಚಿತ್ರದ ನಿರ್ದೇಶಕ ನವೀನ್ ರೆಡ್ಡಿ ಆ ಭಾಷೆಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ರಂಗಾಯಣ ರಘು ಅದ್ಭುತ ಕಲಾವಿದ. ಅವರು ಈ ಸಿನಿಮಾದಲ್ಲಿ ಅತ್ಯದ್ಭುತವಾಗಿ ನಟಿಸಿದ್ದಾರೆ. ನಿರ್ದೇಶಕರಿಗೆ ಆ ಸ್ಲ್ಯಾಂಗ್ ಮೇಲೆ ಹಿಡಿತವಿತ್ತು. ಚಿತ್ರದ ಇಡೀ ಸ್ಕ್ರಿಪ್ಟ್ ಅದೇ ಸ್ಲ್ಯಾಂಗ್‌ನಲ್ಲಿತ್ತು. ನಾವು ನಿರ್ದೇಶಕರನ್ನು ಕೇಳಿಕೊಂಡು ಡೈಲಾಗ್ಸ್ ಹೇಳುತ್ತಿದ್ದೆವು. ಕಲಾವಿದನಿಗೆ ಈ ಮಾದರಿಯ ಭಾಷೆಯ ಲಯವನ್ನು ಹಿಡಿಯುವುದು ಗೊತ್ತಿರಬೇಕು. ನಾಟಕಗಳಲ್ಲಿ ನಾನು ಉತ್ತರ ಕರ್ನಾಟಕ ಭಾಷೆಯನ್ನು ಪ್ರಯೋಗ ಮಾಡಿದ್ದೆ. ಸಾಂಸ್ಕೃತಿಕವಾಗಿ ಭಾಷೆಗಳ ಜೊತೆಗೆ ಒಡನಾಡಿದ ಕಾರಣ ಈ ಸಿನಿಮಾದ ಭಾಷೆ ಕಷ್ಟವೆನಿಸಲಿಲ್ಲ’ ಎಂದು ಸಂಪತ್ ಚಿತ್ರೀಕರಣದ ಅನುಭವ ಹಂಚಿಕೊಂಡರು.

‘ಯಾರೀ ಮೂರನೇ ಕೃಷ್ಣಪ್ಪ’ ಎಂಬ ಪ್ರಶ್ನೆಗೆ, ‘ಆತನೊಬ್ಬ ಪ್ರಾಮಾಣಿಕವಾದ ಮೇಷ್ಟ್ರು. ಊರಿನಲ್ಲಿ ಗಣೇಶನ ದೇವಸ್ಥಾನದ ಉದ್ಘಾಟನೆ ಸಂದರ್ಭದಲ್ಲಿ ಉದ್ಭವಿಸುವ ಸಮಸ್ಯೆಯನ್ನು ಬಗೆಹರಿಸಲು ಹೋಗಿ, ತಾನು ಸಮಸ್ಯೆಗಳಿಗೆ ಸಿಲುಕಿಕೊಳ್ಳುತ್ತಾನೆ. ಆತನ ಸುತ್ತ ಚಿತ್ರದ ಕಥೆಯಿದೆ. ಒಂದು ಹಳ್ಳಿಯಲ್ಲಿ ನಡೆಯುವ ಕಥೆ ಇದು. ಬಹಳ ಅದ್ಭುತವಾಗಿ ಸಿನಿಮಾ ಮೂಡಿಬಂದಿದೆ’ ಎನ್ನುತ್ತಾರೆ ಸಂಪತ್.

ಮಾತು ಮುಂದುವರಿಸಿ, ‘2024ರಲ್ಲಿ ಇಲ್ಲಿಯವರೆಗೆ ಒಳ್ಳೆಯ ಸಿನಿಮಾಗಳು ಗೆಲ್ಲಲಿಲ್ಲ. ‘ಮೂರನೇ ಕೃಷ್ಣಪ್ಪ’ ಟ್ರೇಲರ್ ನೋಡಿ ಎಲ್ಲರೂ ಹೊಗಳುತ್ತಿದ್ದಾರೆ, ಖುಷಿಪಡುತ್ತಿದ್ದಾರೆ. ಆದರೆ ನನಗೆ ಒಂದೆಡೆ ಭಯವಿದೆ. ಈ ಸಿನಿಮಾದಲ್ಲಿ ನಾನು ಲೀಡ್ ರೋಲ್ ಮಾಡಿದ್ದೇನೆ. ಜನ ಸಕಾರಾತ್ಮಕವಾಗಿ ಮಾತನಾಡುತ್ತಿದ್ದರೂ ಎಲ್ಲೋ ಒಂದೆಡೆ ಆತಂಕವೂ ಇದೆ. ಒಳ್ಳೆಯ ಸಿನಿಮಾಗಳು ಗೆಲ್ಲದೇ ಇದ್ದಾಗ ಇಂಡಸ್ಟ್ರಿ ಕಥೆ ಏನು ಎನ್ನುವ ಪ್ರಶ್ನೆ ಮೂಡಿದೆ’ ಎಂದು ಸಂಪತ್ ಆತಂಕವ್ಯಕ್ತಪಡಿಸುತ್ತಾರೆ.

‘ಸಿನಿಮಾದಲ್ಲಿನ ತೆರೆ ಅವಧಿ ಬಗ್ಗೆ ನಾನು ತಲೆಕೆಡಿಸಿಕೊಂಡವನಲ್ಲ. ಈ ಅವಧಿ ಚಿಕ್ಕದೇ ಇರಲಿ ಅಥವಾ ದೊಡ್ಡದಿರಲಿ, ಕಲಾವಿದನಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಆ ಅವಧಿಯನ್ನು ಸಮೃದ್ಧವಾಗಿ ಅಭಿನಯಕ್ಕೆ ಬಳಸಿಕೊಂಡಿದ್ದೇನೆ. ಸದ್ಯಕ್ಕೆ ಸುಧೀರ್ ಶಾನುಭೋಗ್ ನಿರ್ದೇಶನದ ‘ಧರಣಿ’, ರಂಗನಾಥ್ ನಿರ್ದೇಶನದ ‘ಅಟ್ಲ’ ಹಾಗೂ ಗುಜರಾತಿಯ ಒಂದು ಬ್ಲಾಕ್‌ಬಸ್ಟರ್ ಸಿನಿಮಾ ಕನ್ನಡಕ್ಕೆ ರಿಮೇಕ್ ಆಗುತ್ತಿದ್ದು, ಇದರಲ್ಲಿ ನಟಿಸುತ್ತಿದ್ದೇನೆ. ಗುರುರಾಜ್ ಎನ್ನುವವರು ಇದನ್ನು ನಿರ್ದೇಶಿಸುತ್ತಿದ್ದಾರೆ’ ಎಂದು ತಮ್ಮ ಮುಂದಿನ ಸಿನಿಪಯಣದ ಮಾಹಿತಿ ನೀಡುತ್ತಾ ಸಂಪತ್ ಮಾತಿಗೆ ವಿರಾಮವಿತ್ತರು. ❖

ಹಾಡಿನಲ್ಲೇ ‘ಚಿದಂಬರ’ನ ಮೋಡಿ

ಎಂ.ಆನಂದರಾಜ್ ನಿರ್ದೇಶನದ ‘Chef ಚಿದಂಬರ’ ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದ ಟೈಟಲ್ ಟ್ರ್ಯಾಕ್ ರಿಲೀಸ್ ಆಗಿದೆ.

ಎಐ ರೂಪದಲ್ಲಿ ಮೂಡಿಬಂದಿರುವ ‘ಪ್ರತಿ ಬಾರಿ ಮಿತಿ ಮೀರಿ...’ ಎನ್ನುವ ಲಿರಿಕಲ್ ಹಾಡಿಗೆ ಚಿತ್ರದ ನಾಯಕ ಅನಿರುದ್ಧ ಅವರೇ ಧ್ವನಿಯಾಗಿರುವುದು ವಿಶೇಷ. ಬಿಡುಗಡೆಯಾಗುತ್ತಿರುವ ಚಿತ್ರದ ಮೊದಲ ಹಾಡು ಇದಾಗಿದ್ದು, ಶ್ರೀಗಣೇಶ್ ಪರಶುರಾಮ್ ಸಾಹಿತ್ಯ ಹಾಡಿಗಿದೆ. ರಿತ್ವಿಕ್ ಮುರಳೀಧರ್ ಸಂಗೀತ ನೀಡಿರುವ ಈ ಹಾಡಿನ ಕೆಲವು ಭಾಗ ರ್‍ಯಾಪ್ ಶೈಲಿಯಲ್ಲಿದ್ದು, ಅದನ್ನು ರೋಹಿತ್ ಹಾಡಿದ್ದಾರೆ.

‘chef ಚಿದಂಬರ’ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸ ಪೂರ್ಣವಾಗಿದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್ ನಿರ್ಮಿಸಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ ಬರೆದಿದ್ದು, ಉದಯಲೀಲಾ ಛಾಯಾಚಿತ್ರಗ್ರಹಣ, ರಿತ್ವಿಕ್ ಮುರಳೀಧರ್ ಸಂಗೀತ ನಿರ್ದೇಶನ, ವಿಜೇತ್ ಚಂದ್ರ ಸಂಕಲನವಿದೆ. ಅನಿರುದ್ಧ ಅವರಿಗೆ ಜೋಡಿಯಾಗಿ ನಿಧಿ ಸುಬ್ಬಯ್ಯ ಹಾಗೂ ‘ಲವ್ ಮಾಕ್ಟೇಲ್’ ಖ್ಯಾತಿಯ ರೇಚೆಲ್ ಡೇವಿಡ್ ಅಭಿನಯಿಸಿದ್ದಾರೆ. ಶರತ್ ಲೋಹಿತಾಶ್ವ, ಕೆ.ಎಸ್ ಶ್ರೀಧರ್, ಶಿವಮಣಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಅನಿರುದ್ಧ

ಕುಂಟೆಬಿಲ್ಲೆ– ಹಳ್ಳಿಗಾಡಿನ ಕಥನ

ಕುಂಟೆಬಿಲ್ಲೆ ಚಿತ್ರದಲ್ಲಿ ಯದು, ಮೇಘಶ್ರೀ

ಮೋಹನ್ ಕುಮಾರ ಸಿ.

ಮತ್ತೊಂದು ಗ್ರಾಮೀಣ ಸೊಗಡಿನ ಕಥೆಯೊಂದನ್ನು ತೆರೆ ಮೇಲೆ ತರಲು ‘ದಕ್ಷಯಜ್ಞ’, ‘ತರ್ಲೆ ವಿಲೇಜ್’ ಖ್ಯಾತಿಯ ನಿರ್ದೇಶಕ ಜಿಬಿಎಸ್ ಸಿದ್ದೇಗೌಡ ಮುಂದಾಗಿದ್ದಾರೆ.

ಅವರ ‘ಕುಂಟೆಬಿಲ್ಲೆ’ ಸಿನಿಮಾ ಚಿತ್ರೀಕರಣ ಮೈಸೂರಿನ ಮೈದನಹಳ್ಳಿಯಲ್ಲಿ ಭರದಿಂದ ನಡೆದಿದೆ.

ಹಳೇ ಮೈಸೂರು ಭಾಗದ ಗ್ರಾಮೀಣ ಕಥನಗಳನ್ನು ತೆರೆಯ ಮೇಲೆ ತಂದು ಯಶಸ್ಸು ಗಳಿಸಿರುವ ಸಿದ್ದೇಗೌಡ ಅವರಿಗೆ ‘ಕುಂಟೆಬಿಲ್ಲೆ’ ಮೂಲಕ ಮರೆಯಾಗುತ್ತಿರುವ ದೇಸಿ ಆಟ, ಬದಲಾಗುತ್ತಿರುವ ಗ್ರಾಮಗಳ ಭೂ– ಸ್ವರೂಪ, ಸಂಸ್ಕೃತಿಯನ್ನು ಕಟ್ಟಿಕೊಡುವ ಹಂಬಲ. ನಾಯಕ ಯದುವಿಗೆ ನಾಯಕಿಯಾಗಿ ಮೇಘಶ್ರೀ ಜೊತೆಯಾಗಿದ್ದಾರೆ.

‘ಹಳ್ಳಿಯೆಂದರೆ ಮನೆ, ಹೊಲವಷ್ಟೇ ಅಲ್ಲ. ಅಲ್ಲೊಂದು ವ್ಯಾಪಾರ– ವ್ಯವಹಾರವಿದೆ. ನೂರಾರು ಕಥೆಗಳಿವೆ. ಪ್ರೀತಿ, ಪ್ರೇಮವಿದೆ. ಆಲೆಮನೆ, ಶುಂಠಿ ಮನೆಯಲ್ಲಿ ನಡೆಯುವ ಘಟನೆಗಳು, ಅಪರಾಧಗಳನ್ನು ವಿಭಿನ್ನವಾಗಿ ಈ ಚಿತ್ರದಲ್ಲಿ ತೋರಿಸುತ್ತಿರುವೆ. ಅಸೂಯೆ, ಹೊಟ್ಟೆ ಕಿಚ್ಚು, ಜಾತೀಯತೆ ಹಳ್ಳಿಗಳನ್ನು ಸುಡುತ್ತಿದ್ದು, ಕೊನೆಗೆ ಗೆಲ್ಲುವುದು ಮನುಷ್ಯತ್ವ ಎಂಬುದನ್ನು ಚಿತ್ರದಲ್ಲಿ ನಿರೂಪಿಸುತ್ತಿದ್ದೇನೆ’ ಎಂದು ಚಿತ್ರದ ನಿರ್ದೇಶಕ ಜಿಬಿಎಸ್ ಸಿದ್ದೇಗೌಡ ಹೇಳಿದರು.

‘ಮನೋರೋಗಿ ಬಗ್ಗೆ ‘ಥಿಯರಿ’ ಎಂಬ ಸಿನಿಮಾ ಮಾಡಿದ್ದೆ. ನಿರೀಕ್ಷಿತವಾಗಿ ಚಿತ್ರ ಓಡಲಿಲ್ಲ. ‘ಋತುಮತಿ’ ಚಿತ್ರ ಬಿಡುಗಡೆ ಆಗಬೇಕಿದೆ. 2015ರಿಂದಲೂ ಸಿನಿಮಾ ನಿರ್ಮಾಣ, ನಿರ್ದೇಶನದಲ್ಲಿ ತೊಡಗಿಸಿಕೊಂಡಿರುವೆ. ಭಿನ್ನ ಕಥೆಯೊಂದನ್ನು ಹೇಳಿದರೆ, ಸಿನಿಮಾ ಚೆನ್ನಾಗಿದ್ದರೆ ಜನರು ಟಾಕೀಸ್‌ಗಳಿಗೆ ಬಂದೇ ಬರುತ್ತಾರೆ. 40 ದಿನಗಳಲ್ಲಿ ಈ ಚಿತ್ರದ ಶೂಟಿಂಗ್ ಮುಗಿಯಲಿದೆ. ಮೈಸೂರು ಸುತ್ತಮುತ್ತಲ ಚಿತ್ರೀಕರಣದ ನಂತರ ಕೆಲವು ದೃಶ್ಯಗಳಿಗೆ ಚಿಕ್ಕಮಗಳೂರು ಹಾಗೂ ಊಟಿಗೂ ತಂಡ ತೆರಳಲಿದೆ’ ಎಂದರು.

ಎಸ್.ಬಿ.ಶಿವು,ಕುಮಾರ್ ಗೌಡ ಅವರು ನಿರ್ಮಾಪಕರಾಗಿದ್ದು, ಬಿ.ಎ.ಮಧು– ಸಂಭಾಷಣೆ, ಮುಂಜಾನೆ ಮಂಜು– ಛಾಯಾಗ್ರಹಣ, ಹರಿಕಾವ್ಯ– ಸಂಗೀತ, ಸುಜಿತ್ ಅವರ ಸಂಕಲನ ಚಿತ್ರಕ್ಕಿದೆ. ಸಿನಿಮಾದ ನಟರು ಹಾಗೂ ತಂತ್ರಜ್ಞರು ಹಳೆ ಮೈಸೂರಿನ ಹಳ್ಳಿಗಾಡಿನವರೇ ಎಂಬುದು ವಿಶೇಷ. ❖

ತೆರೆಗೆ ಎರಡು ಸಿನಿಮಾ

ಸ್ಟಾರ್ ನಟರ ಸಿನಿಮಾಗಳಿಲ್ಲದ ಅವಧಿಯಲ್ಲಿ ಚಂದನವನದಲ್ಲಿ ಹೊಸಬರು ತಮ್ಮ ಅದೃಷ್ಟ ಪರೀಕ್ಷೆಗೆ ಇಳಿಯುತ್ತಿದ್ದಾರೆ. ಇಂದು (ಮೇ 17) ಎರಡು ಸಿನಿಮಾಗಳು ತೆರೆಗೆ ಬಂದಿವೆ.

‘ದಿ ಸೂಟ್’: ‘ಸೂಟ್’ ಕುರಿತಾದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಸುಜಯ್ ಆರ್ಯ ಅಭಿನಯಿಸಿದ್ದಾರೆ. ಮೂಲತಃ ಉದ್ಯಮಿಯಾಗಿರುವ ಸುಜಯ್ ಆರ್ಯ ಈ ಹಿಂದೆ ರಾಮನಾಥ್ ಋಗ್ವೇದಿ ನಿರ್ದೇಶನದ ‘ಅಧಿಕಾರ’ ಚಿತ್ರದಲ್ಲಿ ನಟಿಸಿದ್ದರು. ಭಗತ್ ರಾಜ್ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಕಮಲ್, ಸುಜಯ್, ಮಂಜುನಾಥ್ ಪಾಟೀಲ್, ದೀಪ್ತಿ ಕಾಪ್ಸೆ, ಕುಸುಮ ರಾಮಯ್ಯ, ವಿ.ನಾಗೇಂದ್ರ ಪ್ರಸಾದ್, ಗಡ್ಡ ವಿಜಿ, ಉಮೇಶ್ ಬಣಕಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸುಜಯ್ ಆರ್ಯ

‘ರಣಹದ್ದು’: ಪ್ರಸನ್ನ ಕುಮಾರ್ ನಿರ್ದೇಶಿಸಿರುವ ಈ ಚಿತ್ರದಲ್ಲಿ ಶಶಾಂಕ್ ಹಾಗೂ ಸೂರಜ್ ನಟಿಸಿದ್ದಾರೆ. ಇವರಿಬ್ಬರೂ ಪ್ರಸನ್ನ ಕುಮಾರ್ ಅವರ ಪುತ್ರರು. ಒಬ್ಬ ಮಗ ನಾಯಕನಾಗಿ, ಮತ್ತೊಬ್ಬ ಮಗ ಖಳನಾಯಕನಾಗಿ ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದಾರೆ. ಹಣವಿಲ್ಲದ ಮನುಷ್ಯರನ್ನು ಸಮಾಜ ಹೇಗೆ ನೋಡುತ್ತದೆ ಎಂಬುವುದು ಚಿತ್ರದ ಕಥಾಹಂದರ ಎಂದಿದೆ ಚಿತ್ರತಂಡ.

ಮರು ಬಿಡುಗಡೆಯ ಕಾಲ...

ಸ್ಟಾರ್ ನಟರ ಸಿನಿಮಾಗಳಿಲ್ಲದೆ ದಿನ ದೂಡುತ್ತಿರುವ ಚಂದನವನದ ತೆರೆಗಳಲ್ಲೀಗ ಮರುಬಿಡುಗಡೆಯ ಪರ್ವ. ಈ ವರ್ಷ ‘ಜಾಕಿ’ ಸಿನಿಮಾದಿಂದ ಇದು ಆರಂಭವಾಗಿದ್ದು, ಈ ಶುಕ್ರವಾರವೂ ಮುಂದುವರಿದಿದೆ.

ಉಪೇಂದ್ರ ಅಭಿಮಾನಿಗಳು ‘ಯುಐ’ ಸಿನಿಮಾ ಯಾವಾಗ ತೆರೆಗೆ ಬರಲಿದೆ ಎಂದು ಕೇಳುತ್ತಿದ್ದಾಗ, ಇತ್ತ ರಿಯಲ್ ಸ್ಟಾರ್ ಹೊಸ ಸುದ್ದಿ ನೀಡಿದ್ದಾರೆ. ‘ಎ’ ಸಿನಿಮಾ ಮೇ 17ರಂದು ರಿರಿಲೀಸ್ ಮಾಡುತ್ತಿದ್ದಾರೆ.

‘ಯುಐ’ ಸಿನಿಮಾ ವಿಎಫ್‌ಎಕ್ಸ್ ಕಾರಣದಿಂದಾಗಿ ವಿಳಂಬವಾಗುತ್ತಿದೆ ಎಂದು ಚಿತ್ರದ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ತಿಳಿಸಿದ್ದರು. 2022ರ ಜೂನ್‌ನಲ್ಲಿ ಸೆಟ್ಟೇರಿದ್ದ ಈ ಸಿನಿಮಾ ಇದೇ ಜೂನ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ. ಈ ನಡುವೆ ಮೇ 17ರಂದು ಬೆಂಗಳೂರಿನ ‘ನರ್ತಕಿ’, ‘ಪ್ರಸನ್ನ’, ‘ಕಾಮಾಕ್ಯ’, ಸಿದ್ಧೇಶ್ವರ’ ಥಿಯೇಟರ್ ಸೇರಿದಂತೆ ರಾಜ್ಯದಾದ್ಯಂತ 30ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ‘ಎ’ ರಿರಿಲೀಸ್ ಆಗಲಿದೆ. ಈಗಾಗಲೇ ಅಭಿಮಾನಿಗಳು ಟಿಕೆಟ್‌ಗಳನ್ನು ಖರೀದಿಸುತ್ತಿದ್ದಾರೆ.

ವಿಷ್ಣುವರ್ಧನ್ ನಟನೆಯ ‘ಕೃಷ್ಣಾ ನೀ ಬೇಗನೆ ಬಾರೋ’ ಸಿನಿಮಾವೂ ಬೆಂಗಳೂರಿನಲ್ಲಿ ರಿರಿಲೀಸ್ ಆಗುತ್ತಿದೆ. ವರ್ಷದ ಮೊದಲಾರ್ಧದಲ್ಲಿ ಇಲ್ಲಿಯವರೆಗೆ ಶಿವರಾಜ್‌ಕುಮಾರ್ ನಟನೆಯ ‘ಕರಟಕ ದಮನಕ’ ಹೊರತುಪಡಿಸಿ, ಸ್ಟಾರ್ ನಟರ ಸಿನಿಮಾಗಳೇ ಬಿಡುಗಡೆಯಾಗಿಲ್ಲ. ಕಳೆದ ಮಾರ್ಚ್ 15ರಂದು ಪುನೀತ್ ರಾಜ್‌ಕುಮಾರ್ ನಟನೆಯ ಹಿಟ್ ಸಿನಿಮಾ ‘ಜಾಕಿ’ ರಿರಿಲೀಸ್ ಆಗಿತ್ತು. ಇದಾದ ಬಳಿಕ ಮೇ 10ರಂದು ಪುನೀತ್ ನಟನೆಯ ‘ಪವರ್’ ಹಾಗೂ ‘ಅಂಜನಿಪುತ್ರ’ ಆದವು. ಆ.15ಕ್ಕೆ ಶಿವರಾಜ್‌ಕುಮಾರ್ ನಟನೆಯ ‘ಭೈರತಿ ರಣಗಲ್’ ಬಿಡುಗಡೆಯಾಗುತ್ತಿದೆ. ಅಲ್ಲಿಯವರೆಗೆ ಸ್ಟಾರ್ ನಟರ ಸಿನಿಮಾಗಳು ಘೋಷಣೆಯಾಗಿಲ್ಲ. ❖



‘ಎ’ ಸಿನಿಮಾ ಪೋಸ್ಟರ್

ನಗರದ ಬೃಂದಾವನ ಬಡಾವಣೆಯಲ್ಲಿ ಘಟನೆ, ಕೊಲೆ ಶಂಕೆ

ಕತ್ತು ಸೀಳಿದ ಸ್ಥಿತಿಯಲ್ಲಿ ವಿದ್ಯಾರ್ಥಿನಿ ಶವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿ ಬೃಂದಾವನ ಬಡಾವಣೆಯ ಮನೆಯೊಂದರ ಸ್ನಾನದ ಕೋಣೆಯಲ್ಲಿ ಬಿಬಿಎ ವಿದ್ಯಾರ್ಥಿನಿ ಮೃತದೇಹವು ಕತ್ತು ಸೀಳಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಪ್ರಭುದ್ಯಾ (21) ಮೃತಪಟ್ಟ ವಿದ್ಯಾರ್ಥಿನಿ.

ತಮ್ಮ ಮನೆಯ ಸ್ನಾನದ ಕೋಣೆಯಲ್ಲಿ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ. ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ವಿದ್ಯಾರ್ಥಿನಿ ತಾಯಿ ಸೌಮ್ಯಾ ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ತಾಂತ್ರಿಕ ಸಾಕ್ಷ್ಯ ಪರಿಶೀಲಿಸಲಾಗುತ್ತಿದೆ.

ಕೌಟುಂಬಿಕ ವಿಚಾರವಾಗಿ ಪತಿಯಿಂದ ಪ್ರತ್ಯೇಕವಾಗಿದ್ದ ವಿದ್ಯಾರ್ಥಿನಿ ತಾಯಿ ಸೌಮ್ಯಾ ಅವರು ಪುತ್ರಿ ಹಾಗೂ ಪುತ್ರನ ಜತೆಗೆ ಬೃಂದಾವನ ಲೇಔಟ್‌ನಲ್ಲಿ ವಾಸವಾಗಿದ್ದರು. ಸೌಮ್ಯಾ ಅವರು ಸರ್ಕಾರೇತರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು.

'ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

ಪ್ರಭುದ್ಯಾ

ಘಟನೆ ವಿವರ: 'ಬುಧವಾರ ಮಧ್ಯಾಹ್ನ ಕಾಲೇಜಿನಿಂದ ಹೊರಟಿದ್ದ ಪ್ರಭುದ್ಯಾ ಸ್ನೇಹಿತರ ಜತೆ ಪಾನಿಪುರಿ ಸೇವಿಸಿ ಮನೆಗೆ ಹೋಗುತ್ತೇನೆ ಎಂದು ತಾಯಿಗೆ ಕರೆ ಮಾಡಿ ತಿಳಿಸಿದ್ದರು. ಮಧ್ಯಾಹ್ನ 3.30ಕ್ಕೆ ಮನೆಗೆ ಬಂದ ಮೇಲೂ ತಾಯಿಗೆ ಮಾಹಿತಿ ನೀಡಿದ್ದರು. ಆ ನಂತರ ಸಂಜೆ 7 ಗಂಟೆ ಅವಧಿಯೊಳಗೆ ಘಟನೆ ನಡೆದಿದೆ' ಎಂದು ಪೊಲೀಸರು ಹೇಳಿದರು.

ಜಿಮ್‌ಗೆ ಹೋಗಿದ್ದ ಸಹೋದರ ಸಂಜೆ 7.30ರ ಸುಮಾರಿಗೆ ಮನೆಗೆ ವಾಪಸ್ಸಾಗಿದ್ದರು. ಮನೆಗೆ ಬಂದಾಗ ಮನೆಯ ಮುಂದಿನ ಬಾಗಿಲು ಬಂದ್ ಆಗಿತ್ತು. ಹಿಂದಿನ ಬಾಗಿಲಿನಿಂದ ಸಹೋದರ ಒಳಕ್ಕೆ ಪ್ರವೇಶಿಸಿದ್ದರು. ಆಗ ಸ್ನಾನದ ಕೋಣೆಯಲ್ಲಿ ಪ್ರಭುದ್ಯಾ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡಿತು. ತಕ್ಷಣವೇ ತಾಯಿ ಸೌಮ್ಯಾಗೆ ಕರೆ ಮಾಡಿ ತಿಳಿಸಿದ್ದರು. ಬಳಿಕ ಮನೆಗೆ ಬಂದ ಸೌಮ್ಯಾ ಅವರು, ಸ್ಥಳೀಯರ ಸಹಾಯ ಪಡೆದು ರಕ್ತದ ಮಡುವಿನಲ್ಲಿ ಬಿದ್ದಿದ್ದ ಪುತ್ರಿಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಷ್ಟರಲ್ಲಿಯೇ ಆಕೆ ಮೃತಪಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

'ನನ್ನ ಪುತ್ರಿ ಎಂತಹ ಪರಿಸ್ಥಿತಿಯನ್ನೂ ಧೈರ್ಯದಿಂದ ಎದುರಿಸುತ್ತಿದ್ದಳು. ಅವಳು ಆತ್ಮಹತ್ಯೆ ಮಾಡಿಕೊಳ್ಳುವಂಥ ಹುಡುಗಿ ಅಲ್ಲ. ಯಾರೋ ರಾಕ್ಷಸರು ಕೊಲೆ ಮಾಡಿ ಪರಾರಿಯಾಗಿದ್ದಾರೆ. ಸಾವಿನ ಕುರಿತು ಅನುಮಾನವಿದೆ' ಎಂದು ತಾಯಿ ಸೌಮ್ಯಾ ಹೇಳಿದರು.

'ಮನೆಗೆ ಬಂದ ಸಂದರ್ಭದಲ್ಲಿ ಕಿಟಕಿಯಲ್ಲಿ ನೋಡಿದಾಗ ಮಗಳ ಮೊಬೈಲ್ ಸೋಫಾದ ಮೇಲಿತ್ತು. ಮಗಳನ್ನು ಆಸ್ಪತ್ರೆಗೆ ಕರೆದೊಯ್ದು ಮನೆಗೆ ವಾಪಸ್ ಬಂದು ನೋಡಿದಾಗ ಮೊಬೈಲ್ ಇರಲಿಲ್ಲ' ಎಂದು ಹೇಳಿದರು.

'ನಾನು ಸಾಮಾಜಿಕ ಕಾರ್ಯಕರ್ತೆಯಾಗಿ ಎಷ್ಟೋ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಿದ್ದೇನೆ. ವ್ಯವಸ್ಥೆಯನ್ನು ಪ್ರಶ್ನಿಸಿದ್ದೇನೆ. ಆದರೆ, ನನ್ನ ಬದುಕಿನಲ್ಲೇ ದುರಂತ ಸಂಭವಿಸಿದೆ' ಎಂದು ಹೇಳಿದರು.

ಎರಡು ಡೆತ್‌ನೋಟ್ ಪತ್ತೆ

'ಘಟನಾ ಸ್ಥಳದಲ್ಲೇ ಎರಡು ಡೆತ್‌ನೋಟ್‌ಗಳು ಪತ್ತೆಯಾಗಿವೆ. ಎರಡು ಪತ್ರದಲ್ಲೂ 'ಕ್ಷಮಿಸಿ ಅಮ್ಮ...' ಎಂದಷ್ಟೇ ಇದೆ. ಆದರೆ, ಪ್ರಭುದ್ಯಾಳ ಕೈಬರಹಕ್ಕೂ ಪತ್ತೆಯಾದ ಡೆತ್‌ನೋಟ್‌ನಲ್ಲಿ ಇರುವ ಬರಹಕ್ಕೂ ಹೊಂದಾಣಿಕೆ ಆಗುತ್ತಿಲ್ಲ. ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಮೊಬೈಲ್ ಕರೆಗಳ ಪರಿಶೀಲನೆ...'

ಕೊಲೆಯಾದ ವಿದ್ಯಾರ್ಥಿನಿ ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸಿದ್ದು, ಕೆಲವು ನಂಬರ್‌ಗಳಲ್ಲಿ ಸುದೀರ್ಘವಾಗಿ ಸಂಭಾಷಣೆ ನಡೆಸಿರುವುದು ತನಿಖೆಯಿಂದ ಗೊತ್ತಾಗಿದೆ. ಅವರನ್ನು ಕರೆಸಿ ವಿಚಾರಣೆ ನಡೆಸಲಾಗುವುದು. ಮನೆಯ ಸುತ್ತಮುತ್ತಲ ರಸ್ತೆ, ಮನೆ ಹಾಗೂ ಅಂಗಡಿಗಳಲ್ಲಿ ಅಳವಡಿಸಿರುವ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಿಮ್ ತರಬೇತುದಾರ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಗೆ ವಿಡಿಯೊ ಕರೆ ಮಾಡಿ ನೇಣು ಬಿಗಿದುಕೊಂಡಂತೆ ಬೆದರಿಸಲು ಯತ್ನಿಸಿದ್ದ ವೇಳೆ ಜಿಮ್ ತರಬೇತುದಾರರೊಬ್ಬರು ಮೃತಪಟ್ಟಿದ್ದು, ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿ.ದಾಸರಹಳ್ಳಿಯ ನಿವಾಸಿ, ಜಿಮ್ ತರಬೇತುದಾರ ಅಮಿತ್‌ಕುಮಾರ್ (28) ಮೃತಪಟ್ಟವರು. ಬಿಹಾರದ ಅಮಿತ್‌ಕುಮಾರ್ ಅವರು 10 ವರ್ಷಗಳ ಹಿಂದೆ ದಾಸರಹಳ್ಳಿಗೆ ಬಂದು ನೆಲೆಸಿದ್ದರು.

'ಸ್ಥಳೀಯ ನಿವಾಸಿಯಾಗಿದ್ದ ಯುವತಿಯೊಬ್ಬಳನ್ನು ಪ್ರೀತಿಸಿ ಒಂದು ವರ್ಷದ ಹಿಂದೆ ಮದುವೆ ಆಗಿದ್ದರು. ಇತ್ತೀಚೆಗೆ ದಂಪತಿ ನಡುವೆ ಮನಸ್ತಾಪ ಉಂಟಾಗಿತ್ತು. ಪತ್ನಿ ನರ್ಸಿಂಗ್ ಕೋರ್ಸ್ ಸೇರಿದ ಬಳಿಕ ತನಗೆ ಸಮಯ ನೀಡುತ್ತಿಲ್ಲ. ಸದಾ ಮೊಬೈಲ್‌ನಲ್ಲೇ ಇರುತ್ತಾಳೆ ಎಂಬ ವಿಚಾರಕ್ಕೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಜಗಳದ ನಂತರ ಪತ್ನಿ ತವರು ಮನೆ ಸೇರಿದ್ದಳು' ಎಂದು ಪೊಲೀಸರು ಹೇಳಿದರು.

ಅಮಿತ್ ಕುಮಾರ್

'ಬಾರದ ಪತ್ನಿ': ಪತ್ನಿ ತವರು ಮನೆ ಸೇರಿದ್ದರಿಂದ ಬೇಸರಗೊಂಡಿದ್ದ ಅಮಿತ್, ಕರೆ ಮಾಡಿ ಮನೆಗೆ ವಾಪಸ್ ಬರುವಂತೆ ಮನವಿ ಮಾಡಿದ್ದರು. ಮನವೊಲಿಸುವ ಪ್ರಯತ್ನ ಮಾಡಿದ್ದರು. ಆದರೂ ಆಕೆ ವಾಪಸ್ ಆಗಿರಲಿಲ್ಲ'

ಆತ್ಮಹತ್ಯೆಯೋ? ಆಕಸ್ಮಿಕವೋ?: 'ವಾಪಸ್ ಬಾರದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕುತ್ತಿದ್ದರು. ಬುಧವಾರ ಮಧ್ಯಾಹ್ನ ಸಹ ವಿಡಿಯೊ ಕರೆ ಮಾಡಿ ನೇಣು ಬಿಗಿದುಕೊಂಡಂತೆ ಬೆದರಿಸಲು ಯತ್ನಿಸಿದ್ದರು. ಅದಾದ ಮೇಲೆ ಶವವಾಗಿ ಪತ್ತೆಯಾಗಿದ್ದಾರೆ. ಇದು ಆತ್ಮಹತ್ಯೆಯೋ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕುವ ವೇಳೆ ಆಕಸ್ಮಿಕವಾಗಿ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾರೆಯೋ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆ ಮಾಡಿಕೊಳ್ಳುವಂತೆ ಬೆದರಿಸುವ ವೇಳೆ ಅಚಾತುರ್ಯದಿಂದ ಈ ಘಟನೆ ನಡೆದಿದೆ ಎಂದು ಹೇಳಲು ಈಗಲೇ ಸಾಧ್ಯವಿಲ್ಲ. ಅಕ್ಕಪಕ್ಕದ ನಿವಾಸಿಗಳು ಕೊಠಡಿಯ ಬಾಗಿಲು ಒಡೆದು ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ತನಿಖೆ ಪ್ರಗತಿಯಲ್ಲಿದೆ' ಎಂದು ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅದಾವತ್ ತಿಳಿಸಿದರು.

'ಜಗಳವಾದ ಮೇಲೆ ಅವರ ಪತ್ನಿ ಪದೇ ಪದೇ ತವರು ಮನೆಗೆ ಹೋಗುತ್ತಿದ್ದರು. ಮತ್ತೆ ಕರೆ ಮಾಡಿ ಕರೆಸಿಕೊಳ್ಳುತ್ತಿದ್ದ. ಆದರೆ, ಈ ಬಾರಿ ಆಕೆ ಬಂದಿರಲಿಲ್ಲ' ಎಂದು ಪೊಲೀಸರು ಹೇಳಿದರು.

ಹೆರಿಗೆ: ದೇಹದಲ್ಲಿ ಬಟ್ಟೆ ಬಿಟ್ಟ ವೈದ್ಯರು!

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಯು ಹೆರಿಗೆ ನಂತರ ರಕ್ತಸ್ರಾವ ತಡೆಯಲು ಮಹಿಳೆ ದೇಹದೊಳಗೆ ಮೂರು ಮೀಟರ್ ಡ್ರೆಸ್ಸಿಂಗ್ ಬ್ಯಾಂಡೇಜ್ ಬಟ್ಟೆಯನ್ನು ಹಾಗೆಯೇ ಬಿಟ್ಟು ಎಡವಟ್ಟು ಮಾಡಿದ್ದಾರೆ.

ಜಿಲ್ಲೆಯ ಮಾಲೂರು ತಾಲ್ಲೂಕಿನ ರಾಮಸಾಗರದ ಚಂದ್ರಿಕಾ ಎಂಬುವರು ಹೆರಿಗೆಗಾಗಿ ಮೇ 5ರಂದು ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದರು. ಸಹಜ ಹೆರಿಗೆ ನಂತರ ಗಂಡು ಮಗುವಿಗೆ ಜನ್ಮ ನೀಡಿದ್ದರು. ಹೆರಿಗೆ ನಂತರ ರಕ್ತಸ್ರಾವ ತಡೆಗೆ ಆಕೆಯ ದೇಹದಲ್ಲಿ ಡ್ರೆಸ್ಸಿಂಗ್ ಬ್ಯಾಂಡೇಜ್ ಬಟ್ಟೆ ಇಟ್ಟ ವೈದ್ಯರು ಹಾಗೂ ಸಿಬ್ಬಂದಿ ಬಳಿಕ ಅದನ್ನು ಅಲ್ಲಿಯೇ ಮರೆತು ಮಹಿಳೆಯನ್ನು ಮನೆಗೆ ಕಳಿಸಿದ್ದಾರೆ.

ತನಿಖೆಗೆ ಸಮಿತಿ ರಚಿಸಲಾಗಿದೆ. ತಪ್ಪಾಗಿದ್ದರೆ ಕ್ರಮ ಆಗುತ್ತದೆ. ವೈದ್ಯರಿಂದ ತಪ್ಪಾಗಿಲ್ಲ; ಜೊತೆಗಿದ್ದ ಸಿಬ್ಬಂದಿ ಲೋಪ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ.

ಡಾ.ಎಸ್.ಎನ್ ವಿಜಯಕುಮಾರ್, ಜಿಲ್ಲಾ ಶಸ್ತ್ರಚಿಕಿತ್ಸಕ, ಎಸ್‌ಎನ್‌ಆರ್ ಆಸ್ಪತ್ರೆ

ಮನೆಗೆ ಹೋದ ಮಹಿಳೆಗೆ ನಾಲ್ಕೈದು ದಿನದ ನಂತರ ತೀವ್ರ ಹೊಟ್ಟೆ ನೋವು ಕಾಣಿಸಿಕೊಂಡು ಆರೋಗ್ಯ ಬಿಗಡಾಯಿಸಿದೆ. ತಕ್ಷಣ ಸ್ಥಳೀಯ ನರ್ಸಿಂಗ್ ಹೋಂ ವೈದ್ಯರ ಬಳಿ ತೋರಿಸಿದ್ದಾರೆ.

ಹೆರಿಗೆಯಾದ ಸ್ಥಳದ ಗಾಯಕ್ಕೆ ಮುಲಾಮು ಹಚ್ಚುವಾಗ ಬ್ಯಾಂಡೇಜ್ ಬಟ್ಟೆ ಕಂಡು ಬಂದಿದೆ. ವೈದ್ಯರು ಬಟ್ಟೆಯನ್ನು ಹೊರ ತೆಗೆದ ಬಳಿಕ ಬಾಣಂತಿ ಚೇತರಿಸಿಕೊಂಡಿದ್ದಾಳೆ.

ಪ್ರಕರಣದ ಬಗ್ಗೆ ಬಾಣಂತಿಯ ಪತಿ ರಾಜೇಶ್ ಅವರು ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಎಸ್.ಎನ್. ವಿಜಯಕುಮಾರ್ ಅವರಿಗೆ ದೂರು ನೀಡಿದ್ದಾರೆ.

'ಮತದಾನಕ್ಕೆ ಬಸ್ ಹೆಚ್ಚಳ–ಆಯೋಗಕ್ಕೆ ಅಧಿಕಾರವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತ ಕೇಂದ್ರಗಳಿಗೆ ತೆರಳಿ ಮತದಾನ ಮಾಡಲು ಮತದಾರರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸುವಂತೆ ರಾಜ್ಯ ಸರ್ಕಾರ ಹಾಗೂ ಸಾರಿಗೆ ಇಲಾಖೆಗೆ ಸೂಚಿಸಲು ಕೇಂದ್ರ ಚುನಾವಣಾ ಆಯೋಗಕ್ಕೆ ಅವಕಾಶ ಅಥವಾ ಅಧಿಕಾರ ಇಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಗೋಗಿ ಗ್ರಾಮದ ಸೈಯದ್ ಖಲೀಲುಲ್ಲಾ ಹುಸೇನಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಮತ್ತು ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಕೇಂದ್ರ ಚುನಾವಣಾ ಆಯೋಗದ ಪರ ಹಾಜರಿದ್ದ ವಕೀಲ ಶರತ್ ದೊಡವಾಡ ಆಕ್ಷೇಪಣೆ ಸಲ್ಲಿಸಿ, 'ಮತದಾರರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲು ಜನಪ್ರತಿನಿಧಿಗಳ ಕಾಯ್ದೆ ಅಡಿಯಲ್ಲಿ ಆಯೋಗಕ್ಕೆ ನಿರ್ಬಂಧವಿದೆ. ಒಂದೊಮ್ಮೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿದರೆ ಅದು ಕೆಟ್ಟ ರೂಢಿಯಾಗುತ್ತದೆ. ಅರ್ಜಿದಾರರ ಮನವಿ ಪರಿಗಣಿಸಲಾಗದು. ಅಂತೆಯೇ, ಅರ್ಜಿ ಸಲ್ಲಿಕೆಯಾದ ನಂತರ ಈಶಾನ್ಯ ಪದವೀಧರರ ಕ್ಷೇತ್ರದಲ್ಲಿದ್ದ 160 ಮತಗಟ್ಟೆಗಳನ್ನು 195ಕ್ಕೆ ಹೆಚ್ಚಿಸಲಾಗಿದೆ' ಎಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಆಯೋಗವು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಅರ್ಜಿದಾರರು ಕೋರಿರುವ ಎರಡು ಮನವಿಗಳಿಗೂ ಉತ್ತರ ದೊರತಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿತು.

'ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಮತದಾನ ಮಾಡಲು ಉಚಿತ ಬಸ್ ವ್ಯವಸ್ಥೆ ಕಲ್ಪಿಸಲು ಮತ್ತು ಮತಗಟ್ಟೆಗಳ ಸಂಖ್ಯೆಯನ್ನು 160ರಿಂದ 250ಕ್ಕೆ ಹೆಚ್ಚಿಸಲು ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಪ್ರೇಮ ಪ್ರಕರಣ: ಯುವಕ ಕೊಲೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಮಹಾಂತೇಶ ನಗರದ ರಾಷ್ಟ್ರೀಯ ಹೆದ್ದಾರಿಯ ಸೇತುವೆ ಬಳಿ ಕನಕದಾಸ ವೃತ್ತದಲ್ಲಿ ಗುರುವಾರ ಸ್ಕ್ರೂಡ್ರೈವರ್‌ನಿಂದ ಚುಚ್ಚಿ ಯುವಕನ ಕೊಲೆ ಮಾಡಲಾಗಿದೆ.

'ಪ್ರೀತಿ– ಪ್ರೇಮದ ವಿಷಯವೇ ಕೊಲೆಗೆ ಕಾರಣ' ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಧಿ ನಗರದ ನಿವಾಸಿ, ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಇಬ್ರಾಹಿಂ ಗೌಸ್ (22) ಕೊಲೆಯಾದ ಯುವಕ. ಇದೇ ಪ್ರದೇಶದ ಬೈಕ್ ಮೆಕ್ಯಾನಿಕ್ ಮುಜಮಿಲ್ ಸತ್ತಿಗೇರಿ (23) ಆರೋಪಿ.

'ಮುಜಮಿಲ್ ಅವರ ಸಹೋದರಿ ಹಾಗೂ ಇಬ್ರಾಹಿಂ ಕಳೆದ ಕೆಲ ವರ್ಷಗಳಿಂದ ಪ್ರೀತಿಸುತ್ತಿದ್ದರು. ಮದುವೆ ಮಾಡಿಕೊಡುವಂತೆ ಯುವತಿಯ ಮನೆಯವರಲ್ಲಿ ಮಾತುಕತೆ ನಡೆಸಿದ್ದರು. ಈ ಪ್ರೇಮ ವಿವಾಹಕ್ಕೆ ಹುಡುಗಿ ಮನೆಯವರು ನಿರಾಕರಿಸಿದ್ದರು. ಅಲ್ಲದೇ, ಪರಸ್ಪರ ದೂರ ಇರುವಂತೆ ಪ್ರೇಮಿಗಳಿಗೆ ತಾಕೀತು ಮಾಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ರಾಹಿಂ ಗೌಸ್

'ಗುರುವಾರ ಯುವತಿಯನ್ನು ಭೇಟಿ ಮಾಡಿದ ಇಬ್ರಾಹಿಂ ಅವಳನ್ನು ಬೈಕಿನಲ್ಲಿ ಸುತ್ತಾಡಿಸುತ್ತಿದ್ದ. ಇದನ್ನು ಕಂಡು ಮುಜಮಿಲ್ ಬೈಕ್ ನಿಲ್ಲಿಸಿ ತಕರಾರು ತೆಗೆದ. ತನ್ನೊಂದಿಗೆ ಮನೆಗೆ ಬರುವಂತೆ ಸಹೋದರಿಯನ್ನು ಒತ್ತಾಯಿಸಿದ. ಯುವತಿ ಅದಕ್ಕೆ ಒಪ್ಪಲಿಲ್ಲ. ಈ ವೇಳೆ ಇಬ್ಬರೂ ಯುವಕರ ಮಧ್ಯೆ ಮಾತಿನ ಚಕಮಕಿ ನಡೆಯಿತು' ಎಂದು ಮಾಳಮಾರುತಿ ಠಾಣೆಯ ಸಿಪಿಐ ಜೆ.ಎಂ. ಕಾಲಿಮಿರ್ಚಿ ತಿಳಿಸಿದ್ದಾರೆ.

'ಮುಜಮಿಲ್ ತನ್ನ ಬಳಿ ಇದ್ದ ಸ್ಕ್ರೂಡ್ರೈವರ್‌ನಿಂದ ಇಬ್ರಾಹಿಂನ ಹೊಟ್ಟೆಗೆ ಚುಚ್ಚಿದ. ಸ್ಥಳದಲ್ಲಿ ಬಿದ್ದು ಒದ್ದಾಡುತ್ತಿದ್ದ ಯುವಕನ ಕಂಡು ಅಲ್ಲಿದ್ದ ಸಂಚಾರ ಠಾಣೆ ಪೊಲೀಸರು ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಯುವಕ ಕೊನೆಯುಸಿರೆಳೆದ' ಎಂದು ಕಾಲಿಮಿರ್ಚಿ ತಿಳಿಸಿದ್ದಾರೆ. 'ಪ್ರಕರಣದ ಆರೋಪಿಯನ್ನು ಬಂಧಿಸಲಾಗಿದೆ' ಎಂದೂ ಸಿಪಿಐ ಹೇಳಿದ್ದಾರೆ.

'ಶಾಹಿ ಈದ್ಗಾ: ಆಸ್ತಿ ಮಾಲೀಕತ್ವದ ದಾಖಲೆ ಸಲ್ಲಿಸಿಲ್ಲ'

ಪ್ರಯಾಗ್‌ರಾಜ್(ಪಿಟಿಐ): 'ವಿವಾದದಲ್ಲಿರುವ ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿ ಮಸೀದಿ ಸಮಿತಿ ಅಥವಾ ಸುನ್ನಿ ಕೇಂದ್ರೀಯ ವಕ್ಫ್ ಮಂಡಳಿ ಈವರೆಗೆ ಯಾವುದೇ ದಾಖಲೆ ಸಲ್ಲಿಸಿಲ್ಲ' ಎಂದು ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಪ್ರಕರಣದ ಹಿಂದೂ ಪರ ಅರ್ಜಿದಾರರು ಅಲಹಾಬಾದ್ ಹೈಕೋರ್ಟ್‌ಗೆ ಗುರುವಾರ ತಿಳಿಸಿದ್ದಾರೆ.

'ವಿದ್ಯುತ್ ಸಂಪರ್ಕ ಮಸೀದಿ ಸಮಿತಿ ಅಥವಾ ವಕ್ಫ್ ಮಂಡಳಿ ಹೆಸರಿನಲ್ಲಿ ಇಲ್ಲ. ವಿವಾದಿತ ಸ್ಥಳದಲ್ಲಿ ಕಾನೂನು ಬಾಹಿರವಾಗಿ ವಿದ್ಯುತ್ ಬಳಕೆ ಆಗುತ್ತಿದ್ದು, ವಿದ್ಯುತ್ ಇಲಾಖೆಯು ಎಫ್‌ಐಆರ್ ದಾಖಲಿಸಿದೆ' ಎಂದು ತಿಳಿಸಿದ್ದಾರೆ. ಹಿಂದೂ ಪರ ಅರ್ಜಿದಾರರು ಸಲ್ಲಿಸಿರುವ ಮೇಲ್ಮನವಿ ಸಮರ್ಥನೀಯವೇ ಎಂದು ಪ್ರಶ್ನಿಸಿ ಮುಸ್ಲಿಂ ಕಡೆಯವರು ಸಲ್ಲಿಸಿರುವ ಅರ್ಜಿ ಕುರಿತು ನ್ಯಾಯಮೂರ್ತಿ ಮಯಂಕ್ ಕುಮಾರ್ ಜೈನ್ ಅವರಿದ್ದ ಪೀಠವು ವಿಚಾರಣೆ ನಡೆಸಿತು.

ಕೊರಟಗೆರೆ ನಿವಾಸಿ ಬಂಧಿಸಿದ ಕೆಂಗೇರಿ ಪೊಲೀಸರು

ಗೃಹ ಸಚಿವರ ಆಪ್ತನೆಂದು ಹೇಳಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕೊರಟಗೆರೆ: ಮೆಡಿಕಲ್ ಸೀಟು, ಕಡಿಮೆ ದರಕ್ಕೆ ನಿವೇಶನ, ಬ್ಯಾಂಕ್‌ನಿಂದ ಕೋಟ್ಯಂತರ ರೂಪಾಯಿ ಸಾಲ ಕೊಡಿಸುವುದಾಗಿ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸುತ್ತಿದ್ದ ತುಮಕೂರು ಜಿಲ್ಲೆಯ ಕೊರಟಗೆರೆಯ ಮಹಮ್ಮದ್ ಜುಬೇರ್ (30) ಎಂಬಾತನನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ಸಾಯಿದ ತಬಸುಂ ಎಂಬುವರಿಗೆ ₹1.20 ಕೋಟಿ ಹಾಗೂ 186 ಗ್ರಾಂ ಚಿನ್ನ ವಂಚನೆ ಮಾಡಿದ್ದ ಸಂಬಂಧ ದಾಖಲಾಗಿದ್ದ ದೂರಿನ ತನಿಖೆ ಕೈಗೊಂಡಿದ್ದ ಕೆಂಗೇರಿ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಮುಖ್ಯಾಂಶಗಳು

- ಗೃಹ ಸಚಿವರ ಆಪ್ತ ಎಂದು ಹೇಳಿಕೊಳ್ಳುತ್ತಿದ್ದ ವ್ಯಕ್ತಿ
- ವಿವಿಧೆಡೆ 14 ದೂರುಗಳು ದಾಖಲು
- ಹಲವು ಜಿಲ್ಲೆಗಳಲ್ಲಿ ಜನರಿಗೆ ವಂಚಿಸಿದ ಆರೋಪ

'ಸದ್ಯಕ್ಕೆ ಆರೋಪಿ ವಂಚಿಸಿದ್ದ ₹80 ಲಕ್ಷ ಹಣದ ಮಾಹಿತಿ ಸಿಕ್ಕಿದೆ. ಉಳಿಕೆ ಹಣವನ್ನು ಎಲ್ಲಿ ಹೂಡಿಕೆ ಮಾಡಿದ್ದ ಎಂಬುದನ್ನು ಪತ್ತೆ ಮಾಡಲು ತನಿಖೆ ಮುಂದುವರಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನಾಲ್ಕು ದಿನಗಳ ಕಾಲ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ತುಮಕೂರು ಭಾಗದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರ ಆಪ್ತನೆಂದು ಹೇಳಿಕೊಂಡು ಓಡಾಡುತ್ತಿದ್ದ. ಅಲ್ಲದೇ ವಿವಿಧ ಇಲಾಖೆ ಅಧಿಕಾರಿಗಳ ಮೊಹರು ನಕಲು ಮಾಡಿ ವಂಚಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.


ಮಹಮದ್ ಜುಬೇರ್

'ಗೃಹ ಸಚಿವರ ಜೊತೆಗಿದ್ದ ಫೋಟೊ ಹಾಗೂ ವಿಡಿಯೊ ತೋರಿಸಿ ಸಾರ್ವಜನಿಕರನ್ನು ನಂಬಿಸುತ್ತಿದ್ದ. ಅಧಿಕಾರಿಗಳ ನಕಲಿ ಲೆಟರ್ ಹೆಡ್ ಬಳಕೆ ಮಾಡುತ್ತಿದ್ದನೆಂದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಂಗೇರಿ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಆರೋಪಿ ವಿರುದ್ಧ 14 ಪ್ರಕರಣಗಳು ದಾಖಲಾಗಿದ್ದವು. ರಾಜ್ಯದ ಹಲವು ಜಿಲ್ಲೆಗಳ ಸಾರ್ವಜನಿಕರನ್ನು ವಂಚಿಸಿದ್ದಾನೆ. ವಂಚನೆ ಮಾಡಿದ್ದ ಹಣದಲ್ಲಿ ಮೋಜಿನ ಜೀವನ ನಡೆಸುತ್ತಿದ್ದ. ಇಟ್ಟಿಗೆ ಫ್ಯಾಕ್ಟರಿಗಳಿಗೆ ಅಕ್ರಮವಾಗಿ ಮಣ್ಣು ಪೂರೈಕೆ ಮಾಡುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

ಬಹುತೇಕ ಖಾಸಗಿ ಶಾಲೆಗಳಲ್ಲಿ ಜಾರಿ • ಪೋಷಕರಿಂದ ತೀವ್ರ ಆಕ್ಷೇಪ

30ರಿಂದ 40ರಷ್ಟು ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಅನುದಾನಿತ ಶಾಲೆಗಳು 2024–25ನೇ ಸಾಲಿನ ಶುಲ್ಕವನ್ನು ಶೇ 30ರಿಂದ 40ರಷ್ಟು ಶುಲ್ಕ ಹೆಚ್ಚಿಸಿವೆ.

ಒಂದೇ ಬಾರಿಗೆ ಶುಲ್ಕವನ್ನು ಗಣನೀಯವಾಗಿ ಏರಿಕೆ ಮಾಡಿದ್ದರಿಂದ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಹೊರೆ ಆಗಿದೆ ಎಂದು ಪೋಷಕರು ದೂರಿದ್ದಾರೆ.

ಖಾಸಗಿ ಶಾಲೆಗಳನ್ನು ನಿಯಂತ್ರಿಸುವ ಶಿಕ್ಷಣ ಇಲಾಖೆಯ ಆದೇಶವನ್ನು ಕಳೆದ ವರ್ಷ ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ರಾಜ್ಯದ ಕೆಲ ಅನುದಾನರಹಿತ ಖಾಸಗಿ ಶಾಲೆಗಳು ನಿರ್ಧರಿಸಿದ್ದವು.

ಶಿಕ್ಷಣ ಇಲಾಖೆ ಎರಡು ದಶಕಗಳಿಂದ ಮಕ್ಕಳ ಶುಲ್ಕ ನಿಗದಿ ಸೇರಿದಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಕೆಲ ಚಟುವಟಿಕೆಗಳನ್ನು ನಿಯಂತ್ರಿಸಿತ್ತು. ಈ ಆದೇಶದಿಂದಾಗಿ ಖಾಸಗಿ ಶಾಲೆಗಳು ಪ್ರತಿ ವರ್ಷ ಶುಲ್ಕ ಹೆಚ್ಚಳ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ.

ಸರ್ಕಾರದ ಆದೇಶದ ವಿರುದ್ಧ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ಕುಸ್ಮ) ಹೈಕೋರ್ಟ್ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ್ದ ಕೋರ್ಟ್, 'ಸರ್ಕಾರದ ಅನುದಾನ ಪಡೆಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಿಲ್ಲ' ಎಂದು ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ಶಿಕ್ಷಣ ಇಲಾಖೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಸೂಚನೆಯಂತೆ ಮತ್ತೆ ಹೈಕೋರ್ಟ್‌ನಲ್ಲೇ ಮೇಲ್ಮನವಿ ವಿಚಾರಣೆ ನಡೆದಿತ್ತು. ಈ ಮಧ್ಯೆ 2017ರಲ್ಲಿ ಮರು ಆದೇಶ ಹೊರಡಿಸಿದ್ದ ಇಲಾಖೆ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಿತ್ತು. ಎರಡೂ ಆದೇಶಗಳನ್ನೂ ಹೈಕೋರ್ಟ್ ವಜಾಗೊಳಿಸಿತ್ತು.

'ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಅನುದಾನ ಪಡೆಯುವುದಿಲ್ಲ. ಮೂಲ ಸೌಕರ್ಯ, ಶಿಕ್ಷಕರಿಗೆ ವೇತನ ಸೇರಿದಂತೆ ಎಲ್ಲ ವೆಚ್ಚವನ್ನೂ ಸಂಸ್ಥೆಗಳೇ ಭರಿಸಬೇಕಿದೆ. ಹಾಗಾಗಿ, ಶುಲ್ಕ ಹೆಚ್ಚಳ ಅನಿವಾರ್ಯ. ಎಷ್ಟು ಪ್ರಮಾಣದಲ್ಲಿ ಹೆಚ್ಚಳ ಮಾಡಬೇಕು ಎನ್ನುವ ಕುರಿತು ಆಯಾ ಸಂಸ್ಥೆಗಳೇ ನಿರ್ಧಾರ ತೆಗೆದುಕೊಳ್ಳಲು ತೀರ್ಮಾನಿಸಲಾಗಿತ್ತು. ಕೆಲ ಸಂಸ್ಥೆಗಳು ಕಳೆದ ವರ್ಷವೇ ಶುಲ್ಕ ಹೆಚ್ಚಳ ಮಾಡಿವೆ. ಇನ್ನೂ ಕೆಲವು ಸಂಸ್ಥೆಗಳು ಈ ವರ್ಷ ಮಾಡಿವೆ' ಎನ್ನುತ್ತಾರೆ ಕುಸ್ಮ ಗೌರವ ಕಾರ್ಯದರ್ಶಿ ಎ.ಮರಿಯಪ್ಪ.

ಮುಖ್ಯಾಂಶಗಳು

- ಶುಲ್ಕ ಹೆಚ್ಚಳ– ಆಯಾ ಶಾಲೆಗಳ ನಿರ್ಧಾರ
- ಶುಲ್ಕ ಹೆಚ್ಚಳ ಅನಿವಾರ್ಯ- ಖಾಸಗಿ ಶಾಲೆಗಳ ಸಮರ್ಥನೆ
- ಶಿಕ್ಷಣ ಕೊಡಿಸುವುದು ಹೊರೆ ಪೋಷಕರ ಅಳಲು

ಮಗಳು 6ನೇ ತರಗತಿ ಓದುತ್ತಿದ್ದಾಳೆ. ₹40 ಸಾವಿರ ಇದ್ದ ಶುಲ್ಕವನ್ನು ₹64 ಸಾವಿರಕ್ಕೆ ಹೆಚ್ಚಿಸಿದ್ದಾರೆ. ಆ ಶಾಲೆಯಿಂದ ಬಿಡಿಸಿ ಕಡಿಮೆ ಶುಲ್ಕದ ಶಾಲೆಗೆ ಸೇರಿಸಲು ನಿರ್ಧರಿಸಿದ್ದೇವೆ

- ಗಾಯತ್ರಿ, ಖಾಸಗಿ ಉದ್ಯೋಗಿ

ಲೈಂಗಿಕ ದೌರ್ಜನ್ಯ: ಗೋಷ್ಠಿಯಲ್ಲಿ ಕಾನೂನು ತಜ್ಞರ ಅಭಿಮತ

'ವಿಶೇಷ ನ್ಯಾಯಾಲಯ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಆರೋಪಿಗಳು ಅತ್ಯಂತ ಪ್ರಭಾವಿಗಳಾಗಿರುವುದರಿಂದ, ತನಿಖೆ ವಿಳಂಬವಾದಷ್ಟು ಸಾಕ್ಷ್ಯನಾಶವಾಗುವ ಸಾಧ್ಯತೆಯಿದೆ. ಈ ರೀತಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕಾಗದ ಅಗತ್ಯವಿದೆ' ಎಂದು ಕಾನೂನು ತಜ್ಞರು ಅಭಿಮತ ವ್ಯಕ್ತಪಡಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಹಾಸನದ ಲೈಂಗಿಕ ದೌರ್ಜನ್ಯ ಪೆನ್‌ಡ್ರೈವ್ ಹಂಚಿಕೆ: ಮಾಯವಾಗುತ್ತಿದೆ ಲಿಂಗ ಸಂವೇದನೆ, ನಮ್ಮ ಜವಾಬ್ದಾರಿಗಳೇನು?' ಸಮಾಲೋಚನಾ ಗೋಷ್ಠಿಯಲ್ಲಿ ವಕೀಲರು ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರು ಅಭಿಮತ ವ್ಯಕ್ತಪಡಿಸಿದರು.

ಹೈಕೋರ್ಟ್ ವಕೀಲ ಬಿ.ಟಿ. ವೆಂಕಟೇಶ್, 'ದೇಶದಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣಗಳು ಅಷ್ಟಾಗಿ ವರದಿಯಾಗುತ್ತಿಲ್ಲ. ಇದಕ್ಕೆ ಇಲ್ಲಿನ ವ್ಯವಸ್ಥೆಯೇ ಮೂಲ ಕಾರಣ. ಪ್ರಕರಣ ದಾಖಲಿಸಿದ ಬಳಿಕ ಸಂತ್ರಸ್ತೆಯರು ಸಾಕಷ್ಟು ಹಿಂಸೆ ಅನುಭವಿಸುತ್ತಾರೆ. ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ವಿಡಿಯೊಗಳು ಹೊರ ಬಂದಿದ್ದರಿಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು. ಇಲ್ಲವಾದಲ್ಲಿ ಈ ಪ್ರಕರಣವೂ ಬಹಿರಂಗವಾಗದೆ ಮುಚ್ಚಿಹೋಗಿ, ಇನ್ನಷ್ಟು ಮಂದಿ ದೌರ್ಜನ್ಯಕ್ಕೆ ಒಳಗಾಗುವ ಸಾಧ್ಯತೆಗಳಿದ್ದವು. ಈ ರೀತಿಯ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥವಾಗಲು ಕನಿಷ್ಠ ಮೂರು ವರ್ಷಗಳು ಬೇಕಾಗುತ್ತವೆ. ಕೆಲ ಪ್ರಕರಣಗಳು 10–15 ವರ್ಷಗಳು ನಡೆದ ಉದಾಹರಣೆ ಇದೆ. ಆದ್ದರಿಂದ ಸಂತ್ರಸ್ತೆಯರಿಗೆ ಮಾನಸಿಕ ಸ್ಥೈರ್ಯ ತುಂಬುವ ಹಾಗೂ ಅವರಿಗೆ ರಕ್ಷಣೆ ಒದಗಿಸುವ ಕೆಲಸವೂ ಆಗಬೇಕು' ಎಂದು ಹೇಳಿದರು.

'ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ 800 ಮಂದಿ ಸಂತ್ರಸ್ತೆಯರಿದ್ದಾರೆ ಎನ್ನಲಾಗುತ್ತಿದೆ. ಅವರ ರಕ್ಷಣೆಗೆ ಸರ್ಕಾರಯೋಜನೆಯನ್ನುರೂಪಿಸಬೇಕು. ಪ್ರಕರಣದಲ್ಲಿ ಗೌಪ್ಯತೆ ಕಾಯ್ದುಕೊಳ್ಳುವುದು ಕೂಡ ಮುಖ್ಯ. ಆದ್ದರಿಂದ ಈ ರೀತಿ ಪ್ರಕರಣಗಳಿಗೆ ಪ್ರತ್ಯೇಕ ವಿಶೇಷ ನ್ಯಾಯಾಲಯ ಅಗತ್ಯ' ಎಂದರು.

ಸಾಕ್ಷ್ಯ ನಾಶ ಸಾಧ್ಯತೆ: ವಕೀಲ ಸಿ.ಎಚ್. ಹನುಮಂತರಾಯ, 'ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಆರೋಪಿಯು ಮಾಜಿ ಪ್ರಧಾನಿ ಅವರ ಪುತ್ರ ಹಾಗೂ ಮಾಜಿ ಮುಖ್ಯಮಂತ್ರಿ ಸಹೋದರರಾಗಿದ್ದಾರೆ. ಈ ಪ್ರಕರಣದ ತನಿಖೆ ನಡೆಸುವವರು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳಾಗಬೇಕು. ಬಿ.ಕೆ.ಸಿಂಗ್ ಹೊರತುಪಡಿಸಿದರೆ ವಿಶೇಷ ತನಿಖಾ ತಂಡದಲ್ಲಿರುವವರು ತನಿಖೆಯಲ್ಲಿ ಅಷ್ಟಾಗಿ ಹೆಸರು ಮಾಡಿಲ್ಲ. ಇದರಿಂದ ಪ್ರಕರಣ ಆರಂಭದಿಂದಲೂ ದಿಕ್ಕು ತಪ್ಪುತ್ತಾ ಇದೆ. ಇಂತಹ ಪ್ರಕರಣಗಳು ಬಂದಾಗ ರಾಜ್ಯದ ಅಧಿಕಾರಿಗಳೇ ತನಿಖೆ ನಡೆಸಬೇಕೆಂದಿಲ್ಲ, ಹೊರಗಿನ ಅಧಿಕಾರಿಗಳನ್ನೂ ನೇಮಿಸಬಹುದಾಗಿದೆ. ಆರೋಪಿಗೆ ಜಾಮೀನು ನೀಡಿರುವುದರಿಂದ ಸಾಕ್ಷ್ಯ ನಾಶವಾಗುವ ಸಾಧ್ಯತೆಯಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, 'ಪ್ರಕರಣಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ವೀಕ್ಷಿಸಿದಾಗ ಅಸಹಾಯಕ ಮಹಿಳೆಯರನ್ನು ದುರ್ಬಳಕೆ ಮಾಡಿಕೊಂಡಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ದೌರ್ಜನ್ಯ ಸೇರಿ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಹಿಳೆಯರು ದೂರು ನೀಡಲು ಬಂದಾಗ ಸ್ಥಳೀಯ ಪೊಲೀಸರು ಸೌಜನ್ಯದಿಂದ ನಡೆದುಕೊಳ್ಳಬೇಕು' ಎಂದು ಹೇಳಿದರು.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ, 'ಪ್ರಕರಣದ ತನಿಖೆ ಕುಂಟುತ್ತಾ ಸಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರಾದ ಎಸ್.ಜಿ.ಸಿದ್ಧರಾಮಯ್ಯ, ವಿಜಯಾ, ಡಾ.ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ ಒಳಗೊಂಡಂತೆ ಪ್ರಗತಿಪರರ ಭಾಗವಹಿಸಿದ್ದರು.

ಗೋಷ್ಠಿಯಲ್ಲಿ ಸಿ.ಎಚ್.ಹನುಮಂತರಾಯ ಮಾತನಾಡಿದರು. ಬಿ.ಟಿ. ವೆಂಕಟೇಶ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಬಿ.ಕೆ. ಶಿವರಾಂ ಹಾಗೂ ಎಸ್.ಜಿ.ಸಿದ್ಧರಾಮಯ್ಯ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

'ಮಹಿಳಾ ಪರ ಕಾಳಜಿ ಆದ್ಯತೆಯಾಗಲಿ'

ಬೆಂಗಳೂರು: 'ಪ್ರೇಮದ ಕಾರಣ ಹೇಳಿ ಹೆಣ್ಣುಮಕ್ಕಳ ಹತ್ಯೆ ಮಾಡುವ ಪ್ರಕರಣಗಳು ರಾಜ್ಯದಲ್ಲಿ ನಡೆಯುತ್ತಿದ್ದು, ಇಂತಹ ಕ್ರೌರ್ಯಕ್ಕೆ ತ್ವರಿತವಾಗಿ ಕ್ರಮಕೊಳ್ಳುವುದು ಸರ್ಕಾರದ ಆದ್ಯತೆ ಆಗಬೇಕು' ಎಂದು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಒತ್ತಾಯಿಸಿದೆ.

'ಇಂತಹ ಪ್ರಕರಣಗಳ ಬಗ್ಗೆ ಸುಳಿವಿದ್ದರೂ ಮುಂಜಾಗ್ರತೆ ವಹಿಸದ ಅಧಿಕಾರಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಮಹಿಳಾ ಪರ ಕಾಳಜಿ ಸರ್ಕಾರದ ಆದ್ಯತೆಯಾಗಬೇಕು' ಎಂದು ಆಗ್ರಹಿಸಿದೆ.

'ರಾಜ್ಯದಲ್ಲಿ ಮಹಿಳೆಯರ ಮಾನ ತೆಗೆದ ಹಾಸನ ಪೆನ್‌ಡ್ರೈವ್ ಪ್ರಕರಣ ದೇಶ ವ್ಯಾಪಿ ಹರಡಿದ್ದು, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಲೇಬೇಕು. ಅತ್ಯಾಚಾರ ಮಾಡಿದವರು, ಪೆನ್‌ಡ್ರೈವ್ ಹಂಚಿದವರು ಕಠಿಣ ಶಿಕ್ಷೆಗೆ ಗುರಿಯಾಗಬೇಕು. ಈ ವಿಷಯದಲ್ಲಿ ಆರೋಪ ಪ್ರತ್ಯಾರೋಪದ ರಾಜಕೀಯ ಹಗ್ಗ ಜಗ್ಗಾಟ ಬೇಕಾಗಿಲ್ಲ. ಲೈಂಗಿಕ ದೌರ್ಜನ್ಯ ಮಾಡಿದವರಿಗೆ ಯಾವುದೇ ರಿಯಾಯಿತಿ ಇರಬಾರದು' ಎಂದಿದೆ.

'ಪೆನ್‌ಡ್ರೈವ್‌ನಲ್ಲಿರುವ ಮಹಿಳೆಯರ ಭವಿಷ್ಯದ ಬಗ್ಗೆ ಕಾಳಜಿ ವಹಿಸದಿದ್ದರೆ ಈ ಪ್ರಕರಣವನ್ನು ಕುರಿತ ಬದ್ಧತೆ ಅಪೂರ್ಣವಾಗುತ್ತದೆ. ಈ ಮಹಿಳೆಯರಲ್ಲಿ ಅನೇಕರು ಕುಟುಂಬದಲ್ಲಿ ಅನಾಥಪ್ರಜ್ಞೆ ಅನುಭವಿಸುತ್ತಿರುತ್ತಾರೆ. ಇತರರ ಹೀಯಾಳಿಕೆಗೂ ಒಳಗಾಗುತ್ತಾರೆ. ಒಂದು ರೀತಿಯ ಸಾಮಾಜಿಕ ಬಹಿಷ್ಕಾರದ ಭಾವನೆಯಿಂದ ಕುಗ್ಗಿ ಹೋಗಿರುತ್ತಾರೆ. ಈ ಸಂತ್ರಸ್ತೆಯರ ಗುರುತು ತನಿಖಾ ತಂಡಕ್ಕೆ ಗೊತ್ತಿರುವುದರಿಂದ ಅವರಿಗೆ ಧೈರ್ಯ ತುಂಬುವ, ಸಾಂತ್ವನ ಹೇಳುವ, ಕುಟುಂಬದವರಿಗೂ ಮನವರಿಕೆ ಮಾಡುವ ಕೆಲಸವೂ ಮುಖ್ಯವಾಗಿ ಆಗಬೇಕು. ಬಲಾತ್ಕಾರಕ್ಕೆ ಒಳಗಾದವರ ಬದುಕು ಉಳಿಯುವುದಕ್ಕೆ ಬೇಕಾದ ಕ್ರಮಗಳೂ ತನಿಖೆಯ ಕಾಳಜಿಯಾಗಬೇಕು. ಈ ದಿಕ್ಕಿನಲ್ಲಿಯೂ ಸರ್ಕಾರ ಜರೂರಾಗಿ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದೆ.

ಈ ಕುರಿತು ಸಂಘಟನೆಯಿಂದ ಸರ್ಕಾರಕ್ಕೆ ಬರೆದ ಪತ್ರಕ್ಕೆ ಬರಗೂರು ರಾಮಚಂದ್ರಪ್ಪ, ಜಿ. ರಾಮಕೃಷ್ಣ, ಸುಕನ್ಯಾ ಮಾರುತಿ, ಕೆ. ಷರೀಫಾ, ಭಕ್ತರಹಳ್ಳಿ ಕಾಮರಾಜ್, ರಾಜಪ್ಪ ದಳವಾಯಿ, ಸಿದ್ದನಗೌಡ ಪಾಟೀಲ, ಆರ್.ಜಿ. ಹಳ್ಳಿ ನಾಗರಾಜ್, ಎಚ್.ಎಲ್. ಪುಷ್ಪ, ಬಸವರಾಜ ಸಬರದ, ವೈ.ಬಿ. ಹಿಮ್ಮಡಿ, ಅಶ್ವಿನಿ ಮದನಕರ, ಎ.ಬಿ. ರಾಮಚಂದ್ರಪ್ಪ, ಪಿ. ಆರ್. ವೆಂಕಟೇಶ್, ಬಿ.ಎನ್ ಮಲ್ಲೇಶ್, ಅಬ್ದುಲ್ ಹೈ, ಎಚ್.ಆರ್. ಸ್ವಾಮಿ, ಎನ್. ಗಾಯಿತ್ರಿ, ಎಸ್.ವೈ. ಗುರುಶಾಂತ್ ಹಾಗೂ ಬಿ. ರಾಜಶೇಖರಮೂರ್ತಿ ಸಹಿ ಹಾಕಿದ್ದಾರೆ.

'ವಿಶ್ವಕಪ್'ನಲ್ಲಿ ಕಂಗೊಳಿಸಲಿದೆ ಕನ್ನಡ: ಸಿ.ಎಂ

ಬೆಂಗಳೂರು: 'ಈ ಬಾರಿಯ ಟಿ 20 ವಿಶ್ವಕಪ್ ಪಂದ್ಯದಲ್ಲಿ ರಾರಾಜಿಸಲಿದೆ ನಂದಿನಿ, ಕಂಗೊಳಿಸಲಿದೆ ಕನ್ನಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಶ್ವಕಪ್ ಪಂದ್ಯದಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳನ್ನು ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಪ್ರಾಯೋಜಿಸಿರುವ ಕುರಿತು 'ಎಕ್ಸ್' ಖಾತೆಯಲ್ಲಿ ಬರೆದಿರುವ ಅವರು, 'ಮಲೇಷ್ಯಾ, ವಿಯೆಟ್ನಾಂ, ಸಿಂಗಪುರ, ಅಮೆರಿಕ, ದುಬೈ, ಯುಎಇ ಮುಂತಾದ ರಾಷ್ಟ್ರಗಳಲ್ಲಿ ಕರ್ನಾಟಕದ ಹೆಮ್ಮೆಯ 'ನಂದಿನಿ' ಬ್ರ್ಯಾಂಡ್ ಹೆಸರುವಾಸಿಯಾಗಿದೆ. ಈಗ ವಿಶ್ವಕಪ್ ಪ್ರಾಯೋಜಕತ್ವ ಪಡೆಯುವ ಮೂಲಕ 'ನಂದಿನಿ'ಯನ್ನು ಜಾಗತಿಕ ಬ್ರ್ಯಾಂಡ್ ಆಗಿ ರೂಪಿಸುವತ್ತ ಹೆಜ್ಜೆ ಇಡಲಾಗಿದೆ ಎಂದಿದ್ದಾರೆ.

'ರಾಜ್ಯದ ಉತ್ಕೃಷ್ಟ ಗುಣಮಟ್ಟದ ಹಾಲಿನ ಉತ್ಪನ್ನಗಳು ಮತ್ತು ನಾಡಿನ ರೈತರ ಶ್ರಮ ಎರಡನ್ನೂ ವಿಶ್ವಕ್ಕೆ ಪರಿಚಯಿಸುವ ಸಂಕಲ್ಪ ನಮ್ಮದು' ಎಂದೂ ಅವರು ಹೇಳಿದ್ದಾರೆ.

ವರದಿ ಕೇಳಿದ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ

ನಗರದಲ್ಲಿ ಕೆರೆಗಳ ಅವೈಜ್ಞಾನಿಕ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಕೆರೆಗಳ ನಿರ್ಲಕ್ಷ್ಯ ಹಾಗೂ ಅವುಗಳ ಅವೈಜ್ಞಾನಿಕ ಪುನರುಜ್ಜೀವನ ಕಾಮಗಾರಿ ಸಂಬಂಧ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ವರದಿ ಕೇಳಿದೆ.

ಕೆರೆಗಳ ನಿರ್ಲಕ್ಷ್ಯದ ಕುರಿತು ಮಾಧ್ಯಮಗಳ ವರದಿಗಳ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ಪ್ರಧಾನ ಪೀಠದ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪೀಠವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದಲೂ ಪ್ರತಿಕ್ರಿಯೆ ಕೇಳಿದೆ. ಬೆಂಗಳೂರು ಜಲಮಂಡಳಿಯು 257 ಸಂಭಾವ್ಯ ನೀರಿನ ಒತ್ತಡ ಪ್ರದೇಶಗಳನ್ನು ಗುರುತಿಸಿದೆ. ನಗರವು ದೊಡ್ಡ ಪ್ರಮಾಣದ ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ಪೀಠವು ಹೇಳಿದೆ.

'ನಗರಕ್ಕೆ ನೀರು ಪೂರೈಸುವ ಜಲಾಶಯಗಳ ನೀರಿನ ಮಟ್ಟ ಕುಸಿಯುತ್ತಿದೆ. ನಗರದಲ್ಲಿ ಕೊಳವೆಬಾವಿ ಕೊರೆಯುವಿಕೆ, ಕೆರೆಗಳ ಅತಿಕ್ರಮಣ ವ್ಯಾಪಕವಾಗಿದೆ. ಸರಾಸರಿಗಿಂತ ಕಡಿಮೆ ಮಳೆ ಹಾಗೂ ಹೆಚ್ಚಿದ ತಾಪಮಾನ ಜಲ ಬಿಕ್ಕಟ್ಟಿಗೆ ಕಾರಣವಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ. 'ಕೆರೆಗಳ ಅತಿಕ್ರಮಣ ತಡೆಗೆ ಕ್ರಮ ಕೈಗೊಂಡಿಲ್ಲ. ಜತೆಗೆ, ಜಲ ಕಾಯಗಳಿಗೆ ಸಂಸ್ಕರಿಸದ ಕೊಳಚೆ ನೀರನ್ನು ಬಿಡಲಾಗುತ್ತಿದೆ. ಇದು ಕಡಿಮೆ ನೀರಿನ ಲಭ್ಯತೆ, ಪರಿಸರ ಅಸಮತೋಲನಕ್ಕೆ ಕಾರಣವಾಗಿದೆ' ಎಂದೂ ಹೇಳಿದೆ.

ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ನ್ಯಾಯಪೀಠ ವರ್ಗಾಯಿಸಿದೆ. ಪ್ರಕರಣದ ಮುಂದಿನ ವಿಚಾರಣೆ ಜುಲೈ 12ರಂದು ನಡೆಯಲಿದೆ.

ಭಯೋತ್ಪಾದಕರ ಆಸ್ತಿ ಜಪ್ತಿಯೇ ಹೆಚ್ಚು

ನವದೆಹಲಿ (ಪಿಟಿಐ): ದೇಶದಾದ್ಯಂತ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) 2019ರಿಂದ 2024ರ ಮೇ 16ರವರೆಗೂ 400ಕ್ಕೂ ಹೆಚ್ಚು ಆಸ್ತಿಗಳನ್ನು ಜಪ್ತಿ ಮಾಡಿದ್ದು, ಇದರಲ್ಲಿ ಹೆಚ್ಚಿನವು ಭಯೋತ್ಪಾದಕರು, ನಕ್ಸಲರು, ಪ್ರತ್ಯೇಕತಾವಾದಿಗಳು ಹಾಗೂ ಅವರ ಬೆಂಬಲಿಗರಿಗೆ ಸೇರಿದವು ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'ನ್ಯಾಯಾಂಗ ಅನ್ಯೋನ್ಯತೆ ಅನುಪಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಂಗ್ಲಾ ಮತ್ತು ಭಾರತದ ನಡುವಿನ ನ್ಯಾಯಾಂಗ ಕ್ಷೇತ್ರದ ಅನ್ಯೋನ್ಯತೆ ಮಧುರವಾಗಿದೆ' ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಬಣ್ಣಿಸಿದರು.

ನ್ಯಾಯಾಂಗ ಕ್ಷೇತ್ರದ ಕೊಡುಕೊಳ್ಳುವಿಕೆಯ ಭಾಗವಾಗಿ ನಗರದ ನ್ಯಾಯಾಂಗ ಅಕಾಡೆಮಿಯಲ್ಲಿ ಬಾಂಗ್ಲಾ ದೇಶದ 50 ಜಿಲ್ಲಾ ನ್ಯಾಯಾಧೀಶರಿಗೆ ನಡೆಸಲಾದ ಏಳು ದಿನಗಳ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದ ಅವರು, 'ಬಾಂಗ್ಲಾ ದೇಶವು, ಭಾರತದ ಮಗಳಿದ್ದಂತೆ ಎಂದರು.

'ಬಾಂಗ್ಲಾ ಮೊದಲಿಗೆ ಪಾಕಿಸ್ತಾನದ ಭಾಗವಾಗಿತ್ತು. ಆದರೆ, 1971ರಲ್ಲಿ ಅದನ್ನು ಭಾರತ ಸ್ವತಂತ್ರಗೊಳಿಸಿತು. ಮಾತ್ರವಲ್ಲ ಬಾಂಗ್ಲಾದ ಅಭಿವೃದ್ಧಿಗೆ ಹಣಕಾಸಿನ ನೆರವು ನೀಡುವ ನಿಟ್ಟಿನಲ್ಲಿ ಅಂಚೆಚೀಟಿ ಬಿಡುಗಡೆ ಮಾಡಿ ಅದನ್ನು ಕಡ್ಡಾಯವಾಗಿ ಬಳಸುವಂತೆ ಕಾನೂನು ಮಾಡಿತ್ತು. ಇದು ಭಾರತ ಬಾಂಗ್ಲಾದ ಬಗ್ಗೆ ಹೊಂದಿದ್ದ ಕಾಳಜಿ' ಎಂದು ವಿವರಿಸಿದರು.

ಬಾಂಗ್ಲಾದ ರಾಷ್ಟ್ರಗೀತೆ, 'ಅಮರ್ ಶೋನಾರ್ ಬಾಂಗ್ಲಾ' ಮತ್ತು ಭಾರತದ 'ರಾಷ್ಟ್ರಗೀತೆ ಜನಗಣ ಮನ' ಬರೆದವರು ರವೀಂದ್ರನಾಥ್ ಟ್ಯಾಗೋರ್. ನಮ್ಮಿಬ್ಬರ ನಡುವೆ ಗಾಢವಾದ ಸಾಂಸ್ಕೃತಿಕ ಸಾಮ್ಯತೆ ಇದೆ. ಕೆಲವೊಮ್ಮೆ ರಾಜಕೀಯ ಕಣ್ಣಾಮುಚ್ಚಾಲೆ ನಡೆಯುತ್ತಿರುತ್ತದೆಯಾದರೂ, ನ್ಯಾಯಾಂಗ ಕ್ಷೇತ್ರ ಮಾತ್ರ ಪರಸ್ಪರ ಪ್ರೀತಿಯ ಬಾಂಧವ್ಯ ಹೊಂದಿದೆ ಎಂದರು.

'ಪ್ರೀತಿಯಿಲ್ಲದ ಮೇಲೆ ಹೂವು ಅರಳೀತು ಹೇಗೆ ಎಂಬ ಜಿ.ಎಸ್.ಶಿವರುದ್ರಪ್ಪ ಅವರ ಕವಿತೆ, ಸಿದ್ದೇಶ್ವರ ಸ್ವಾಮೀಜಿಗಳ ಅನುಭಾವದ ನುಡಿ ಮತ್ತು ಗೋಪಾಲಕೃಷ್ಣ ಅಡಿಗರ ಮಲ್ಲಿಗೆಯ ಮೆದುತನದ ಕವಿತೆಗಳನ್ನು ಪ್ರಸ್ತಾಪಿಸಿದ ನ್ಯಾಯಮೂರ್ತಿ ದೀಕ್ಷಿತ್ ಅವರು, 'ಭಾರತದ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯ ಸಂಹಿತೆ ಹಾಗೂ ನ್ಯಾಯಾಂಗ ಆಡಳಿತದ ಜ್ಞಾನವನ್ನು ಹಂಚಿಕೊಳ್ಳುವ ಇಂತಹ ಕಾರ್ಯಕ್ರಮಗಳು ಉಭಯ ದೇಶಗಳ ಪ್ರಬಲ ಸಾಂವಿಧಾನಿಕ ತತ್ವಗಳ ವಿನಿಮಯಕ್ಕೆ ಸಾಕ್ಷಿಯಾಗಿವೆ' ಎಂದರು.

ನ್ಯಾಯಾಂಗ ಅಕಾಡೆಮಿಯ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನಿರ್ದೇಶಕರಾದ ನ್ಯಾಯಾಧೀಶ ನರಹರಿ ಪ್ರಭಾಕರ ಮರಾಠೆ ಏಳು ದಿನಗಳ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಬಾಂಗ್ಲಾ ದೇಶದ ಸುಪ್ರೀಂ ಕೋರ್ಟ್ ವತಿಯಿಂದ ಕೊಡಮಾಡಲಾದ ಸ್ಮರಣಿಕೆಯನ್ನು ನ್ಯಾಯಾಧೀಶ ಮುಸ್ತಾಕ್ ಅಹಮದ್ (ಎಡದಿಂದ ಎರಡನೆಯವರು) ಅವರು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿಗೆ ನೀಡಿದರು.

ಶಿವಮೊಗ್ಗ, ದಾವಣಗೆರೆ, ಹಾಸನ, ಕೊಡಗು ಜಿಲ್ಲೆಯ ವಿವಿಧೆಡೆ ವರ್ಷಧಾರೆ; ರೈತರಲ್ಲಿ ಸಂತಸ

ಮಳೆ: ಕೃಷಿ ಚಟುವಟಿಕೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ ಶಿವಮೊಗ್ಗ, ದಾವಣಗೆರೆ, ಹಾಸನ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಮಳೆಯಾದ ಹಿಂದೆಯೇ ಕೊಪ್ಪಳ ಸೇರಿ ಕೆಲವೆಡೆ ಕೃಷಿಗೆ ಭೂಮಿ ಹದಗೊಳಿಸುವ ಕೆಲಸ ಆರಂಭವಾಗಿದೆ. ಹಾವೇರಿ ಜಿಲ್ಲೆಯಲ್ಲಿ ಸಿಡಿಲು ಬಡಿದು ಯುವಕ ಮೃತಪಟ್ಟಿದ್ದಾನೆ.

ಶಿವಮೊಗ್ಗ ವರದಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಗುಡುಗು ಸಹಿತ ಉತ್ತಮ ಮಳೆಯಾಗಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ರಿಪ್ಪನ್‌ಪೇಟೆ, ಶಿರಾಳಕೊಪ್ಪ, ಹೊಸನಗರ, ಭದ್ರಾವತಿ, ಸಾಗರ, ತುಮರಿ, ಶಿಕಾರಿಪುರ ಸೇರಿ ವಿವಿಧೆಡೆ ಗುಡುಗು ಸಮೇತ ಮಳೆಯಾಗಿದೆ.

ಹೊಳೆಹೊನ್ನೂರು ಸಮೀಪದ ಹನುಮಂತಾಪುರದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಮಳೆ ಬೀಳಲಾರಂಭಿಸುತ್ತಿದ್ದಂತೆ ಸಂತಸಗೊಂಡ ಅರಹತೊಳಲು ಗ್ರಾಮದ ರೈತರು ವರುಣ ದೇವನಿಗೆ ಕೈ ಮುಗಿದು ಸಂಭ್ರಮಿಸಿದರು.

ದಾವಣಗೆರೆ ವರದಿ: ದಾವಣಗೆರೆ ನಗರ ಹಾಗೂ ಜಿಲ್ಲೆಯ ಹೊನ್ನಾಳಿ, ನ್ಯಾಮತಿ, ಮಾಯಕೊಂಡ ಹಾಗೂ ಕಡರನಾಯ್ಕನಹಳ್ಳಿಯಲ್ಲಿ ಮಳೆ ಸುರಿಯಿತು. ಚನ್ನಗಿರಿ ಪಟ್ಟಣದಲ್ಲಿ ಬುಧವಾರ 5.6 ಸೆಂ.ಮೀ. ಮಳೆ ಬಿದ್ದಿದೆ.

ಮಳೆ ಹಾಗೂ ಗಾಳಿಯ ರಭಸಕ್ಕೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಚಾವಣಿಯ ತಗಡುಗಳು ಹಾರಿ ಹೋಗಿವೆ. ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಹಾಸನ ವರದಿ: ಜಿಲ್ಲೆಯಲ್ಲಿ ಹಾಸನ ನಗರ, ಆಲೂರು, ಹೊಳೆನರಸೀಪುರ, ಸಕಲೇಶಪುರ, ಹಿರೀಸಾವೆ, ಕೊಣನೂರು, ಅರಕಲಗೂಡು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಕೃಷಿ ಚಟುವಟಿಕೆಗಳು ಆರಂಭವಾಗಿವೆ.

ನಾಲ್ಕೈದು ದಿನದಿಂದ ನಿತ್ಯವೂ ಮಳೆ ಬರುತ್ತಿದ್ದು, ಆಲೂಗಡ್ಡೆ ಬಿತ್ತನೆಗೆ ಸಜ್ಜಾಗಿರುವ ರೈತರಿಗೆ ಸಂತಸ ಮೂಡಿಸಿದೆ. ರಾಗಿ, ಮುಸುಕಿನ ಜೋಳದ ಬಿತ್ತನೆಗೂ ರೈತರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸಿಡಿಲು ಬಡಿದು ಯುವಕ ಸಾವು– ಹಾವೇರಿ ವರದಿ: ಜಿಲ್ಲೆಯಾದ್ಯಂತ ಗುಡುಗು ಸಿಡಿಲಿನ ಮಳೆಯ ಆರ್ಭಟ ಹೆಚ್ಚಿದೆ. ತಾಲ್ಲೂಕಿನ ಕುರುಬಗೊಂಡ ಗ್ರಾಮದಲ್ಲಿ ಜಮೀನಿನಲ್ಲಿ ಮರದ ಕೆಳಗೆ ನಿಂತಿದ್ದ ಯುವಕ ದಯಾನಂದ ಪುಟ್ಟನಗೌಡ್ರ (22) ಸಿಡಿಲಿಗೆ ಮೃತಪಟ್ಟಿದ್ದಾನೆ.

ಕುಶಾಲನಗರದಲ್ಲಿ ಭಾರಿ ಮಳೆ– ಮಡಿಕೇರಿ: ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಗುರುವಾರ ಭಾರಿ ಮಳೆ ಸುರಿದಿದೆ. ಇದರಿಂದ ತಾಲ್ಲೂಕಿನಲ್ಲಿ ಮುಂಗಾರು ಪೂರ್ವ ಬಿತ್ತನೆಗೆ ಸಹಕಾರಿಯಾಗಿದೆ. ಮಡಿಕೇರಿ ನಗರದಲ್ಲೂ ಬಿರುಸಿನ ಮಳೆಯಾಯಿತು. ಗೋಣಿಕೊಪ್ಪಲು ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಹುಬ್ಬಳ್ಳಿಯ ದುರ್ಗದಬೈಲ್‌ನಲ್ಲಿ ಗುರುವಾರ ಸುರಿದ ಮಳೆಯಲ್ಲೇ ಸಾಗಿದ ದ್ವಿಚಕ್ರ ವಾಹನ ಸವಾರ — ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಒಂದು ವಾರ ಮಳೆ ಸಾಧ್ಯತೆ

ರಾಜ್ಯದಲ್ಲಿ ಮುಂದಿನ ಒಂದು ವಾರ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು, ಹಾಸನ, ಮಂಡ್ಯ ಹಾಗೂ ತುಮಕೂರು ಜಿಲ್ಲೆಗೆ ಶುಕ್ರವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಜತೆಗೆ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ಕೆಲ ಸ್ಥಳಗಳಲ್ಲಿ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯ ತೀವ್ರತೆ ಶನಿವಾರ ಹೆಚ್ಚುವ ಸಾಧ್ಯತೆಯಿದೆ. ದಕ್ಷಿಣ ಕನ್ನಡ, ಕೊಡಗು, ಬೆಂಗಳೂರು ನಗರ ಸೇರಿ ಎಂಟು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ ಸೇರಿ ಎಂಟು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಇದೇ 20ರವರೆಗೂ ಕೆಲ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಇಲಾಖೆ ನೀಡಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಮೋಡ ಕವಿದ ವಾತಾವರಣ ಇರುತ್ತದೆ. ಕೆಲ ಪ್ರದೇಶಗಳಲ್ಲಿ ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಚನ್ನಗಿರಿಯಲ್ಲಿ 6 ಸೆಂ.ಮೀ. ಮಳೆ

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಒಳನಾಡಿನ ಹಲವು ಕಡೆ, ಕರಾವಳಿ ಮತ್ತು ಉತ್ತರ ಒಳನಾಡಿನ ಕೆಲವು ಕಡೆ ಮಳೆಯಾಗಿದೆ. ದಾವಣಗೆರೆಯ ಚನ್ನಗಿರಿಯಲ್ಲಿ ಗರಿಷ್ಠ (6 ಸೆಂ.ಮೀ.) ಮಳೆಯಾಗಿದೆ. ಕೊಡಗಿನ ಪೊನ್ನಂಪೇಟೆಯಲ್ಲಿ 5 ಸೆಂ.ಮೀ.,ಕುಶಾಲನಗರದಲ್ಲಿ 3 ಸೆಂ.ಮೀ. ಹಾಗೂ ವಿಜಯನಗರದ ಕೊಟ್ಟೂರಿನಲ್ಲಿ 4 ಸೆಂ.ಮೀ. ಮಳೆಯಾಗಿದೆ.

ಮಳೆ ತರುವ 'ಲಾ ನಿನಾ'ಗೆ ವೇದಿಕೆ ಸಜ್ಜು

ಒಂದನೇ ಪುಟದಿಂದ

ಭಾರತದ ಹಲವು ರಾಜ್ಯಗಳಲ್ಲಿ ಅಧಿಕ ಪ್ರವಾಹವೂ ಸೃಷ್ಟಿಯಾಗಿತ್ತು. ಎಲ್ ನಿನೋ ಇದ್ದಾಗ ಬಿರು ಬೇಸಿಗೆ ಮತ್ತು ದುರ್ಬಲ ಮುಂಗಾರು ಕಟ್ಟಿಟ್ಟ ಬುತ್ತಿ. ಲಾ ನಿನಾ ಬಂದಾಗ ಪ್ರಬಲ ಮುಂಗಾರು, ವಾಡಿಕೆಗಿಂತ ಅಧಿಕ ಮಳೆ ಬೀಳಲಿದೆ ಎಂದು ತಜ್ಞರು ಹೇಳುತ್ತಾರೆ.

ಬೇಸಿಗೆ ಮಳೆ ಪರಿಣಾಮವೇನು?

ಕಳೆದ ಕೆಲವು ದಿನಗಳಿಂದ ಆಗಿರುವ ಮಳೆ ವಾತಾವರಣವನ್ನು ಸ್ವಲ್ಪ ಮಟ್ಟಿಗೆ ತಂಪು ಮಾಡಿದೆ. ಬಿರು ಬೇಸಿಗೆಯಿಂದ ಕಾದು ಕಾವಲಿಯಂತಾಗಿದ್ದ ಭೂಮಿಯನ್ನೂ ಕೊಂಚ ಮಟ್ಟಿಗೆ ತಣಿಸಿದೆ. ಆದರೆ, ಇದರಿಂದ ಹೆಚ್ಚಿನ ಪರಿಣಾಮ ಆಗಿಲ್ಲ ಎನ್ನುತ್ತಾರೆ ಕರ್ನಾಟಕ ರಾಜ್ಯ ನಿಸರ್ಗ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಡಾ.ಶ್ರೀನಿವಾಸರೆಡ್ಡಿ.

ಅಚ್ಚುಕಟ್ಟು ಪ್ರದೇಶಗಳಲ್ಲಿ 100ರಿಂದ 200 ಮಿ.ಮೀ ಮಳೆಯಾದರಷ್ಟೇ ಜಲಾಶಯಗಳಿಗೆ ಒಳಹರಿವು ಆರಂಭವಾಗಲು ಸಾಧ್ಯ. ಇತ್ತೀಚಿನ ಮಳೆಯಿಂದ ಕೆರೆ– ಕಟ್ಟೆಗಳಿಗೇ ನೀರು ಹರಿದಿಲ್ಲ. ಇದಕ್ಕೆ ಬಿಸಿಲಿನ ಪ್ರಮಾಣ ಜಾಸ್ತಿಯಾಗಿರುವುದೇ ಕಾರಣ ಎಂದು ಅವರು ಹೇಳುತ್ತಾರೆ.

ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆ: ವರದಿ

ಚಿತ್ರದುರ್ಗ: ಪಾಳು ಮನೆಯಲ್ಲಿ ಐದು ಅಸ್ಥಿಪಂಜರ ಪತ್ತೆಯಾಗಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ನಗರದ ಕಾರಾಗೃಹ ರಸ್ತೆಯ ಪಾಳು ಮನೆಯಲ್ಲಿ ಐವರ ಅಸ್ಥಿಪಂಜರ ಪತ್ತೆಯಾಗಿದ್ದ ಪ್ರಕರಣದಲ್ಲಿ ಮರಣೋತ್ತರ ಪರೀಕ್ಷೆ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದಿದೆ. ಐವರೂ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಸುಳಿವು ದೊರೆತಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ, 'ಐವರ ಸಾವಿಗೆ ಅತಿಯಾದ ನಿದ್ರೆ ಮಾತ್ರೆ ಸೇವನೆಯೇ ಕಾರಣ ಎಂಬುದಾಗಿ ವರದಿ ಹೇಳಿದೆ' ಎಂದರು.

'ಕಳೆದ ಡಿ.28ರಂದು ಐದು ಅಸ್ಥಿಪಂಜರಗಳು ಕಂಡುಬಂದಿದ್ದವು. ದಾವಣಗೆರೆ, ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ 71 ಸಾಕ್ಷ್ಯ ಸಂಗ್ರಹಿಸಿದ್ದರು. ಅಡುಗೆಪಾತ್ರೆಯಲ್ಲಿ ಸಯನೈಡ್ ಅಂಶ ಇರುವುದು ಪತ್ತೆಯಾಗಿದೆ. ಇದನ್ನು ಸೇವಿಸಿರುವ ಖಚಿತತೆ ಇಲ್ಲ' ಎಂದರು.

'ಸಾವಿಗೆ ಕಾರಣ ತಿಳಿಯಲು ಎಲ್ಲ ಆಯಾಮದಲ್ಲೂ ಪರೀಕ್ಷೆ ನಡೆಸಿದಾಗ ಐವರ ಅಸ್ಥಿಪಂಜರದಲ್ಲೂ ನಿದ್ರೆ ಮಾತ್ರೆಯ ಅಂಶ ಕಂಡುಬಂದಿದೆ. ಗಾಯದಿಂದ ಸಾವು ಸಂಭವಿಸಿಲ್ಲ. ತನಿಖೆ ಮುಂದುವರಿದಿದೆ' ಎಂದರು.

'ಘಟನೆ ಬೆಳಕಿಗೆ ಬಂದಾಗ ದೇಹ ಸಂಪೂರ್ಣ ಕೊಳೆತು ಅಸ್ಥಿಪಂಜರಗಳು ಮಾತ್ರ ಲಭ್ಯವಾಗಿದ್ದವು. ಲೋಕೋಪಯೋಗಿ ಇಲಾಖೆಯ ನಿವೃತ್ತ ಎಂಜಿನಿಯರ್ ಎನ್‌.ಕೆ. ಜಗನ್ನಾಥ ರೆಡ್ಡಿ, ಪತ್ನಿ ಪ್ರೇಮಲೀಲಾ, ಪುತ್ರಿ ಎನ್‌.ಜೆ.ತ್ರಿವೇಣಿ, ಪುತ್ರರಾದ ಎನ್‌.ಜೆ.ಕೃಷ್ಣ, ಎನ್‌.ಜೆ.ನರೇಂದ್ರ ಅವರು 2019ರ ಫೆಬ್ರುವರಿ ಕೊನೆ ಇಲ್ಲವೇ ಮಾರ್ಚ್ ಆರಂಭದಲ್ಲಿ ಮೃತಪಟ್ಟಿದ್ದಾರೆ ಎಂದು ತನಿಖೆಯಿಂದ ತಿಳಿದು ಬಂದಿದೆ' ಎಂದು ವಿವರಿಸಿದರು.

'ಔಷಧ ಚೀಟಿಯ ಹಿಂಬದಿಯಲ್ಲಿ ಬರೆದ ಅಪೂರ್ಣ ಪತ್ರವನ್ನು ಆಧರಿಸಿ ಬೆಂಗಳೂರಿನ ವ್ಯಕ್ತಿಯನ್ನು ವಿಚಾರಣೆ ನಡೆಸಿದ್ದು, ಸರಿಯಾದ ಮಾಹಿತಿ ಲಭ್ಯವಾಗಿಲ್ಲ. ಕಾಗದದಲ್ಲಿರುವ ಬರಹ ಸಾವಿಗೂ ಮುನ್ನ ಬರೆದ ಪತ್ರವೇ (ಡೆತ್ ನೋಟ್) ಎಂಬುದೂ ಖಚಿತವಾಗಿಲ್ಲ. ಜತೆಗೆ ಕೈಬರಹ ಖಚಿತಪಡಿಸಿಕೊಳ್ಳಲು ಸಾಂದರ್ಭಿಕ ಸಾಕ್ಷ್ಯಗಳು ಲಭ್ಯವಾಗಿಲ್ಲ' ಎಂದರು.

'ಕೆಲವು ವಸ್ತುಗಳು ಯಾವುದೇ ಸಾಕ್ಷ್ಯವನ್ನು ಒದಗಿಸದಷ್ಟು ಹಾಳಾಗಿದ್ದವು. ಕೆಲವು ಔಷಧದ ಚೀಟಿ, ವೈದ್ಯಕೀಯ ವರದಿಗಳು ಪತ್ತೆಯಾಗಿದ್ದವು. ಇವುಗಳ ಆಧಾರದಲ್ಲಿ ಐವರೂ ದೈಹಿಕ, ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದರು ಎಂಬುದು ಗೊತ್ತಾಗಿದೆ. ಮಾನಸಿಕ ಸಮಸ್ಯೆ, ಪಡೆಯುತ್ತಿದ್ದ ಚಿಕಿತ್ಸೆ, ಸೇವಿಸುತ್ತಿದ್ದ ಔಷಧದ ಅಂಶಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ತಿಳಿಸಿದರು.

'ಜಗನ್ನಾಥ ರೆಡ್ಡಿ ಆಸ್ತಿಯ ಬಗ್ಗೆ ಖಚಿತ ಮಾಹಿತಿ ಇಲ್ಲ. ಮನೆಯನ್ನು ವಕೀಲರೊಬ್ಬರಿಗೆ ಮಾರಾಟ ಮಾಡಿದ್ದರು ಎಂದು ತಿಳಿದುಬಂದಿದೆ. ಈ ಪ್ರಕರಣ ಹೈಕೋರ್ಟ್‌ನಲ್ಲಿದೆ' ಎಂದು ಅವರು ವಿವರಿಸಿದರು.

ನಾಲೆಗೆ ಮಣ್ಣು ಸುರಿದು ಪ್ರತಿಭಟನೆ

ನಿರ್ಮಾಣ ಕಾಮಗಾರಿ ನಿಲ್ಲಿಸಲು ಜೂನ್ 5ರ ಗಡುವು

ಪ್ರಜಾವಾಣಿ ವಾರ್ತೆ

ತುಮಕೂರು: ಮಾಗಡಿ ತಾಲ್ಲೂಕಿಗೆ ಹೇಮಾವತಿ ನೀರು ಹರಿಸುವ ಸಲುವಾಗಿ ನಿರ್ಮಾಣ ಮಾಡುತ್ತಿರುವ 'ಎಕ್ಸ್‌ಪ್ರೆಸ್ ಲಿಂಕ್' ನಾಲೆಗೆ ಗುರುವಾರ ಮಣ್ಣು ಸುರಿದು ರೈತರು, ಜನಪ್ರತಿನಿಧಿಗಳು, ವಿವಿಧ ಮಠಾಧೀಶರು ಪ್ರತಿಭಟನೆ ವ್ಯಕ್ತಪಡಿಸಿದರು.

ಗುಬ್ಬಿ ತಾಲ್ಲೂಕಿನ ಡಿ.ರಾಂಪುರ ಸಮೀಪದ ಸುಂಕಾಪುರ ಗ್ರಾಮದ ಬಳಿ ನಿರ್ಮಾಣ ಹಂತದ ನಾಲೆಗೆ ಸಾಮೂಹಿಕವಾಗಿ ಮಣ್ಣು ಸುರಿದು ವಿರೋಧಿಸಿದರು. ಹೇಮಾವತಿ ನಾಲೆಯ ಬಳಿ ಪ್ರತಿಭಟಿಸಿದ ನಂತರ ಸಾಂಕೇತಿಕವಾಗಿ ನಾಲೆಗೆ ಮಣ್ಣು ಹಾಕಲಾಯಿತು.

ಜೂನ್ 5ರ ಒಳಗೆ ಈ ಯೋಜನೆಯನ್ನು ಕೈಬಿಟ್ಟು, ಕಾಮಗಾರಿ ಸ್ಥಗಿತಗೊಳಿಸದಿದ್ದರೆ, ಹೋರಾಟ ತೀವ್ರಗೊಳಿಸಲಾಗುವುದು. ರೈತರೇ ಮುಂದೆ ನಿಂತು ನಾಲೆ ಮುಚ್ಚಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲೆಯ ಜೆಡಿಎಸ್, ಬಿಜೆಪಿ ಶಾಸಕರು, ವಿವಿಧ ಮಠಾಧೀಶರು, ರೈತ ಸಂಘಟನೆಗಳ ಮುಖಂಡರು, ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಪಮುಖ್ಯಮಂತ್ರಿಯೂ ಆದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ಜಿಲ್ಲೆಯ ರೈತರ ಹಿತಾಸಕ್ತಿ ಬಲಿಕೊಟ್ಟು ನೀರು ತೆಗೆದುಕೊಂಡು ಹೋಗಲು ಬಿಡುವುದಿಲ್ಲ ಎಂದು ಶಪಥ ಮಾಡಿದರು.

ಜಿಲ್ಲೆಯನ್ನು ಪ್ರತಿನಿಧಿಸುವ ಸಚಿವರಾದ ಜಿ.ಪರಮೇಶ್ವರ, ಕೆ.ಎನ್. ರಾಜಣ್ಣ, ಕಾಂಗ್ರೆಸ್ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋರಾಟವನ್ನು ಬೆಂಬಲಿಸಬೇಕು ಎಂದು ಆಗ್ರಹಿಸಿದರು.

ಈಗಿರುವ ಹೇಮಾವತಿ ನಾಲೆಯನ್ನು ಆಧುನೀಕರಣ ಮಾಡಲಾಗಿದೆ. ಅದರ ಮೂಲಕವೇ ನೀರು ತೆಗೆದುಕೊಂಡು ಹೋಗಲಿ. ಎಕ್ಸ್‌ಪ್ರೆಸ್ ಕಾಲುವೆ ನಿರ್ಮಿಸಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಕುಣಿಗಲ್‌ವರೆಗೆ ನೀರು ಹರಿಸಲಿ, ಮಾಗಡಿಗೆ ಹರಿಸಲು ಅವಕಾಶ ನೀಡುವುದಿಲ್ಲ ಎಂದರು.

'ಜಿಲ್ಲೆಯ ಪಾಲಿನ ನೀರು ಬಳಸಲು ಬಿಡೆವು': ಹೇಮಾವತಿಯಿಂದ ಜಿಲ್ಲೆಗೆ 24.5 ಟಿಎಂಸಿ ಅಡಿಗಳಷ್ಟು ನೀರು ಹಂಚಿಕೆ ಮಾಡಲಾಗಿದೆ. ಈವರೆಗೂ ಪೂರ್ಣ ಪ್ರಮಾಣದ ನೀರು ಹರಿದು ಬಂದಿಲ್ಲ. ಮಾಗಡಿ ತಾಲ್ಲೂಕಿಗೆ ನೀರು ಹಂಚಿಕೆಯಾಗದಿದ್ದರೂ, ಜಿಲ್ಲೆಯ ಪಾಲಿನ ನೀರು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಇದರಿಂದ ಈ ಭಾಗದ ರೈತರಿಗೆ ತೀವ್ರ ಅನ್ಯಾಯವಾಗುತ್ತದೆ. ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಗುಬ್ಬಿ ತಾಲ್ಲೂಕಿನ ಸುಂಕಾಪುರದ ಬಳಿ ಗುರುವಾರ ನಿರ್ಮಾಣ ಹಂತದ ಹೇಮಾವತಿ ನಾಲೆಗೆ ಮಣ್ಣು ಸುರಿದು ಪ್ರತಿಭಟನೆ ವ್ಯಕ್ತಪಡಿಸಿದರು. ಹಿರೇಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಬೆಳ್ಳಾವಿ ಕಾರದ ಮಠದ ಕಾರದ ವೀರಬಸವ ಸ್ವಾಮೀಜಿ, ಶಾಸಕ ಜಿ.ಸುರೇಶ್‌ಗೌಡ ಇತರರು ಭಾಗವಹಿಸಿದ್ದರು

ಆರ್‌ಟಿಇ ಅರ್ಜಿ ಸಲ್ಲಿಕೆಗೆ 20 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡ್ಡಾಯ ಶಿಕ್ಷಣ ಕಾಯ್ದೆ (ಆರ್‌ಟಿಇ) ಅಡಿ ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಕೆಗೆ ಮೇ 20ರವರೆಗೆ ಅವಕಾಶ ನೀಡಲಾಗಿದೆ.

ಅರ್ಜಿ ಸಲ್ಲಿಕೆ ಅವಧಿ ಏಪ್ರಿಲ್ 22ಕ್ಕೆ ಮುಕ್ತಾಯವಾಗಿತ್ತು. ಪೋಷಕರ ಕೋರಿಕೆಯ ಮೇರೆಗೆ ಅವಧಿ ವಿಸ್ತರಿಸಲಾಗಿದೆ. ಜೂನ್ 1ರಂದು ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. 5ರಂದು ಸೀಟು ಹಂಚಿಕೆ ಮಾಡಲಾಗುವುದು. 6ರಿಂದ 13ರವರೆಗೆ ಪ್ರವೇಶ ಪಡೆಯಬಹುದು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಹೇಳಿದ್ದಾರೆ.

ಹಾಸನಕ್ಕೆ ಕಾಲಿಟ್ಟರೆ ಶಾ, ನಡ್ಡಾಗೆ ಕಲ್ಲೇಟು: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕೇಂದ್ರ ಸಚಿವರಾದ ಅಮಿತ್ ಶಾ, ಪ್ರಲ್ಹಾದ್ ಜೋಶಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಸನಕ್ಕೆ ಕಾಲಿಟ್ಟರೆ ಜನರು ಅವರ ಮೇಲೆ ಕಲ್ಲು ಎಸೆಯುತ್ತಾರೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಬಿಜೆಪಿ ನಾಯಕರು ಇದುವರೆಗೂ ಹಾಸನದ ಸಂತ್ರಸ್ತೆಯರ ಮನೆಗಳಿಗೆ ಭೇಟಿ ನೀಡಿಲ್ಲ. ಒಂದು ವೇಳೆ ಭೇಟಿ ನೀಡಿದ್ದೇ ಆದಲ್ಲಿ, ಪ್ರಜ್ವಲ್ ಪ್ರಕರಣದ ನಂತರವೂ ಜೆಡಿಎಸ್ ಜತೆ ಮೈತ್ರಿ ಮುಂದುವರಿಸಿದ್ದಕ್ಕಾಗಿ ಜನರ ಆಕ್ರೋಶ ಎದುರಿಸಬೇಕಾಗುತ್ತದೆ ಎಂದರು.

ಬಿಜೆಪಿ ನಾಯಕರು ಲೈಂಗಿಕ ಕಿರುಕುಳದ ಆರೋಪಿ ವಿರುದ್ಧ ಹಾಸನದಲ್ಲಿ ಏಕೆ ಪ್ರತಿಭಟನೆ ನಡೆಸಲಿಲ್ಲ? ಸಂತ್ರಸ್ತರು ಮಹಿಳೆಯರಲ್ಲವೇ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು ಪ್ರಶ್ನಿಸಿದ ಪ್ರಿಯಾಂಕ್ ಖರ್ಗೆ, ಆರೋಪಿ ಅನ್ಯ ಧರ್ಮದವನಾಗಿದ್ದರೆ ಬಿಜೆಪಿ ನಾಯಕರು ಪ್ರತಿಭಟನೆಗೆ ಸಾಲುಗಟ್ಟಿ ನಿಲ್ಲುತ್ತಿದ್ದರು. ಕಾಂಗ್ರೆಸ್‌ಗೆ ಎಲ್ಲರೂ ಸಮಾನರು, ಇಂತಹ ಘೋರ ಅಪರಾಧಗಳಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳ ವಿರುದ್ಧವೂ ಧ್ವನಿ ಎತ್ತುತ್ತದೆ ಎಂದು ಹೇಳಿದರು.

ಬಿಜೆಪಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 400 ಸೀಟು ಪಡೆಯುವುದಾಗಿ ಹೇಳುವ ಮೂಲಕ ಪ್ರತಿ ಪಕ್ಷಗಳ ಸ್ಥಾನಗಳನ್ನು ಖರೀದಿಸುವ ಸೂಚನೆ ನೀಡುತ್ತಿದೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರವನ್ನು ಬೀಳಿಸುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮಾತುಗಳೂ ಶಾಸಕರ ಖರೀದಿಯ ಪಿತೂರಿ ನಡೆಸಿದ ಸೂಚನೆಯಾಗಿದೆ ಎಂದರು.

ಪರಮೇಶ್ವರ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹ ಇಲಾಖೆಯಲ್ಲಿ ಗರಿಷ್ಠ ಹಸ್ತಕ್ಷೇಪ ನಡೆಯುತ್ತಿದೆ. ಗೃಹ ಸಚಿವರೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಆಗದೇ ಅಸಹಾಯಕರಾಗಿದ್ದಾರೆ. ಆದ್ದರಿಂದ, ಸೂಕ್ಷ್ಮತೆ ಹೊಂದಿರುವ ಜಿ.ಪರಮೇಶ್ವರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ಸೂಕ್ತ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಯಾವ ಪೊಲೀಸ್ ಅಧಿಕಾರಿಯೂ ದಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಗೃಹ ಇಲಾಖೆಯ ಈ ಜಡತ್ವವನ್ನು ಹೋಗಲಾಡಿಸಿ ವ್ಯವಸ್ಥೆ ಸರಿಪಡಿಸಲು ಸರ್ಕಾರ ಮುಂದಾಗಬೇಕಿದೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರ್ಣವಾಗುತ್ತಿದೆ. ಈ ಒಂದು ವರ್ಷದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿವೆ. ಮತಾಂಧ ಶಕ್ತಿಗಳು ವಿಜೃಂಭಿಸುತ್ತವೆ. ತುಷ್ಟೀಕರಣದ ರಾಜಕಾರಣವೂ ಸೇರಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ದೂರಿದರು.

ಗೃಹ ಇಲಾಖೆಯಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ. ವರ್ಗಾವಣೆ ಮತ್ತು ಹುದ್ದೆಗಳಿಗೆ ದರ ಪಟ್ಟಿ ನಿಗದಿಯಾಗಿದೆ. ಸಿಎಂ ಕಚೇರಿಯಿಂದ ವಿವಿಧ ಕಚೇರಿಗಳು, ಶಾಸಕರು ಮಧ್ಯವರ್ತಿಗಳ ಕೈಜೋಡಿಸಿರುವುದರಿಂದ ಕಾನೂನು– ಸುವ್ಯವಸ್ಥೆ ಕಾಪಾಡಲು ಹೇಗೆ ಸಾಧ್ಯ ಎಂದು ಅಶ್ವತ್ಥನಾರಾಯಣ ಪ್ರಶ್ನಿಸಿದರು.

ಸಿಟಿ ಕ್ರೈಮ್ ಬ್ಯೂರೋ ಮತ್ತು ನ್ಯಾಷನಲ್ ಕ್ರೈಂ ಬ್ಯೂರೊ ಪ್ರಕಾರ ಅಪರಾಧ ಪ್ರಮಾಣ ಶೇ 60 ಕ್ಕಿಂತ ಹೆಚ್ಚಾಗಿದೆ. ರಾಜ್ಯದಲ್ಲಿ ಹೆಣ್ಣು ಮಕ್ಕಳಿಗಂತೂ ಸುರಕ್ಷತೆ ಇಲ್ಲ. ನೇಹಾ ಕೊಲೆ ಬಳಿಕ ಅಂಜಲಿ ಹತ್ಯೆ ನಡೆದಿದೆ. ಅಂಜಲಿ ಕುಟುಂಬದವರು ಆಕೆಗೆ ಬೆದರಿಕೆ ಇರುವ ಕುರಿತು ಠಾಣೆಗೆ ತಿಳಿಸಿದ್ದರೂ ಸಹ ಕ್ರಮವಹಿಸಲು ಪೊಲೀಸರು ವಿಫಲವಾಗಿದ್ದಾರೆ. ಭಂಡ ಸರ್ಕಾರ ಎಲ್ಲ ಸೂಕ್ಷ್ಮತೆಯನ್ನೂ ಕಳೆದುಕೊಂಡಿದೆ ಎಂದು ಅವರು ಟೀಕಿಸಿದರು.

20 ಅಧಿಕಾರಿಗಳ ವಿರುದ್ಧ ದೂರು

ದೇವದುರ್ಗ: 'ತಾಲ್ಲೂಕಿನಾದ್ಯಂತ ಮರಳು ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿಸಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮರಳು ವಿಚಕ್ಷಣಾ ತಂಡದ 20 ಅಧಿಕಾರಿಗಳ ವಿರುದ್ಧ ಸಾಮಾಜಿಕ ಕಾರ್ಯಕರ್ತ ಶರಣಪ್ಪ ರೆಡ್ಡಿ ಲೋಕಾಯುಕ್ತರಿಗೆ ದೂರು ನೀಡಿದ್ದಾರೆ.

ಅಲ್ಲದೇ, 'ತಾಲ್ಲೂಕಿನ 60ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ದೇವದುರ್ಗ ಶಾಸಕರ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿ ಪೊಲೀಸ್ ಇಲಾಖೆ ನಿಯಮ ಉಲ್ಲಂಘಿಸಿದ್ದಾರೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಮತ್ತೊಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಜನ್ಮದಿನಾಚರಣೆ ಇಲ್ಲ: ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ಇದೇ 18ರಂದು 92ನೇ ವರ್ಷಕ್ಕೆ ಕಾಲಿಡುತ್ತಿದ್ದು, ಕಾರಣಾಂತರಗಳಿಂದ ತಮ್ಮ ಜನ್ಮದಿನಾಚರಣೆಯನ್ನು ಆಚರಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಯಾವುದೇ ಆಚರಣೆ ಮಾಡಿಕೊಳ್ಳದಿರುವುದರಿಂದ ಎಲ್ಲರೂ ತಾವಿದ್ದಲ್ಲಿಯೇ ಹಾರೈಸಿ ಎಂದು ಮಾಧ್ಯಮ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

NAVODAYA VIDYALAYA SAMITI
HYDERABAD REGION

Online applications are invited for Engagement of Counselors on contract basis, against purely temporary & tentative vacancies, at the Jawahar Navodaya Vidyalayas of the States of Andhra Pradesh, Telangana, Karnataka, Kerala, Union Territories of Puducherry, Lakshadweep and Andaman & Nicobar Islands. The last date for submission of application through online is 31.05.2024.
For further details visit Navodaya Vidyalaya Samiti, Regional Office, Hyderabad website: https://navodaya.gov.in/nvs/ro/Hydeabad/en/home/

DEPUTY COMMISSIONER

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/21723/2021–22 — ದಿನಾಂಕ: 16.05.2024

ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ **ಕಿರಿಯ ಸಹಾಯಕ (ಕೆ.ಕೆ/ಎನ್.ಕೆ.ಕೆ)** ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್–ಆಫ್ (Cut-Off) ಅಂಕಗಳೊಂದಿಗೆ ಅಂತರ್ಜಾಲ **https://kptcl.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸಹಿ/–, ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

Infosys® Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
SAMEER M BAVISI VAISHALI BIPINCHANDRA S BAVISI	ITL010322	145738	740803	741202	400
		150151	266610351	266611550	1200

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue Letter of Confirmation in lieu of duplicate share certificate(s) to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

May 16, 2024
Bengaluru, India

For **Infosys Limited**
Sd/-
A.G.S. Manikantha
Company Secretary

ಸುಭಾಷಿತ

ರಾಕ್ಷಸರು ಇರುವುದು ನಿಜ. ಪಿಶಾಚಿಗಳು ಇರುವುದೂ ನಿಜ. ಆದರೆ ಅವೆಲ್ಲಾ ನೆಲಸಿರುವುದು ನಮ್ಮೊಳಗೇ. ಕೆಲವೊಮ್ಮೆ ಅವು ಗೆಲುವನ್ನೂ ಸಾಧಿಸಿಬಿಡುತ್ತವೆ.

–ಸ್ಟೀಫನ್ ಕಿಂಗ್

ಕಾನೂನು ಪ್ರಕ್ರಿಯೆಯನ್ನು ಗೌರವಿಸಿ ಜನರ ಮೂಲಭೂತ ಹಕ್ಕುಗಳನ್ನು ರಕ್ಷಿಸಿ

ನ್ಯೂಸ್‌ಕ್ಲಿಕ್ ಸುದ್ದಿತಾಣದ ಸಂಸ್ಥಾಪಕ ಹಾಗೂ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ, ಮಾನವ ಹಕ್ಕುಗಳ ಕಾರ್ಯಕರ್ತ ಗೌತಮ್ ನವಲಖಾ ಅವರನ್ನು ಬಂಧನದಿಂದ ಬಿಡುಗಡೆಗೊಳಿಸುವಂತೆ ಸುಪ್ರೀಂ ಕೋರ್ಟ್ ಎರಡು ಪ್ರತ್ಯೇಕ ಆದೇಶಗಳ ಮೂಲಕ ಸೂಚನೆ ನೀಡಿರುವುದು ನ್ಯಾಯಕ್ಕೆ ಹಾಗೂ ನ್ಯಾಯಸಮ್ಮತ ಪ್ರಕ್ರಿಯೆಗೆ ಸಂದ ಜಯ. ಈ ಎರಡು ಆದೇಶಗಳು ಪೊಲೀಸರು ಮತ್ತು ಸರ್ಕಾರದ ನಡೆಗೆ ನ್ಯಾಯಾಲಯ ವ್ಯಕ್ತಪಡಿಸಿರುವ ಗಂಭೀರ ಸ್ವರೂಪದ ಅಸಮ್ಮತಿಯೂ ಹೌದು. ಪುರಕಾಯಸ್ಥ ಅವರ ಬಂಧನವು ತಪ್ಪು, ಕಾನೂನುಬಾಹಿರ ಎಂದು ಕೋರ್ಟ್ ಹೇಳಿದೆ. ಬಂಧನದ ಪ್ರಕ್ರಿಯೆಯು ಕಾನೂನಿಗೆ ಅನುಗುಣವಾಗಿ ಇರಬೇಕು, ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸಬೇಕು ಎಂಬ ಅಂಶವನ್ನು ಕೋರ್ಟ್ ಒತ್ತಿಹೇಳಿದೆ. ಈ ಎರಡೂ ಪ್ರಕರಣಗಳು, ಭಿನ್ನ ದನಿಗಳನ್ನು ಹತ್ತಿಕ್ಕುವ, ಸರ್ಕಾರದ ಟೀಕಾಕಾರರ ಬಾಯಿ ಮುಚ್ಚಿಸುವ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಉದ್ದೇಶಕ್ಕೆ ಭಯೋತ್ಪಾದನಾ ವಿರೋಧಿ ಕಾನೂನುಗಳನ್ನು ದುರ್ಬಳಕೆ ಮಾಡಿಕೊಳ್ಳುವುದರ ಬಗ್ಗೆ ಕಳವಳ ಮೂಡಲು ಕಾರಣವಾಗಿದ್ದವು. ವಿದೇಶಗಳಿಂದ ಹಣದ ನೆರವು ಪಡೆದು ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಆರೋಪದ ಅಡಿಯಲ್ಲಿ ಪುರಕಾಯಸ್ಥ ಅವರನ್ನು 2023ರಲ್ಲಿ ಬಂಧಿಸಲಾಗಿತ್ತು. ನವಲಖಾ ಅವರನ್ನು 2020ರಲ್ಲಿ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಯಾವುದೇ ಸಾಕ್ಷ್ಯ ಇಲ್ಲದಿದ್ದರೂ, ರಾಜಕೀಯ ಕಾರಣಗಳಿಗಾಗಿ, ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ಈ ಇಬ್ಬರ ಬಂಧನ ಆಗಿದೆ ಎಂಬ ಟೀಕೆಗಳು ವ್ಯಕ್ತವಾಗಿದ್ದವು.

ಪ್ರಬೀರ್ ಪುರಕಾಯಸ್ಥ ಹಾಗೂ ಗೌತಮ್ ನವಲಖಾ ಅವರನ್ನು ಬಂಧನದಿಂದ ಬಿಡುಗಡೆಗೊಳಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿರುವುದು ನ್ಯಾಯಕ್ಕೆ ಸಂದ ಜಯ

ಪುರಕಾಯಸ್ಥ ಅವರನ್ನು ಬಂಧಿಸಿದ್ದಕ್ಕೆ ಕಾರಣ ಏನು ಎಂಬುದನ್ನು ಲಿಖಿತ ರೂಪದಲ್ಲಿ ತಿಳಿಸದೇ ಇದ್ದುದಕ್ಕಾಗಿ, ಅವರ ಬಂಧನ ಹಾಗೂ ಅವರನ್ನು ಉದ್ದೇಶಿಸಿ ಹೊರಡಿಸಿದ್ದ ರಿಮಾಂಡ್ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಬಂಧನಕ್ಕೆ ಕಾರಣವನ್ನು ಲಿಖಿತ ರೂಪದಲ್ಲಿ ನೀಡದೇ ಇರುವುದು ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ ಎಂದು ಹೇಳಿದೆ. ಪುರಕಾಯಸ್ಥ ಅವರ ಬಂಧನ ಪ್ರಕ್ರಿಯೆಯನ್ನು 'ಗುಟ್ಟುಗುಟ್ಟಾಗಿ ನಡೆಸಲಾಯಿತು, ಇದು ಕಾನೂನಿನ ಪ್ರಕ್ರಿಯೆಯನ್ನು ಸರಿಯಾಗಿ ಪಾಲಿಸದೆ ನುಣುಚಿಕೊಳ್ಳಲಿಕ್ಕೆ ಮುಚ್ಚುಮರೆಯಲ್ಲಿ ನಡೆಸಿದ ಯತ್ನ' ಎಂದು ಕೋರ್ಟ್ ಕಟುವಾದ ಮಾತು ಹೇಳಿದೆ. ಹಿಂದಿನ ತೀರ್ಪೊಂದನ್ನು ವಿಸ್ತರಿಸಿರುವ ಕೋರ್ಟ್, ಯಾವುದೇ ಕಾನೂನಿನ ಅಡಿಯಲ್ಲಿ ವ್ಯಕ್ತಿಯನ್ನು ಬಂಧಿಸುವಾಗ, ಬಂಧನಕ್ಕೆ ಕಾರಣ ಏನು ಎಂಬುದನ್ನು ಆದಷ್ಟು ಬೇಗ ತಿಳಿದುಕೊಳ್ಳುವ ಹಕ್ಕು ಆ ವ್ಯಕ್ತಿಗೆ ಇರುತ್ತದೆ ಎಂದು ಹೇಳಿದೆ. ಈ ವಿಚಾರದಲ್ಲಿ ವಿನಾಯಿತಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ಕಾನೂನಿನ ಪ್ರಕ್ರಿಯೆಯನ್ನು ಸೂಕ್ತ ರೀತಿಯಲ್ಲಿ ಪಾಲಿಸಬೇಕಿರುವುದು ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವದ ಹೃದಯವಿದ್ದಂತೆ. ಈ ತತ್ವದ ಪಾಲನೆ ಆದಾಗ ಮಾತ್ರ ಸಂವಿಧಾನಕ್ಕೆ ಬೆಲೆ. ಈ ಪ್ರಕ್ರಿಯೆಯನ್ನು ಉಲ್ಲಂಘಿಸುವ ಕೆಲಸ ಆಗಬಾರದು. ಬಂಧನಕ್ಕೂ ಮೊದಲು ತನಿಖೆ ನಡೆದಿರಬೇಕು, ಬಂಧನಕ್ಕೆ ಕಾರಣ ನೀಡುವಾಗ ಅದರಲ್ಲಿ ತನಿಖೆಯ ವಿವರಗಳನ್ನೂ ಉಲ್ಲೇಖಿಸಬೇಕು. ಈ ಪ್ರಕ್ರಿಯೆಯನ್ನು ಪಾಲಿಸದ ಯಾವುದೇ ಬಂಧನವು ಅಸಿಂಧುವಾಗುತ್ತದೆ.

ನವಲಖಾ ಅವರಿಗೆ ಜಾಮೀನು ಮಂಜೂರು ಮಾಡುವಾಗ ಕೋರ್ಟ್, ಇನ್ನೊಂದು ವೈಫಲ್ಯದ ಬಗ್ಗೆ ಬೊಟ್ಟುಮಾಡಿದೆ. ನವಲಖಾ ಅವರು ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಜೈಲಿನಲ್ಲಿ ಇದ್ದಾರೆ, ಅವರ ವಿಚಾರಣೆಯು ಪೂರ್ಣಗೊಳ್ಳುವುದಕ್ಕೆ ಬಹಳ ಕಾಲ ಬೇಕಾಗುತ್ತದೆ ಎಂದು ಕೋರ್ಟ್ ಹೇಳಿದೆ. ನವಲಖಾ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ 370 ಸಾಕ್ಷಿಗಳು ಇದ್ದಾರೆ. ನವಲಖಾ ಅವರ ಜೊತೆ ಆರೋಪಿಗಳಾಗಿದ್ದ ಇತರ ಆರು ಮಂದಿಯನ್ನು ಈಗಾಗಲೇ ಜಾಮೀನಿನ ಅಡಿ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ನವಲಖಾ ಅವರ ವಿರುದ್ಧದ ದೋಷಾರೋಪಗಳನ್ನು ಇನ್ನಷ್ಟೇ ನಿಗದಿ ಮಾಡಬೇಕಿದೆ. ಪುರಕಾಯಸ್ಥ ಅವರು ಎಂಟು ತಿಂಗಳು ಜೈಲಿನಲ್ಲಿ ಇದ್ದರು. ನವಲಖಾ ಅವರು ನಾಲ್ಕು ವರ್ಷ ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಇವರಿಬ್ಬರ ಪ್ರಕರಣದಲ್ಲಿ ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವವನ್ನು ಹಾಗೂ ನ್ಯಾಯ ವ್ಯವಸ್ಥೆಯ ಸೂತ್ರಗಳನ್ನು ಹೇಗೆ ಉಲ್ಲಂಘಿಸಲಾಯಿತು ಎಂಬುದನ್ನು ಕೋರ್ಟ್‌ನ ಆದೇಶಗಳು ಹೇಳುತ್ತಿವೆ. ಪ್ರಜೆಗಳ ಹಕ್ಕುಗಳನ್ನು ಗೌರವಿಸದ ಕಾನೂನು ಜಾರಿ ವ್ಯವಸ್ಥೆಯು ಸರ್ವಾಧಿಕಾರಿ ವ್ಯವಸ್ಥೆಯಂತೆ ಕಾಣುತ್ತದೆ.

ದಿನದ ಟ್ವೀಟ್

ಖುಷಿ ತಂದ ಬೆಳವಣಿಗೆ

ನಂದಿನಿ ಬ್ರ್ಯಾಂಡ್ ಜಾಗತಿಕವಾಗಿ ಗುರುತಿಸಿಕೊಳ್ಳುತ್ತಿದೆ. ಸ್ಕಾಟ್ಲೆಂಡ್ ಕ್ರಿಕೆಟ್ ತಂಡದ ಪೋಷಾಕಿನ ಮೇಲೆ ನಂದಿನಿ ಲೋಗೊ ನೋಡುವುದೇ ಚಂದ. ಎಲ್ಲರಿಗೂ ಸಂತೋಷವಾಗಿದೆ.

ಲಕ್ಷ್ಮಣ್ ಕಾರ್ಕಳ

ಕಿಡಿನುಡಿ

ಪ್ರಜ್ವಲ್ ಪ್ರಕರಣದಿಂದ ಜೆಡಿಎಸ್ ಪಕ್ಷಕ್ಕೆ ಯಾವುದೇ ಹಿನ್ನಡೆ ಇಲ್ಲ. ಸರ್ಕಾರ ಸತ್ಯಾಂಶವನ್ನು ಹೊರತರಲಿ. ಆದರೆ, ಅವರಿಗೆ ಅದು ಬೇಕಾಗಿಲ್ಲ. ಜೆಡಿಎಸ್ ವರ್ಚಸ್ಸು ಹಾಳು ಮಾಡುವುದಷ್ಟೇ ಅವರಿಗೆ ಬೇಕಾಗಿರುವುದು.



ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 17-5-1999

- **ಕಾರ್ಗಿಲ್‌ನಲ್ಲಿ ಗುಂಡಿನ ದಾಳಿ: 15 ಉಗ್ರರು ಸೇರಿ 30 ಸಾವು**

ಶ್ರೀನಗರ, ಮೇ 16 (ಯುಎನ್ಐ, ಪಿಟಿಐ)– ಕಾರ್ಗಿಲ್ ಮತ್ತು ಡ್ರಾಸ್ ಗಡಿ ಪ್ರದೇಶಗಳಲ್ಲಿ ಪಾಕಿಸ್ತಾನಿ ಅತಿಕ್ರಮಣಕಾರರ ವಿರುದ್ಧ ಭಾರತೀಯ ಸೇನಾಪಡೆಗಳು ಕಳೆದ ಒಂದು ವಾರದಿಂದ ಭಾರಿ ಕಾರ್ಯಾಚರಣೆ ನಡೆಸುತ್ತಿದ್ದು, 15 ಮಂದಿ ಭಯೋತ್ಪಾದಕರ ಸಹಿತ 30 ಮಂದಿ ಸತ್ತಿದ್ದಾರೆ.

ಕಾರ್ಗಿಲ್ ಮೂಲಕ ಭಯೋತ್ಪಾದಕರನ್ನು ದೇಶದೊಳಕ್ಕೆ ನುಗ್ಗಿಸುವುದಕ್ಕಾಗಿಯೇ ಅಲ್ಲಿ ಪಾಕಿಸ್ತಾನಿ ಪಡೆಗಳು ಭಾರತೀಯ ನೆಲೆಗಳತ್ತ ಭಾರಿ ಶೆಲ್ ದಾಳಿ ನಡೆಸುತ್ತಿವೆ. ಇದಕ್ಕೆ ಪ್ರತಿಯಾಗಿ ಭಾರತೀಯ ಪಡೆಗಳು ನಿಯಂತ್ರಣ ರೇಖೆಯಲ್ಲಿನ ಹಳ್ಳಿಗಳನ್ನು ಭಾಗಶಃ ತಮ್ಮ ವಶಕ್ಕೆ ತೆಗೆದುಕೊಂಡು ಇಲ್ಲಿ ಉಗ್ರರಿಗೆ ಯಾವುದೇ ನೆಲೆ ದೊರಕದಂತೆ ಮಾಡಿವೆ.

ಪೂಂಛ್ ವಲಯದ ನಿಯಂತ್ರಣ ರೇಖೆ ಸಮೀಪ ಶನಿವಾರ ರಾತ್ರಿ ಪಾಕಿಸ್ತಾನಿ ಪಡೆಗಳು ಭಾರಿ ಪ್ರಮಾಣದಲ್ಲಿ ದಾಳಿ ನಡೆಸಿದ್ದರಿಂದ ಭಾರತೀಯ ಸೈನಿಕ ಸತ್ತಿದ್ದಾನೆ. ಭಾರತೀಯ ಪಡೆಗಳೂ ಪ್ರತಿದಾಳಿ ನಡೆಸಿದವು.

- **ಸೋನಿಯಾ ವಿರುದ್ಧ ಕಾಂಗ್ರೆಸ್‌ನಲ್ಲಿ ಬಂಡಾಯ**

ನವದೆಹಲಿ, ಮೇ 16 (ಪಿಟಿಐ, ಯುಎನ್ಐ)– ವಿದೇಶಿ ಮೂಲದ ಸೋನಿಯಾ ಗಾಂಧಿ ಅವರನ್ನು ದೇಶದ ಮುಂದಿನ ಪ್ರಧಾನಿ ಎಂದು ಮುಂದಿಟ್ಟುಕೊಂಡು ಚುನಾವಣೆ ಎದುರಿಸುವುದಕ್ಕೆ ಕಾಂಗ್ರೆಸ್ ಪಕ್ಷದ ಇಬ್ಬರು ಮುಂಚೂಣಿ ನಾಯಕರಾದ ಶರದ್ ಪವಾರ್ ಹಾಗೂ ಪಿ.ಎ. ಸಂಗ್ಮಾ ಮತ್ತು ಈಗಾಗಲೇ ಭಿನ್ನಮತದ ಪತಾಕೆಯನ್ನು ಹಾರಿಸಿರುವ ತಾರೀಖ್ ಅನ್ವರ್ ವಿರೋಧ ವ್ಯಕ್ತಪಡಿಸಿದ್ದಾರೆ.

ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರವೊಂದನ್ನು ಬರೆದಿದ್ದು, ಈ ವಿಷಯದ ಚರ್ಚೆಗೆ ಸೋನಿಯಾ ಗಾಂಧಿ, ಕಾರ್ಯಕಾರಿ ಸಮಿತಿಯ ತುರ್ತು ಸಭೆಯೊಂದನ್ನು ನಾಳೆ ಕರೆದಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 17-5-1974

- **ಅರಸು ಗುಂಪಿನ ವಿರುದ್ಧ ಮೊದಲ ಬಾರಿಗೆ ಭಿನ್ನಮತೀಯರ ಬಹಿರಂಗ ಸೆಣಸು**

ಬೆಂಗಳೂರು, ಮೇ 16– ವಿಧಾನಮಂಡಲದ ಕಾಂಗ್ರೆಸ್ ಪಕ್ಷದಲ್ಲಿನ ಭಿನ್ನಮತೀಯರು ಮೊದಲ ಬಾರಿಗೆ 'ಬಹಿರಂಗವಾಗಿ ಹೊರಬಂದು' ಅರಸು ಬೆಂಬಲಿಗರ ಗುಂಪಿನೊಡನೆ 'ಹೋರಾಡಲಿದ್ದಾರೆ'.

ಈ 'ಹೋರಾಟದ' ಅಂಗವಾಗಿ ನಾಳೆ ನಡೆಯಲಿರುವ ಪಕ್ಷದ ಅಧಿಕಾರ ವರ್ಗ ಹಾಗೂ ಕಾರ್ಯಸಮಿತಿ ಚುನಾವಣೆಗಳಲ್ಲಿ ಭಿನ್ನಮತೀಯರು ಮುಖ್ಯಮಂತ್ರಿ ಗುಂಪಿನ ವಿರುದ್ಧ ಸ್ಪರ್ಧಿಸಲಿದ್ದಾರೆ.

ಪಕ್ಷದ ಉಪನಾಯಕ ಸ್ಥಾನಕ್ಕೆ ಮಂತ್ರಿಮಂಡಲದ ಗುಂಪಿನ ಪರವಾಗಿ ಹಿರಿಯ ಸದಸ್ಯ, ಸಚಿವ ಶ್ರೀ ಎಚ್. ಸಿದ್ಧವೀರಪ್ಪ ಅವರ ವಿರುದ್ಧ ಭಿನ್ನಮತೀಯರ ಪರವಾಗಿ ಮಾಜಿ ಸಚಿವ ಶ್ರೀ ಬಿ. ಬಸವಲಿಂಗಪ್ಪ ಅವರು ಸ್ಪರ್ಧಿಸಿದ್ದಾರೆ. ಈ ಸ್ಪರ್ಧೆಯು ಪೈಪೋಟಿಯ ಸೂಚಕವಾಗಿದೆ.

- **ಫರಕ್ಕಾ ಕಾರ್ಯಾರಂಭಕ್ಕೆ ಮುನ್ನ ನದಿ ನೀರು ಹಂಚಿಕೆ ಒಪ್ಪಂದ**

ನವದೆಹಲಿ, ಮೇ 16– ಭಾರತ ಮತ್ತು ಬಾಂಗ್ಲಾ ದೇಶದ ನಡುವೆ ಗಡಿ ಗುರುತಿಸುವ ಬಗ್ಗೆ ಎರಡೂ ದೇಶಗಳು ಇಂದು ಒಪ್ಪಂದ ಮಾಡಿಕೊಂಡವು.

1974ರ ಕೊನೆಯ ವೇಳೆಗೆ ಫರಕ್ಕಾ ಯೋಜನೆ ಕಾರ್ಯಾರಂಭವಾಗುವುದಕ್ಕೆ ಮೊದಲೇ ಗಂಗಾ ನದಿ ನೀರಿನ ಹಂಚಿಕೆ ಬಗ್ಗೆ ಸೌಹಾರ್ದಯುತ ಒಪ್ಪಂದಕ್ಕೆ ಬರಬೇಕೆಂದೂ ಎರಡೂ ದೇಶಗಳು ನಿರ್ಧರಿಸಿವೆ.

ಬಾಂಗ್ಲಾ ಪ್ರಧಾನಿ ಮುಜೀಬ್ ಅವರ ಐದು ದಿನಗಳ ಭಾರತ ಪ್ರವಾಸದ ಕೊನೆಯಲ್ಲಿ ಇಂದು ಹೊರಡಿಸಲಾದ ಸಂಯುಕ್ತ ಘೋಷಣೆಯಲ್ಲಿ, ಪ್ರಧಾನಿ ಇಂದಿರಾ ಗಾಂಧಿ ಮತ್ತು ಪ್ರಧಾನಿ ಮುಜೀಬ್ ಈ ಅಂಶಗಳನ್ನು ವಿವರಿಸಿದ್ದಾರೆ.

ಮುಂಚೂಣಿ ಓಟಗಾರನನ್ನು ಮಣಿಸುವಲ್ಲಿ ಹೆಚ್ಚಿನ ಹೊಣೆ ಪುರಾತನ ಪಕ್ಷದ ಮೇಲಿದೆ

ಗೆಲುವಿನ ಅಂತರ: ಫಲಿಸುವುದೇ ತಂತ್ರ?

ವಿಶ್ಲೇಷಣೆ

ಬಿ.ಎಸ್.ಅರುಣ್

ಲೋಕಸಭೆ ಚುನಾವಣೆಯ ನಾಲ್ಕು ಹಂತಗಳ ಮತದಾನ ಮುಗಿದಿದ್ದು, ಯಾರಿಗೆ ಗೆಲುವು ದಕ್ಕಬಹುದು ಎಂಬ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. 2014 ಹಾಗೂ 2019ರಲ್ಲಿ ಗೆದ್ದು ಅಧಿಕಾರಕ್ಕೆ ಏರಿದ ಬಿಜೆಪಿ ಈ ಬಾರಿಯ ಚುನಾವಣೆಯನ್ನು ಹೇಗೆ ಸ್ವೀಕರಿಸಿದೆ? ಈವರೆಗೆ ಕಡಿಮೆ ಮತದಾನವಾಗಿರುವುದು ತನಗೆ ಅನುಕೂಲಕರ ಆಗಿಲ್ಲದೇ ಇರಬಹುದು ಎಂಬ ತಳಮಳವೇನಾದರೂ ಪಕ್ಷಕ್ಕೆ ಇದೆಯೇ? ಹಾಗಿದ್ದರೆ, 400 ಸ್ಥಾನಗಳನ್ನು ಗಳಿಸುವ ತನ್ನ ಗುರಿ ತಲುಪಲು ಅದಕ್ಕೆ ದುಸ್ತರವಾಗಬಹುದೇ? ಅಂತಹ ಸಾಧ್ಯತೆ ಇದ್ದಲ್ಲಿ, 272 ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಬಹುಮತದ ಗೆರೆ ದಾಟುವ ಈ ಮೊದಲಿನ ಗುರಿ ಈಡೇರಿಕೆಯ ದಿಸೆಯಲ್ಲಿ ಕಾರ್ಯೋನ್ಮುಖವಾಗಲು ಪಕ್ಷ ನಿರ್ಧರಿಸಿದೆಯೇ?

ಪ್ರಧಾನಿ ನರೇಂದ್ರ ಮೋದಿ ಅವರು ಜನರನ್ನು ಉದ್ದೇಶಿಸಿ ಭಾಷಣ ಮಾಡುವಾಗ, ತಮ್ಮ ನೇತೃತ್ವದ 10 ವರ್ಷಗಳ ಆಡಳಿತಾವಧಿಯಲ್ಲಿನ ಸಾಧನೆಗಳ ಬಗ್ಗೆ ಹೆಚ್ಚು ವಿವರಿಸದೆ, ಹಿಂದೂ- ಮುಸ್ಲಿಂ, ಅದಾನಿ- ಅಂಬಾನಿ ಮತ್ತು ಕಪ್ಪುಹಣ, ಮುಸ್ಲಿಂ ಮೀಸಲಾತಿಯಂತಹ ವಿಷಯಗಳನ್ನೇ ಹೆಚ್ಚಾಗಿ ಪ್ರಸ್ತಾಪಿಸುತ್ತಿರುವುದು ಆಶ್ಚರ್ಯಕರವಾಗಿದೆ. ಷೇರು ಮಾರುಕಟ್ಟೆಯಲ್ಲಿನ ಏರುಪೇರು, ಸಾಮಾನ್ಯ ಜನರಲ್ಲಿ ಸಂಸದರ ಬಗ್ಗೆ ಇರುವ ಅಸಮಾಧಾನ, ಅಯೋಧ್ಯೆಯ ದೇವಾಲಯದ ವಿಷಯ ಹೆಚ್ಚು ಸದ್ದು ಮಾಡದಿರುವುದು, ಮತದಾರರ ನಿರಾಸಕ್ತಿ, ನಿರುದ್ಯೋಗ, ಹಣದುಬ್ಬರದಿಂದ ಉಂಟಾಗಿರುವ ಅಸಂತೃಪ್ತಿಯಂತಹ ವಿಷಯಗಳ ಕಾರಣದಿಂದ ಪ್ರಧಾನಿ ಈ ರೀತಿ ಮಾತನಾಡುತ್ತಿದ್ದಾರೆಯೇ?

ಪ್ರಸಕ್ತ ಚುನಾವಣೆಯಲ್ಲಿ ರಾಷ್ಟ್ರೀಯ ವಿಷಯಗಳಿಗಿಂತ ಸ್ಥಳೀಯ ಸಮಸ್ಯೆಗಳೇ ಪ್ರಧಾನ ಪಾತ್ರ ವಹಿಸಿವೆಯೇ ಮತ್ತು ಇದು ಬಿಜೆಪಿಗೆ ಪ್ರತಿಕೂಲಕರವಾಗಿದೆಯೇ? 2019ರಲ್ಲಿ ಜಯಭೇರಿ ಬಾರಿಸಿದ ಎಲ್ಲ ರಾಜ್ಯಗಳಲ್ಲಿ ತಾನು ಗೆದ್ದುಕೊಂಡ ಎಲ್ಲ ಕ್ಷೇತ್ರಗಳನ್ನೂ ಮತ್ತೆ ತನ್ನದಾಗಿಸಿಕೊಳ್ಳುವುದು ಸಾಧ್ಯವಾಗದಿರಬಹುದು ಎಂಬ ಭಯ ಅದಕ್ಕಿದೆಯೇ? ಮತದಾರರನ್ನು ಸೆಳೆಯುವುದರಲ್ಲಿ ಮೋದಿಯವರಿಗೆ ಯಾರೂ ಸರಿಸಾಟಿಯಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಬಿಜೆಪಿಯ ಜಯಭೇರಿಗೆ ಅದೊಂದೇ ಅಸ್ತ್ರ ಸಾಕೆ? ಅಥವಾ ಗುರಿ ಸಾಧಿಸಲು ತನ್ನ ಅತ್ಯಂತ ಪರಿಣಾಮಕಾರಿಯಾದ ಚುನಾವಣಾ ತಂತ್ರವೊಂದೇ ಸಾಕು ಎಂಬ ಆಶಾಭಾವನೆಯಲ್ಲಿ ಕೇಸರಿ ಪಕ್ಷ ಇದೆಯೇ?

ಈ ಚುನಾವಣಾ ಓಟದಲ್ಲಿ ಬಿಜೆಪಿ ಮುಂದೆ ಇದೆ ಎಂಬ ಬಗ್ಗೆ ಯಾವ ಅನುಮಾನವೂ ಇಲ್ಲ. ಪಕ್ಷದ ತಳಮಟ್ಟ ಮತ್ತು ಬೂತ್ ಮಟ್ಟದ ಕಾರ್ಯಕರ್ತರು, ಅದರ ಶಕ್ತಿ ಕೇಂದ್ರಗಳು, ಮಂಡಲ್ ಸಮಿತಿಗಳು ಯಾವುದೇ ರಾಜಕೀಯ ಪಕ್ಷ ಅಸೂಯೆಪಟ್ಟುಕೊಳ್ಳುವಂತೆ ಇವೆ. ಬಿಜೆಪಿ ನೇತೃತ್ವದ ಸರ್ಕಾರದ 5 ಕೆ.ಜಿ. ಪಡಿತರ ಅಕ್ಕಿ ವಿತರಣೆ ಹಾಗೂ ಮಹಿಳೆಯರನ್ನು ಗುರಿಯಾಗಿಟ್ಟು ರೂಪಿಸಿದ 'ಲಖ್‌ಪತಿ ದೀದಿ'ಯಂತಹ ಯೋಜನೆಗಳು ಜನಮನ್ನಣೆ ಗಳಿಸಿವೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್‌ನ ಸ್ಥಿತಿ ಅನೇಕ ರಾಜ್ಯಗಳಲ್ಲಿ ಆಶಾದಾಯಕವಾಗಿಲ್ಲ. ಎಲ್ಲಾದರೂ ಬಿಜೆಪಿ ವಿರೋಧಿ ಭಾವನೆ ಇದ್ದರೂ, ಅದನ್ನು ಮತವಾಗಿ ಪರಿವರ್ತಿಸುವ ಶಕ್ತಿಯು ಕಾಂಗ್ರೆಸ್ ಅಥವಾ 'ಇಂಡಿಯಾ' ಮೈತ್ರಿಕೂಟಕ್ಕೆ ಇಲ್ಲ. ಸ್ಥಿರತೆ, ನಿರಂತರತೆ, 'ಬ್ರ್ಯಾಂಡ್ ಮೋದಿ' ಅಂಶ ಈಗಲೂ ಬಿಜೆಪಿಯನ್ನು ಮುಂಚೂಣಿಯ ಓಟಗಾರನನ್ನಾಗಿ ಮಾಡಿವೆ. ಆದರೂ, 'ಈ ಬಾರಿ ಎನ್‌ಡಿಎ 400ಕ್ಕೂ ಹೆಚ್ಚು, ಬಿಜೆಪಿ 370ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುತ್ತವೆ' ಎಂದು ಚುನಾವಣಾ ಪ್ರಚಾರದ ಆರಂಭದಲ್ಲಿ ಹೇಳಿದ್ದ ಬಿಜೆಪಿ, ಇತ್ತೀಚಿನ ದಿನಗಳಲ್ಲಿ ಈ ಬಗ್ಗೆ ಏನನ್ನೂ ಹೇಳದಿರುವುದು ಕುತೂಹಲಕ್ಕೆ ಎಡೆಮಾಡಿದೆ.

ಬಿಜೆಪಿಯ ರಾಜ್ಯವಾರು ಮತ ಗಳಿಕೆಯ ಸಾಧ್ಯಾಸಾಧ್ಯತೆ ಹೇಗಿರಬಹುದು? ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಬೇಕೆಂದರೆ, ಈ ನಾಲ್ಕು ರಾಜ್ಯಗಳಲ್ಲಿ– ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಬಿಹಾರ ಹಾಗೂ ಕರ್ನಾಟಕ- ಪಕ್ಷಕ್ಕೆ ಉತ್ತಮ ಫಲಿತಾಂಶ ಬರಬೇಕು, ತಾನು ಈ ಹಿಂದೆ 'ಕ್ಲೀನ್ ಸ್ವೀಪ್' ಮಾಡಿದ್ದ ರಾಜ್ಯಗಳಲ್ಲಿ ಅದೇ ಸ್ಥಿತಿ ಕಾಯ್ದುಕೊಳ್ಳಬೇಕು. ಈ ನಾಲ್ಕು ರಾಜ್ಯಗಳಲ್ಲಿ ಎರಡೂ ಬಣಗಳು– ಎನ್‌ಡಿಎ ಅಥವಾ ಇಂಡಿಯಾ- ಉತ್ತಮ ಫಲಿತಾಂಶ ತೋರಿಸಬಹುದು. ಆದರೆ ಬಿಜೆಪಿಗೆ ತಾನು ಸ್ವೀಪ್ ಮಾಡಿದ್ದ ರಾಜ್ಯಗಳಲ್ಲಿ ಇನ್ನೂ ಹೆಚ್ಚಿನ ಸ್ಥಾನಗಳನ್ನು ಗಳಿಸಲು ಸಾಧ್ಯವಾಗದೇ ಇರಬಹುದು.

ಕೇಸರಿ ಪಡೆ ಉತ್ತಮ ಪ್ರದರ್ಶನ ನೀಡಿದ್ದ ಮೇಲಿನ ನಾಲ್ಕು ರಾಜ್ಯಗಳ ಪೈಕಿ ಬಂಗಾಳ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ರಾಜಕೀಯವಾಗಿ ಭಾರಿ ಬದಲಾವಣೆಗಳು ಆಗಿವೆ. 2019ರಲ್ಲಿ ಈ ರಾಜ್ಯಗಳಲ್ಲಿನ ಒಟ್ಟು 158 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಮಿತ್ರಪಕ್ಷಗಳು ಗಮನಾರ್ಹ ಎನ್ನಬಹುದಾದ 123 ಸ್ಥಾನಗಳನ್ನು ಗೆದ್ದಿದ್ದವು (ಮಹಾರಾಷ್ಟ್ರ: 48ರಲ್ಲಿ 41, ಬಿಹಾರ: 40ರಲ್ಲಿ 39, ಕರ್ನಾಟಕ: 28ರಲ್ಲಿ 25 + 1, ಬಂಗಾಳ: 42ರಲ್ಲಿ 18). ಇತ್ತೀಚಿನ ವರದಿಗಳ ಪ್ರಕಾರ, ಮಹಾರಾಷ್ಟ್ರ, ಬಿಹಾರ ಹಾಗೂ ಕರ್ನಾಟಕದಲ್ಲಿ 2019ರ ಫಲಿತಾಂಶದ ಪುನರಾವರ್ತನೆ ಕಷ್ಟಸಾಧ್ಯ.

ತಮಿಳುನಾಡು, ಆಂಧ್ರಪ್ರದೇಶ, ಕೇರಳದಲ್ಲಿ ಅದು ಖಾತೆ ತೆರೆಯುವ ಉತ್ಸಾಹದಲ್ಲಿದೆ. ಹಿಂದಿನ ಬಾರಿ, ತೆಲಂಗಾಣದ 17 ಸ್ಥಾನಗಳಲ್ಲಿ ನಾಲ್ಕು, ಪಂಜಾಬ್‌ನ 13 ಸ್ಥಾನಗಳಲ್ಲಿ ಎರಡು ಸ್ಥಾನಗಳು ಪಕ್ಷಕ್ಕೆ ದಕ್ಕಿದ್ದವು. ಈಗ ಇಲ್ಲಿ ಇನ್ನೂ ಹೆಚ್ಚು ಸ್ಥಾನಗಳನ್ನು ಗಳಿಸುವ ಹುಮ್ಮಸ್ಸಿನಲ್ಲಿದೆ.

ಉತ್ತರಪ್ರದೇಶದ 80 ಕ್ಷೇತ್ರಗಳಲ್ಲಿ 64, ಒಡಿಶಾದ 21 ಕ್ಷೇತ್ರಗಳ ಪೈಕಿ 8 ಸ್ಥಾನಗಳಲ್ಲಿ ಎನ್‌ಡಿಎ ತೋರಿದ್ದ ಸಾಧನೆ ಇನ್ನೂ ಉತ್ತಮಗೊಳ್ಳುವ ಸಾಧ್ಯತೆ ಇದೆ.

ತಾನು 'ಕ್ಲೀನ್ ಸ್ವೀಪ್' ಮಾಡಿದ್ದ 12 ರಾಜ್ಯಗಳು (ಬಿಹಾರ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಕರ್ನಾಟಕ, ಜಾರ್ಖಂಡ್, ಛತ್ತೀಸಗಢ, ಹರಿಯಾಣ, ದೆಹಲಿ, ಉತ್ತರಾಖಂಡ, ಹಿಮಾಚಲಪ್ರದೇಶ ಮತ್ತು ಗೋವಾ ಸೇರಿ ಒಟ್ಟು 201 ಸ್ಥಾನಗಳು) ಮತ್ತು ಕೆಲವು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಿಜೆಪಿ ಈ ಬಾರಿ ಇನ್ನೂ ಹೆಚ್ಚಿನ ಸ್ಥಾನಗಳನ್ನು ನಿರೀಕ್ಷೆ ಮಾಡಲಾಗದು. ಬದಲಿಗೆ, ಈ ರಾಜ್ಯಗಳಲ್ಲಿ ಅದು ಕೆಲವು ಕ್ಷೇತ್ರಗಳಲ್ಲಿ ಸೋಲಲೂಬಹುದು. ಈ ರಾಜ್ಯಗಳ ಪೈಕಿ ಹೆಚ್ಚಿನವುಗಳಲ್ಲಿ ಪಕ್ಷದ 'ಸ್ಟ್ರೈಕ್ ರೇಟ್' ಶೇ 90ಕ್ಕೂ ಜಾಸ್ತಿ ಇತ್ತು. ಪಕ್ಷ ಇನ್ನೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇರುವ ಮಹಾರಾಷ್ಟ್ರ, ಬಂಗಾಳ, ಒಡಿಶಾ, ಉತ್ತರ ಪ್ರದೇಶ ಮತ್ತು ಅಸ್ಸಾಂನಲ್ಲಿ ಇನ್ನೂ ಉತ್ತಮ ಪ್ರದರ್ಶನ ನೀಡುವ ಹಾಗೂ ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಪಂಜಾಬ್‌ನಲ್ಲಿ ಕನಿಷ್ಠ ಎಷ್ಟು ಸಾಧ್ಯವೋ ಅಷ್ಟು ಗೆಲ್ಲುವ ಗುರಿ ಹೊಂದಿದೆ. ತಮಿಳುನಾಡಿನಲ್ಲಿ ಹಿಂದಿನ ಬಾರಿಯ ಮಿತ್ರಪಕ್ಷ ಎಐಎಡಿಎಂಕೆ ಈಗ ಬಿಜೆಪಿ ಜೊತೆಗಿಲ್ಲ. ಪಂಜಾಬ್‌ನಲ್ಲಿ ಅಕಾಲಿದಳ, ಹರಿಯಾಣದಲ್ಲಿ ಜೆಜೆಪಿ ಕೂಡ ಈಗ ಬಿಜೆಪಿ ಜೊತೆ ಕೈ ಜೋಡಿಸಿಲ್ಲ. ಆಂಧ್ರದಲ್ಲಿ ಹೊಸದಾಗಿ ಹಳೆಯ ಮಿತ್ರಪಕ್ಷ ಟಿಡಿಪಿ ಜೊತೆ ಕೈಜೋಡಿಸಿದೆ. ಕೆಲವು ಸುತ್ತಿನ ನಂತರ, ಒಡಿಶಾದಲ್ಲಿ ಬಿಜೆಪಿ-ಬಿಜೆಡಿ ಮೈತ್ರಿ ಮಾತುಕತೆ ವಿಫಲವಾಗಿದೆ.

ಹಿಂದಿನ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಅನೇಕ ಸಕಾರಾತ್ಮಕ ಅಂಶಗಳಿದ್ದುದು ಅಂಕಿಅಂಶಗಳನ್ನು ಗಮನಿಸಿದರೆ ತಿಳಿಯುತ್ತದೆ. ಗೆದ್ದ 303 ಸ್ಥಾನಗಳ ಪೈಕಿ 224 ಸ್ಥಾನಗಳನ್ನು ಅದು ಶೇ 50+ ಮತಗಳನ್ನು ಪಡೆಯುವ ಮೂಲಕ ತನ್ನದಾಗಿಸಿಕೊಂಡಿತ್ತು (ಇಂತಹ 12 ಸ್ಥಾನಗಳು ಕರ್ನಾಟಕದಲ್ಲಿದ್ದವು). ಅಂದರೆ ಈ ಬೆಳವಣಿಗೆಯು 2024ರ ಚುನಾವಣೆಯಲ್ಲಿ ಪಕ್ಷಕ್ಕೆ ಬಹಳ ಅನುಕೂಲಕರವಾಗಬಹುದು. ಬಿಜೆಪಿಗೆ ತಾನು ಗೆದ್ದ ಅನೇಕ ಸ್ಥಾನಗಳಲ್ಲಿ ನೇರ ಎದುರಾಳಿ ಕಾಂಗ್ರೆಸ್ ಪಕ್ಷವಾಗಿತ್ತು ಮತ್ತು ಈ ಸ್ಥಾನಗಳಲ್ಲಿ ಹೆಚ್ಚಿನವು ಉತ್ತರ ಹಾಗೂ ಪಶ್ಚಿಮ ಭಾರತಕ್ಕೆ ಸೇರಿದ್ದವು. 2019ರಲ್ಲಿ 186 ಕ್ಷೇತ್ರಗಳಲ್ಲಿ ಬಿಜೆಪಿ- ಕಾಂಗ್ರೆಸ್ ಎದುರಾಳಿಗಳಾಗಿದ್ದು, ಇದರಲ್ಲಿ ಬಿಜೆಪಿ 175ರಲ್ಲಿ ಜಯಭೇರಿ ಬಾರಿಸಿತ್ತು.

ಈ ಅಂಕಿಅಂಶಗಳು ಏನನ್ನು ಸೂಚಿಸುತ್ತವೆ? 2019ರಲ್ಲಿ ತನ್ನ ವಿರುದ್ಧ ಬಿಜೆಪಿಗೆ ದೊರೆತ ಭಾರಿ ಅಂತರದ ಗೆಲುವನ್ನು ತನ್ನದಾಗಿಸಿಕೊಳ್ಳಬೇಕಿದ್ದರೆ ತಾನು ಎಷ್ಟು ಕಷ್ಟಪಡಬೇಕು ಎಂಬುದನ್ನು, ಭಾರತದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್‌ಗೆ ಅದು ತೋರಿಸಿಕೊಟ್ಟಿದೆ. ಬಿಜೆಪಿಗೆ ಆಗ ಹೆಚ್ಚಿನ ಸ್ಥಾನಗಳಲ್ಲಿ ದೊರೆತ ಗೆಲುವು ಕಾಂಗ್ರೆಸ್ ವಿರುದ್ಧವೇ ಆಗಿದ್ದರಿಂದ, ಬಿಜೆಪಿಯನ್ನು ಸೋಲಿಸುವಲ್ಲಿ ಕಾಂಗ್ರೆಸ್ ಪಕ್ಷದ ಮೇಲಿರುವ ಜವಾಬ್ದಾರಿಯೂ ಬಹಳಷ್ಟು ಹೆಚ್ಚಾಗಿದೆ. ಈ ದಿಸೆಯಲ್ಲಿ ಕಾಂಗ್ರೆಸ್ ಕೈಗೊಂಡ ಕಾರ್ಯಗಳೇನು? ಕಾರ್ಯಕರ್ತರನ್ನು ಹುರಿದುಂಬಿಸಲು ಹಮ್ಮಿಕೊಂಡ ಕ್ರಮಗಳೇನು? ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಅಂಕಿಅಂಶಗಳೇನೇ ಇರಲಿ, ಈ ಚುನಾವಣೆ ಅತ್ಯಂತ ಕುತೂಹಲದಾಯಕವಾಗಿದೆ. ಹಾಗಾಗಿ, ಜೂನ್ 4ರಂದು ಪ್ರತಿಯೊಬ್ಬರೂ ಟಿ.ವಿ. ಮುಂದೆ ಕೂರುವುದಂತೂ ಖಾತರಿ!

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಬೇತಾಳಕ್ಕೇ ಪ್ರಶ್ನೆಗಳು!

• ಬಿ.ಎನ್.ಮಲ್ಲೇಶ್

ಹುಣಿಸೆಮರದ ಕೆಳಗೆ ಸಿಗರೇಟು ಸೇದುತ್ತ ನಿಂತಿದ್ದ ತೆಪರೇಸಿಯ ಹೆಗಲೇರಿದ ಬೇತಾಳ 'ಎಲೈ ತೆಪರನೆ, ಎಷ್ಟು ಸಲ ಹೇಳೋದು ಇಲ್ಲಿಗೆ ಬರಬೇಡ ಅಂತ. ಇರಲಿ, ಈಗ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳದಿದ್ದಲ್ಲಿ ನಿನ್ನ ತಲೆ ಸಿಡಿದು ಸಾವಿರ ಹೋಳಾದೀತು' ಎಂದು ಎಚ್ಚರಿಸಿತು.

ಬೇತಾಳದ ಬೆದರಿಕೆಗೆ ಗಹಗಹಿಸಿ ನಕ್ಕ ತೆಪರೇಸಿ 'ಎಲೈ ತಗಡು ಬೇತಾಳವೆ, ನೀನು ಪ್ರಶ್ನೆ ಕೇಳುವ ಕಾಲ ಮುಗೀತು. ಈಗ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರಿಸು. ಇಲ್ಲವಾದಲ್ಲಿ ನಿನ್ನನ್ನು ಇ.ಡಿ. ವಶಕ್ಕೆ ಒಪ್ಪಿಸಬೇಕಾದೀತು' ಎಂದ.

ನನ್ ಬುಡಕ್ಕೇ ಬಂದ್ನಲ್ಲಪ್ಪ ಇವ್ನು ಎಂದುಕೊಂಡ ಬೇತಾಳ, 'ಅದೇನು ಕೇಳು' ಎಂದಿತು.

'ಪೆನ್‌ಡ್ರೈವ್ ಫ್ಯಾಕ್ಟರಿ ಎಲ್ಲಿದೆ, ಹಾಸನದಲ್ಲಿ ಅವನ್ನು ಹಂಚಿಸಿದವರಾರು?'

'ದೇವ್ರಾಣೆ ಗೊತ್ತಿಲ್ಲ'.

'ಈ ನಿಂಬೆಹಣ್ಣು, ತಾಯತ, ಕೈದಾರ, ಉಡುದಾರದ ಪವರ್ ಎಷ್ಟು ವರ್ಷ ಇರುತ್ತೆ?'

'ಅದೂ ಗೊತ್ತಿಲ್ಲ'.

'ಓಕೆ, ಈಗ ವಿದೇಶದಲ್ಲಿರುವ ಉಜ್ವಲ್ ಯಾವಾಗ ವಾಪಸ್ ಬರಬಹುದು?'

'ಅದು ಉಜ್ವಲ್ ಅಲ್ಲ...' ಬೇತಾಳ ವಾದಿಸಿತು.

'ಗೊತ್ತು, ಜನ ಆ ವಿಡಿಯೊ ನೋಡಾಕೆ ಮೊಬೈಲ್‌ನ ಉಜ್ಜಿ ಉಜ್ಜಿ ಅದೀಗ ಉಜ್ವಲ್ ಆಗೋಗಿದೆ. ಇರ್‍ಲಿ, ಈಗ ಸೆಂಟ್ರಲ್‌ನಲ್ಲಿ 'ಅಬ್ಕೀ ಬಾರ್...' ಎಷ್ಟು ಬರಬಹುದು?'

'ಗೊತ್ತಿಲ್ಲ, ನಾನು ಬೇತಾಳ, ಜ್ಯೋತಿಷಿ ಅಲ್ಲ'.

'ಆಯ್ತು, ಫಲಿತಾಂಶದ ನಂತರ 'ವಾಲು' ಬಿಡುಗಡೆ ಆಗಬೋದಾ? 'ಬಂಡೆ' ಸಿಂಹಾಸನ ಏರಬೋದಾ?'

'ಗೊತ್ತಿಲ್ಲ, ಇದನ್ನ ಟಿ.ವಿ.ಯೋರಿಗೆ ಕೇಳು, ಚೆನ್ನಾಗಿ ಹೇಳ್ತಾರೆ'.

'ಹೋಗ್ಲಿ, ಬಂಡೆ ಮತ್ತು ಬ್ರದರ್ ಮಾತಿನ ಯುದ್ಧ ಎಲ್ಲಿಗೆ ಹೋಗಿ ನಿಲ್ಲಬಹುದು?'

'ಗೊತ್ತಿಲ್ಲ, ಆದ್ರೆ ಡಿಕ್ಷನರಿಗೆ ಹೊಸ ಹೊಸ ಪದಗಳು ಸಿಗಬಹುದು'.

'ಏನು ಕೇಳಿದ್ರೂ ಗೊತ್ತಿಲ್ಲ ಅಂತೀಯ, ನಿನ್ ತಲೆ ಸಿಡಿದು ಹೋಳಾಗಲ್ವಾ?' ತೆಪರೇಸಿಗೆ ಸಿಟ್ಟು ಬಂತು. 'ನಂಗೆ ತಲೆಯೇ ಇಲ್ಲ...' ಬೇತಾಳ ನಗುತ್ತಾ ಹಾರಿಹೋಗಿ ಹುಣಿಸೆಮರಕ್ಕೆ ನೇತು ಹಾಕಿಕೊಂಡಿತು.

ಸಂಗತ

ಶ್ವಾನ ತಳಿ: ತಾರತಮ್ಯ ತರವೇ?

ಸಾಕುಪ್ರಾಣಿಗಳ ನಡವಳಿಕೆಗೆ ಮನುಷ್ಯನೇ ನೇರ ಹೊಣೆಗಾರ

• ಡಾ. ಮುರಳೀಧರ ಕಿರಣಕೆರೆ

ಕೇಂದ್ರ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ ಎರಡು ತಿಂಗಳ ಹಿಂದೆ ಹೊರಡಿಸಿದ್ದ ಸುತ್ತೋಲೆಯೊಂದು ಶ್ವಾನಪ್ರಿಯರ ಆಕ್ರೋಶಕ್ಕೆ ಕಾರಣವಾಗಿದೆ. ಇಪ್ಪತ್ತಕ್ಕೂ ಹೆಚ್ಚು ಶ್ವಾನ ತಳಿಗಳನ್ನು ಅತಿ ಅಪಾಯಕಾರಿ ಮತ್ತು ಕ್ರೂರ ತಳಿಗಳೆಂದು ವರ್ಗೀಕರಿಸಿ ಅವುಗಳ ಆಮದು, ಸಂತಾನಾಭಿವೃದ್ಧಿ ಮತ್ತು ಮಾರಾಟಕ್ಕೆ ನಿಷೇಧ ಹೇರುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದ ಕೇಂದ್ರದ ನಡೆಯನ್ನು ಪ್ರಶ್ನಿಸಿ, ಪ್ರಾಣಿಪ್ರಿಯರ ಕೆಲವು ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿ ಸರ್ಕಾರದ ಕ್ರಮಕ್ಕೆ ತಡೆಯಾಜ್ಞೆ ತಂದಿವೆ.

ರಾಟ್‌ವೀಲರ್, ಪಿಟ್‌ಬುಲ್, ಟೆರಿಯರ್, ವುಲ್ಫ್‌ಡಾಗ್, ಅಮೆರಿಕನ್ ಬುಲ್‌ಡಾಗ್, ಮ್ಯಾಸ್ಟಿಫ್, ಅಕಿಟದಂತಹ ತಳಿಗಳು ಈ ಅಪಾಯಕಾರಿ ಶ್ವಾನಗಳ ಪಟ್ಟಿಯಲ್ಲಿವೆ. ಎಲ್ಲವೂ ವಿದೇಶಿ ತಳಿಗಳಾದರೂ ನಮ್ಮ ದೇಶದಲ್ಲಿಯೂ ತುಂಬಾ ಜನಪ್ರಿಯ. ಇವುಗಳ ಸಾಕಣೆದಾರರ ಸಂಖ್ಯೆಯೂ ದೊಡ್ಡದಿದೆ! ಹಾಗಂತ ಕೇಂದ್ರ ಸರ್ಕಾರವು ಶ್ವಾನಪಾಲಕರ ಮೇಲೇನೂ ನಿಷೇಧ ಹೇರಿರಲಿಲ್ಲ. ಇಂತಹ ನಾಯಿಗಳ ಪೀಳಿಗೆ ಮುಂದುವರಿಯದಂತೆ ಕಡ್ಡಾಯವಾಗಿ ಸಂತಾನಶಕ್ತಿ ಹರಣ ಪ್ರಕ್ರಿಯೆಗೆ ಒಳಪಡಿಸಲು ನಿರ್ದೇಶನ ನೀಡಿತ್ತು. ತಮ್ಮ ಮುದ್ದಿನ ಶ್ವಾನಗಳ ಮೇಲಿನ ಈ ಕಡಿವಾಣ ಮಾಲೀಕರಿಗೆ ಅಪಥ್ಯವಾಗಿದ್ದರಿಂದ ಅಸಹನೆ ಹುಟ್ಟಿತ್ತು.

ಇಂತಹದ್ದೊಂದು ಮಹತ್ವದ ನಿರ್ಧಾರ ಕೈಗೊಳ್ಳುವ ಮುನ್ನ ಎಲ್ಲ ಭಾಗೀದಾರರ ಅಭಿಪ್ರಾಯ ಆಲಿಸಿಲ್ಲ ಎಂಬುದು ಮುಖ್ಯ ತಕರಾರು. ಕೆನೆಲ್ ಕ್ಲಬ್, ಶ್ವಾನತಳಿ ಪ್ರಮಾಣೀಕರಿಸುವ ಸಂಸ್ಥೆಗಳು, ಪ್ರಾಣಿದಯಾ ಸಂಘಗಳ ಅಭಿಪ್ರಾಯಗಳನ್ನು ಕೇಳದೆ, ಕೆಲವೇ ತಜ್ಞರ ಸಲಹೆ ಮೇರೆಗೆ ತೀರ್ಮಾನ ತೆಗೆದುಕೊಂಡಿರುವ ಸರ್ಕಾರದ ನಡೆಗೆ ಅಸಮ್ಮತಿ ಸೂಚಿಸಿದ ಹೈಕೋರ್ಟ್, ಸುತ್ತೋಲೆಗೆ ತಡೆ ನೀಡಿದೆ. ಹಾಗಂತ ನಿಷೇಧ ಬೇಡವೇ ಬೇಡ ಎಂದೇನೂ ಹೇಳಿಲ್ಲ. ಪಾಲುದಾರರೆಲ್ಲರ ಅಭಿಪ್ರಾಯ ಕೇಳಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂಬ ನ್ಯಾಯಾಲಯದ ಸಲಹೆ ಮೇರೆಗೆ, ನಿಷೇಧದ ಕುರಿತು ಅನಿಸಿಕೆಯನ್ನು ಜೂನ್ ಒಂದರೊಳಗೆ ತಿಳಿಸುವಂತೆ ಪಶುಸಂಗೋಪನಾ ಇಲಾಖೆಯು ಸಂಬಂಧಪಟ್ಟವರನ್ನು ಕೋರಿದೆ.

ಹೀಗೊಂದು ನಿರ್ಧಾರ ತೆಗೆದುಕೊಳ್ಳಲು ಸರ್ಕಾರಕ್ಕೆ ಒತ್ತಡ ಬಂದದ್ದು ನ್ಯಾಯಾಲಯದಿಂದಲೇ ಎಂಬುದು ಗಮನಾರ್ಹ. ನಮ್ಮ ದೇಶದಲ್ಲಿ ಜನ, ಜಾನುವಾರುಗಳ ಮೇಲೆ ನಾಯಿಗಳ ದಾಳಿ, ಕಡಿತ, ತತ್ಸಂಬಂಧದ ಸಾವು-ನೋವಿನ ಸಂಖ್ಯೆ ಏರುಗತಿಯಲ್ಲಿದೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಸಂತ್ರಸ್ತರು, ಮಾನವ ಹಕ್ಕುಗಳ ಕಾರ್ಯಕರ್ತರು ನ್ಯಾಯಾಂಗದ ಮೊರೆ ಹೋಗುತ್ತಲೇ ಇದ್ದಾರೆ. ಅಗತ್ಯ ಕ್ರಮ ಕೈಗೊಳ್ಳಬೇಕೆಂಬ ಸೂಚನೆಯ ಮೇರೆಗೇ ಸರ್ಕಾರ ಈ ಹೆಜ್ಜೆ ಇಟ್ಟಿದ್ದು. ಕೆಲವು ಜಾತಿಯ ನಾಯಿಗಳು ತುಂಬಾ ಅಪಾಯಕಾರಿಯಾಗಿ ವರ್ತಿಸುತ್ತವೆ, ಅವುಗಳ ತಳಿ ಗುಣಧರ್ಮದ ಕಾರಣದಿಂದ ದಾಳಿ ಪ್ರಕರಣಗಳು ಹೆಚ್ಚುತ್ತಿವೆ ಎನ್ನುವುದೇ ಕೇಂದ್ರ ಸರ್ಕಾರದ ತೀರ್ಮಾನದ ಹಿಂದಿರುವ ಕಾರಣ.

ನಾಯಿಗಳನ್ನು ಅಪಾಯಕಾರಿ, ಕ್ರೂರ, ಸೌಮ್ಯ ಎಂದೆಲ್ಲಾ ವರ್ಗೀಕರಣ ಮಾಡುವುದು ಸಾಧುವೇ ಎಂಬುದೇ ನಮ್ಮೆದುರಿಗಿರುವ ಪ್ರಶ್ನೆ. ಮಾನವ ಸೇರಿದಂತೆ ಎಲ್ಲಾ ಪ್ರಾಣಿಗಳ ವರ್ತನೆ ರೂಪಿಸುವಲ್ಲಿ ಆನುವಂಶೀಯ ಗುಣಧರ್ಮಕ್ಕಿಂತಲೂ ಪರಿಸರದ ಪಾತ್ರವೇ ದೊಡ್ಡದು. ನಾಯಿಗಳ ಸಾಧು ಸ್ವಭಾವ, ಸ್ನೇಹಪರತೆ, ಹೊಂದಾಣಿಕೆ, ಸಿಟ್ಟು, ಆಕ್ರಮಣಶೀಲತೆ, ಮೈಮೇಲೆ ಎರಗುವಂತಹ ಮನಃಸ್ಥಿತಿಯ ಲಕ್ಷಣಗಳು ಮೈದಳೆಯುವುದು ಅವು ಬೆಳೆಯುವ ಪರಿಸರದ ಪ್ರಭಾವದಲ್ಲಿ. ಇಲ್ಲಿ ವಂಶವಾಹಿಗಳ ಪಾತ್ರ ಕಿರಿದು. ಅಂದರೆ ನಾಯಿಯೊಂದು ಸದಾ ದಾಳಿ ಪ್ರವೃತ್ತಿ ಹೊಂದಿದೆಯೆಂದರೆ ಅದಕ್ಕೆ ಆ ಉದ್ದೇಶಕ್ಕಾಗಿಯೇ ತರಬೇತಿ ಸಿಕ್ಕಿರಬಹುದು, ಇಲ್ಲವೇ ಆ ಶ್ವಾನಕ್ಕೆ ಸರಿಯಾದ ಸಾಮಾಜಿಕ ನಡತೆ ಕಲಿಸಲು ಅದರ ಪಾಲಕ ವಿಫಲನಾಗಿದ್ದಾನೆ ಎಂದರ್ಥ. ಹಾಗಾಗಿ, ಸಾಕುಪ್ರಾಣಿಗಳ ನಡವಳಿಕೆಗೆ ಮನುಷ್ಯನೇ ನೇರ ಹೊಣೆಗಾರ ವಿನಾ ತಳಿಧರ್ಮವಲ್ಲ. ಕೆಲವು ಜಾತಿಯ ನಾಯಿಗಳ ದೈಹಿಕ ಸಾಮರ್ಥ್ಯ ಹೆಚ್ಚಿರುವುದರಿಂದ ಆಕ್ರಮಣದ ತೀವ್ರತೆ ಆಘಾತಕಾರಿಯಾಗಿರಬಹುದು. ನಾಯಿಗಳಲ್ಲೇ ನಾಲ್ಕು ನೂರಕ್ಕೂ ಅಧಿಕ ಜಾತಿಗಳಿವೆ. ಕೆಲವು ತಳಿಗಳನ್ನು 'ಉಗ್ರ ಸ್ವಭಾವ'ದ ಪಟ್ಟಿಗೆ ಸೇರಿಸಿದೊಡನೆ ಸಮಸ್ಯೆ ಬಗೆಹರಿಯದು.

ನಮ್ಮಲ್ಲಿ ಸಾಕುನಾಯಿಗಳ ಕಡಿತದ ಪ್ರಕರಣಗಳಿಗಿಂತಲೂ ಬೀದಿನಾಯಿಗಳ ಆಕ್ರಮಣದಿಂದ ಆಗುತ್ತಿರುವ ಅನಾಹುತಗಳೇ ಜಾಸ್ತಿ. ಬೀಡಾಡಿ ನಾಯಿಗಳನ್ನು ನಿಯಂತ್ರಿಸುವುದೊಂದೇ ಪರಿಹಾರ

ಮಾರ್ಗ. ಅಂದರೆ ಎಲ್ಲಾ ಬೀದಿನಾಯಿಗಳನ್ನು ಸಂತಾನಶಕ್ತಿಹರಣ ಕ್ರಿಯೆಗೆ ಒಳಪಡಿಸಿ ಕ್ರಮೇಣ ಅವುಗಳ ಸಂಖ್ಯೆ ತಗ್ಗುವಂತೆ ಮಾಡಬೇಕು. ನಮ್ಮ ದೇಶದಲ್ಲಿ ನಾಲ್ಕು ಕೋಟಿಯಷ್ಟು ಸಾಕುನಾಯಿಗಳು, ಏಳು ಕೋಟಿಗೂ ಅಧಿಕ ಬೀದಿನಾಯಿಗಳಿವೆ ಎಂಬ ಅಂದಾಜಿದೆ. ಅವುಗಳನ್ನು ಹಿಡಿದು ಸಂತಾನಶಕ್ತಿ ಹರಣ ಮಾಡಿ, ದೇಹಸ್ಥಿತಿಯ ಮೇಲೆ ಒಂದು ವಾರ ನಿಗಾ ವಹಿಸಿ, ರೇಬಿಸ್ ನಿರೋಧಕ ಲಸಿಕೆ ನೀಡಿ, ಮರಳಿ ಅವುಗಳ ಸ್ವಸ್ಥಾನಕ್ಕೆ ಬಿಡುವುದು ನಿಜಕ್ಕೂ ಸಮರಸದೃಶ ಕಾರ್ಯ!

ಇಲ್ಲಿನ ಅಗತ್ಯ ದೊಡ್ಡ ಪ್ರಮಾಣದ ಆರ್ಥಿಕ, ಮಾನವ ಸಂಪನ್ಮೂಲವಷ್ಟೇ ಅಲ್ಲ, ಬದ್ಧತೆ, ಸಮರ್ಪಕ ಯೋಜನೆ, ಪರಿಣಾಮಕಾರಿ ಅನುಷ್ಠಾನ ಎಲ್ಲವೂ ಬೇಕು. ಇದು ಆಡಳಿತದ ಆದ್ಯತೆಯಾದಾಗ ಮಾತ್ರ ಸಕಾರಾತ್ಮಕ ಫಲಿತಾಂಶ ನಿರೀಕ್ಷಿಸಬಹುದು. ವಾಸ್ತವ ಹೀಗಿರಲು, ಕೆಲವು ಶ್ವಾನ ತಳಿಗಳನ್ನು ನಿಷೇಧಿಸುವುದರಿಂದ ಸಮಸ್ಯೆಗೆ ಪರಿಹಾರವಾದರೂ ಹೇಗೆ ಸಾಧ್ಯ?

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಅನುದಾನ ನೀಡಿಕೆ: ಲೋಪ ಆಗಿದ್ದು ಹೇಗೆ?

ಬೆಂಗಳೂರಿನಲ್ಲಿ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆಯೊಂದರ ಮಾನ್ಯತೆಯು 2020ರಲ್ಲೇ ರದ್ದಾಗಿದ್ದರೂ ಅದಕ್ಕೆ ₹ 27 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಆದೇಶ ನೀಡಿರುವುದಾಗಿ ವರದಿಯಾಗಿದೆ. ಶಾಲೆಗೆ ಸಂಬಂಧಿಸಿದ ಕಡತವನ್ನು ಸರಿಯಾಗಿ ಪರಿಶೀಲಿಸದೆ, ಮೂರು ವರ್ಷಗಳ ಅನುದಾನ ಬಿಡುಗಡೆಗೆ ಕಾರ್ಯದರ್ಶಿ ಆದೇಶ ನೀಡಿದ್ದಾದರೂ ಹೇಗೆ? ಕೆಳಹಂತದ ಸಿಬ್ಬಂದಿ ಅವರಿಂದ ವಿಷಯವನ್ನು ಮರೆಮಾಚಿದರೇ? ಸಂಬಂಧಿಸಿದ ಇಲಾಖೆಯ ನಿರ್ದೇಶಕರಾದರೂ ಹಣ ಬಿಡುಗಡೆಗೆ ಮುಂದಾಗದೆ, ವಸ್ತುಸ್ಥಿತಿಯನ್ನು ಕಾರ್ಯದರ್ಶಿಯವರ ಗಮನಕ್ಕೆ ತರಬೇಕಾಗಿತ್ತಲ್ಲವೇ? ಇದು ಸಂಬಂಧಿಸಿದ ಎಲ್ಲರ ಕರ್ತವ್ಯಲೋಪ ಆಗುವುದಲ್ಲವೇ?

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಪ್ರೋತ್ಸಾಹಧನ ನೀಡಿಕೆ ಸ್ವಾಗತಾರ್ಹ

ಸರ್ಕಾರಿ ಶಾಲೆಯಲ್ಲಿ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಬಾಗಲಕೋಟೆ ಜಿಲ್ಲೆಯ ಅಂಕಿತಾ ಕೊಣ್ಣೂರ ಹಾಗೂ ಮೂರನೇ ಸ್ಥಾನ ಪಡೆದ ಮಂಡ್ಯ ಜಿಲ್ಲೆಯ ಕೆ.ಸಿ.ನವನೀತ್ ಅವರಿಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರೋತ್ಸಾಹಧನ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ. ಇಷ್ಟೇ ಅಲ್ಲದೆ ಇವರು ವ್ಯಾಸಂಗ ಮಾಡಿದ ಮುಧೋಳ ತಾಲ್ಲೂಕು ಹಾಗೂ ಮಂಡ್ಯ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಕ್ರಮವಾಗಿ ತಲಾ ₹ 1 ಕೋಟಿ ಹಾಗೂ ₹ 50 ಲಕ್ಷ ಅನುದಾನ ಘೋಷಣೆ ಮಾಡಿರುವುದು ಒಳ್ಳೆಯ ಬೆಳವಣಿಗೆ. ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುವ ಪೋಷಕರು ತಮ್ಮ ಮಕ್ಕಳಿಗೆ ಅತ್ಯುತ್ತಮ ಅಂಕ ಬರಲೆಂದು ಖಾಸಗಿ ಶಾಲೆಗಳಿಗೆ ಸೇರಿಸಲು ಒಲವು ತೋರುತ್ತಾರೆ. ಇಂತಹ ಸಂದರ್ಭದಲ್ಲಿ, ಸರ್ಕಾರಿ ಶಾಲೆಯಲ್ಲಿ ಓದಿದರೂ ಉತ್ತಮ ಸಾಧನೆ ಮಾಡಲು ಸಾಧ್ಯ ಎಂಬ ಸಂದೇಶವನ್ನು ಈ ವಿದ್ಯಾರ್ಥಿಗಳು ನೀಡಿದ್ದಾರೆ.

ಹೆಚ್ಚಿನ ಪೋಷಕರು ತಮ್ಮ ಮಕ್ಕಳಿಗೆ ಹತ್ತಾರು ಗಂಟೆ ಅಭ್ಯಾಸ ಮಾಡಲೇಬೇಕೆಂದು ಒತ್ತಡ ಹೇರುತ್ತಾರೆ. ಇದರಿಂದಾಗಿ ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ ಬಳಲುತ್ತಾರೆ. ಪರೀಕ್ಷಾ ಸಮಯದಲ್ಲಿ ಹೆಚ್ಚು ಒತ್ತಡ ಹೇರುವ ಬದಲು, ಶಾಲೆ ಪ್ರಾರಂಭದ ದಿನದಿಂದಲೇ ಇಂತಿಷ್ಟು ಗಂಟೆ ಎಂದು ನಿಗದಿ ಮಾಡಿಕೊಂಡು ವ್ಯವಸ್ಥಿತವಾಗಿ ಕಲಿಯುವುದು ಒಳ್ಳೆಯದು ಎಂಬುದನ್ನು ಅಂಕಿತಾಳ ಹೇಳಿಕೆಯಲ್ಲಿ ಗಮನಿಸಬಹುದು.

ಚೆಲುವರಾಜು ಕೆ., ಧನಗೆರೆ, ಕೊಳ್ಳೇಗಾಲ

ಶಿಕ್ಷಕರು ಶಿಕ್ಷಕರಾಗಿ ಉಳಿಯಲಿ

'ಶಿಕ್ಷಕರ ಮಕ್ಕಳಿಗೇಕೆ ಸರ್ಕಾರಿ ಶಾಲೆ ವರ್ಜ್ಯ?' ಎಂದು ಶಿವಕುಮಾರ ಬಂಡೋಳಿ ಎಂಬುವರು ಪ್ರಶ್ನಿಸಿದ್ದಾರೆ (ವಾ.ವಾ., ಮೇ 16). ಸರ್ಕಾರಿ ಶಾಲೆಗಳು ಇಂದು ಶಿಕ್ಷಣ ನೀಡುವ ಕೇಂದ್ರಗಳಾಗಿ ಮಾತ್ರ ಉಳಿದಿಲ್ಲ, ಬದಲಿಗೆ ನೂರಾರು ಯೋಜನೆಗಳನ್ನು ಅನುಷ್ಠಾನಗೊಳಿಸಿ ಮಾಹಿತಿಯನ್ನು ಇಲಾಖೆಗೆ ಪೂರೈಸುವ ಕೇಂದ್ರಗಳಾಗಿವೆ ಎಂಬುದು, ಸರ್ಕಾರಿ ಶಾಲೆಯ ಒಬ್ಬ ಶಿಕ್ಷಕನಾಗಿರುವ ನನ್ನ ಅನಿಸಿಕೆ. ಶಿಕ್ಷಕರನ್ನು ಶಿಕ್ಷಣ ನೀಡುವ ಕಾರ್ಯಕ್ಕಷ್ಟೇ ಸೀಮಿತಗೊಳಿಸಿದರೆ, ಕಲಿಕೆಯಲ್ಲಿ ಅವರು ಪವಾಡಗಳನ್ನೇ ಸೃಷ್ಟಿಸಬಲ್ಲರು. ಆದರೆ ಒಬ್ಬ ಶಿಕ್ಷಕನಿಗೆ ನೀಡುತ್ತಿರುವ ಕೆಲಸಗಳಾದರೂ ಏನು? ಸಂತೆಯಿಂದ ತರಕಾರಿ, ಮೊಟ್ಟೆ, ಚಿಕ್ಕಿ ತರುವುದೆಲ್ಲವನ್ನೂ ಆತ ಮಾಡಬೇಕಾಗಿದೆ.

ನನ್ನ ಮಕ್ಕಳಿಗೆ ಸರ್ಕಾರಿ ಸವಲತ್ತುಗಳಲ್ಲೇ ಶಿಕ್ಷಣ ಕೊಡಿಸುತ್ತಿದ್ದೇನೆ. ನನ್ನಂತೆ ಮಕ್ಕಳಿಗೆ ಮನೆಯಲ್ಲಿ ವೈಯಕ್ತಿಕ ಕಾಳಜಿ ನೀಡಲು ಎಲ್ಲ ಶಿಕ್ಷಕರಿಗೂ ಸಮಯ ಇರುವುದಿಲ್ಲ. ಶಿಕ್ಷಕರ ಮಕ್ಕಳು ಮಾತ್ರ ಸರ್ಕಾರಿ ಶಾಲೆಯಲ್ಲಿ ಓದಬೇಕೇಕೆ? ಎಲ್ಲ ಸರ್ಕಾರಿ ಅಧಿಕಾರಿಗಳು, ಶಾಸಕರು, ಸಂಸದರ ಮಕ್ಕಳೂ ಸರ್ಕಾರಿ ಶಾಲೆಗಳಲ್ಲಿ ಓದುವಂತೆ ಆಗಬೇಕು. ಹಾಗೆಯೇ ಶಿಕ್ಷಕರ ಮೇಲಿನ ಬೇರೆ ಬೇರೆ ಹೊರೆಗಳನ್ನು ಕಡಿಮೆ ಮಾಡಬೇಕು. ಅವರು ಮುಕ್ತವಾಗಿ ಶಿಕ್ಷಣ ಕೊಡುವುದಕ್ಕೆ ಹೆಚ್ಚು ಒತ್ತು ನೀಡಬೇಕು. ಆಗ ಮಾತ್ರ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಮತ್ತು ಎಲ್ಲರೂ ಸರ್ಕಾರಿ ಶಾಲೆಗಳತ್ತ ಆಕರ್ಷಿತರಾಗಲು ಸಾಧ್ಯ.

ಜಗದೀಶ ಎಲ್.ಎಂ., ಹುಬ್ಬಳ್ಳಿ

ದೇಣಿಗೆಯಿಂದ ದೇಗುಲ ನಿರ್ಮಿಸಿ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ತಿಂಗಳಿಗೆ ₹ 2,000 ನೀಡುತ್ತಿದೆ. ಈ ಹಣ ಆ ಮಹಿಳೆಯರಿಗೆ ಅಮೂಲ್ಯವಾದುದು ಮತ್ತು ಅವರ ಸಬಲೀಕರಣದತ್ತ ಅದು ಮಹತ್ತರವಾದ ಹೆಜ್ಜೆ. ಮಹಿಳೆಯರು ಆರ್ಥಿಕವಾಗಿ ಮುನ್ನಡೆಯಲು, ಮನೆದೂಗಿಸಲು ಅದು ಸಂಜೀವಿನಿಯಂತಹ ದೊಡ್ಡ ಬಲ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಈ ಹಣವನ್ನು ಕಿತ್ತುಕೊಂಡು ಗುಡಿ ಕಟ್ಟಲು ಮುಂದಾಗಿರುವುದರ ಹಿಂದೆ ಕೆಲವೇ ಕೆಲವು ಅಜ್ಞಾನಿ ಮುಖಂಡರ ಕೈವಾಡ ಇರಬಹುದು. ಬಡವರನ್ನು ಬಡವರನ್ನಾಗಿಯೇ ಉಳಿಸಲು ಮಾಡುವ ಈ ಹುನ್ನಾರ ಖಂಡನೀಯ.

ಮಹಿಳೆಯರಿಗೆ ಕೊಡಮಾಡುವ ಹಣ ಹೀಗೆ ಒತ್ತಾಯದ ಮೂಲಕ ಧರ್ಮದ ಹೆಸರಿನಲ್ಲಿ ದುರ್ಬಳಕೆ ಆಗದಂತೆ ಸರ್ಕಾರ ನೋಡಿಕೊಳ್ಳಬೇಕು. ಜೊತೆಗೆ, ಧಾರ್ಮಿಕ ದತ್ತಿ ಇಲಾಖೆಯ ಮೂಲಕ ಉಳ್ಳವರಿಂದ ದೇಣಿಗೆ ಸಂಗ್ರಹಿಸಿ ದೇವಸ್ಥಾನಗಳನ್ನು ಕಟ್ಟಿಸುವ ವ್ಯವಸ್ಥೆ ಆಗಲಿ.

ಗಿರಿಯಪ್ಪ ಕೊಳ್ಳಣ್ಣವರ, ತುಮಕೂರು

ತನಿಖೆಯ ದಿಕ್ಕು ತಪ್ಪಿಸುತ್ತಿರುವ ನಾಯಕರು

ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್‌ಡ್ರೈವ್ ಪ್ರಕರಣವು ದಿನದಿಂದ ದಿನಕ್ಕೆ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಕೆಲವು ನಾಯಕರು ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಈ ಪ್ರಕರಣದಲ್ಲಿ ಸಿಲುಕಿರಬಹುದೆಂಬ ಗುಮಾನಿ ಬಲವಾಗತೊಡಗಿದೆ. ಆದರೂ ಒಬ್ಬರ ಮೇಲೆ ಮತ್ತೊಬ್ಬರು ಗೂಬೆ ಕೂರಿಸುವ ಕೆಲಸ ಮಾತ್ರ ಎಗ್ಗಿಲ್ಲದೇ ಸಾಗಿದೆ. ಪ್ರತಿನಿತ್ಯ ಇವರು ಮಾಧ್ಯಮಗಳಿಗೆ ನೀಡುತ್ತಿರುವ ಹೇಳಿಕೆಗಳು ತನಿಖೆಯ ದಿಕ್ಕು ತಪ್ಪಿಸುವಂತಿವೆ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್ಐಟಿಯು ಕೆಲವರನ್ನು ಬಂಧಿಸುವ ಮೂಲಕ ತನಿಖೆಯನ್ನು ಚುರುಕುಗೊಳಿಸಿದೆಯಾದರೂ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲ. ಇಂತಹ ಸೂಕ್ಷ್ಮ ಹಾಗೂ ಗಂಭೀರ ಪ್ರಕರಣಗಳಲ್ಲಿ ರಾಜಕೀಯ ನಾಯಕರು ತಮ್ಮ ಜವಾಬ್ದಾರಿ ಅರಿತು ಮಾತನಾಡಬೇಕು.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ಕಾಶ್ಮೀರ ಕಣಿವೆ: ಸ್ಪರ್ಧಿಸದಿದ್ದರೂ ಬಿಜೆಪಿಗೆ ಹಲವು ಸವಾಲುಗಳು

'ನಾವು ಹೇಳಿದಂತೆ ಸಂವಿಧಾನದ 370ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನವನ್ನು ರದ್ದುಪಡಿಸಿದ್ದೇವೆ' ಎಂದು ಬಿಜೆಪಿ ನಾಯಕರು ದೇಶದ ಎಲ್ಲೆಡೆ ಚುನಾವಣಾ ಪ್ರಚಾರಗಳಲ್ಲಿ ಹೇಳುತ್ತಿದ್ದಾರೆ. ಆದರೆ ಕಾಶ್ಮೀರದ ಯಾವ ಕ್ಷೇತ್ರದಲ್ಲೂ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿಲ್ಲ

ಪ್ರಜಾವಾಣಿ ವಾರ್ತೆ

'ಜಮ್ಮು ಮತ್ತು ಕಾಶ್ಮೀರಕ್ಕೆ ವಿಧಿ 370ರ ಅಡಿ ನೀಡಲಾಗಿದ್ದ ವಿಶೇಷ ಸ್ಥಾನವನ್ನು ರದ್ದು ಮಾಡಿರುವುದು ಕೇಂದ್ರದ ಮೋದಿ ಸರ್ಕಾರದ ಬಹುದೊಡ್ಡ ಸಾಧನೆ' ಎಂದು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಂದ ಹಿಡಿದು ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಪಕ್ಷದ ಬೆಂಬಲಿಗರು ಹೇಳುತ್ತಾರೆ.

'ಕಾಶ್ಮೀರವನ್ನು ಬಂಧಮುಕ್ತ ಮಾಡಿದ್ದಕ್ಕಾಗಿ, ಭಾರತದೊಂದಿಗೆ ಜೋಡಿಸಿದ್ದಕ್ಕಾಗಿ ನಮ್ಮ ಮತ ಮೋದಿ ಅವರಿಗೆ' ಎನ್ನುವಂಥ ಮಾತುಗಳನ್ನು ಪಕ್ಷದ ಬೆಂಬಲಿಗರು 2024ರ ಲೋಕಸಭಾ ಚುನಾವಣೆ ಉದ್ದಕ್ಕೂ ಹೇಳುತ್ತಲೇ ಬಂದಿದ್ದಾರೆ. ಆದರೆ, ಕಾಶ್ಮೀರದ ಮೂರು ಲೋಕಸಭಾ ಕ್ಷೇತ್ರಗಳಿಗೆ ಬಿಜೆಪಿಯು ತನ್ನ ಅಭ್ಯರ್ಥಿಯನ್ನು ಕಣಕ್ಕೇ ಇಳಿಸಿಲ್ಲ. 'ವಿಧಿ 370ರ ಅಡಿ ನೀಡಲಾದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ್ದನ್ನು ಇಟ್ಟುಕೊಂಡು ದೇಶ ದುದ್ದಗಲಕ್ಕೂ ಮತ ಯಾಚಿಸುತ್ತೀರಿ. ಆದರೆ, ಅದೇ ಕಾಶ್ಮೀರದ ನೆಲದಲ್ಲಿ ಯಾಕಾಗಿ ಚುನಾವಣೆಗೆ ಸ್ಪರ್ಧಿಸುತ್ತಿಲ್ಲ' ಎಂದು ವಿರೋಧ ಪಕ್ಷಗಳು ಬಿಜೆಪಿಯನ್ನು ಪ್ರಶ್ನಿಸುತ್ತಲೇ ಬಂದಿವೆ. ಹಿಂದೂ ಧರ್ಮೀಯರೇ ಹೆಚ್ಚಿರುವ ಜಮ್ಮು ಪ್ರದೇಶದ ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಮಾತ್ರವೇ ಬಿಜೆಪಿ ಸ್ಪರ್ಧಿಸುತ್ತಿದೆ.

'ಚುನಾವಣೆಗೆ ಸ್ಪರ್ಧಿಸುವುದು ನಮ್ಮ ಆದ್ಯತೆ ಅಲ್ಲ. ನಮ್ಮ ಮುಖ್ಯ ಉದ್ದೇಶವು ಜನರ ಹೃದಯ ಗೆಲ್ಲುವುದು. ದೇಶದ ಇತರೆ ಭಾಗಗಳೊಂದಿಗೆ ಕಾಶ್ಮೀರವನ್ನು ವಿಲೀನಗೊಳಿಸಲು 75 ವರ್ಷ ಬೇಕಾಯಿತು. ಚುನಾವಣೆಯಲ್ಲಿ ಗೆಲುವು ಸಾಧಿಸಬೇಕು ಎಂಬುದಕ್ಕಾಗಿ ನಾವು ಇಂಥ ಐತಿಹಾಸಿಕ ಸಾಧನೆ ಮಾಡಿದ್ದೇವೆ ಎನ್ನುವ ಭಾವನೆಯನ್ನು ಜನರಲ್ಲಿ ಮೂಡಿಸುವುದು ನಮಗೆ ಇಷ್ಟವಿಲ್ಲ' ಎನ್ನುತ್ತಾರೆ ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ಮುಖ್ಯಸ್ಥ ಸುನಿಲ್ ಸೇತ್.

'ವಿಶೇಷ ಸ್ಥಾನಮಾನ ರದ್ದು ಮಾಡಿರುವುದಕ್ಕೆ ಜನರು ಸಂತೋಷಗೊಂಡಿದ್ದಾರೆ ಎಂದಾದರೆ, ಬಿಜೆಪಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಯಾಕೆ ಹಿಂಜರಿಯಬೇಕು' ಎಂದು ಪ್ರಶ್ನಿಸುವ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಸಿ) ಒಮರ್ ಅಬ್ದುಲ್ಲಾ ಅವರೇ ಉತ್ತರವನ್ನೂ ನೀಡುತ್ತಾರೆ. 'ಕಾಶ್ಮೀರದಲ್ಲಿನ ಸೋಲು ಬಿಜೆಪಿಗೆ ದೊಡ್ಡ ಮುಖಭಂಗವಾಗಲಿದೆ. ತಮ್ಮ ಮುಖವನ್ನು ಉಳಿಸಿಕೊಳ್ಳುವ ಉದ್ದೇಶದಿಂದಲೇ ಅವರು ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ' ಎನ್ನುತ್ತಾರೆ ಅವರು.

ತಮ್ಮ ನೆಲದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ್ದಕ್ಕಾಗಿ ಕಾಶ್ಮೀರದ ಜನರು ಏನೆನ್ನುತ್ತಾರೆ ಎನ್ನುವ ಕುರಿತು ದೇಶಕ್ಕೆ ತಿಳಿದಿಲ್ಲ. ಆದರೆ, ಮೂರನೇ ಹಂತದಲ್ಲಿ ನಡೆದ ಮತದಾನದಲ್ಲಿ ಕಾಶ್ಮೀರದ ಶ್ರೀನಗರದಲ್ಲಿ ಕಳೆದ ಮೂರು ದಶಕಗಳ ಹೋಲಿಕೆಯಲ್ಲಿ ದಾಖಲೆಯ (ಸುಮಾರು ಶೇ 35 +) ಮತದಾನವಾಗಿದೆ. 'ಈ ದಾಖಲೆಯ ಮತದಾನವು ಕೇಂದ್ರ ಸರ್ಕಾರದ ವಿರುದ್ಧ ಜನರಿಗಿರುವ ಸಿಟ್ಟನ್ನು ತೋರ್ಪಡಿಸುತ್ತದೆ' ಎಂದು ವಿಶ್ಲೇಷಿಸುತ್ತಿವೆ ವಿರೋಧ ಪಕ್ಷಗಳು. 'ಸರ್ಕಾರವನ್ನು ಬದಲು ಮಾಡಬೇಕು ಎಂದೇ ನಾವು ಮತ ನೀಡುತ್ತಿದ್ದೇವೆ. ನಮ್ಮ ಮಕ್ಕಳಿಗೆ ಉದ್ಯೋಗವಿಲ್ಲ. ಬಡತನ ಹೆಚ್ಚಾಗಿದೆ. ಈಗಿರುವ ಸ್ಥಿತಿಯಿಂದ ಹೊರಬರಲೇಬೇಕು ಎನ್ನುವ ಕಾರಣಕ್ಕಾಗಿ ಮತ ನೀಡುತ್ತಿದ್ದೇವೆ' ಎನ್ನುತ್ತಾರೆ ಶ್ರೀನಗರದ ಜನರು.



ಬಿಜೆಪಿಯ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್ ಅವರು ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಮತಯಾಚಿಸಿದರು –ಪಿಟಿಐ ಚಿತ್ರ

ನಿರುದ್ಯೋಗವೇ ಮುಖ್ಯ ಸಮಸ್ಯೆ

ಜಮ್ಮು ಮತ್ತು ಕಾಶ್ಮೀರ ಒಂದೇ ಅಲ್ಲದೇ ನಿರುದ್ಯೋಗ ಸಮಸ್ಯೆಯು ದೇಶದಾದ್ಯಂತ ಬಹುದೊಡ್ಡ ಚುನಾವಣಾ ವಿಚಾರವಾಗಿದೆ. 'ಜಮ್ಮು ಮತ್ತು ಕಾಶ್ಮೀರದಲ್ಲಿ 15-29 ವಯಸ್ಸಿನ ಯುವಕರಲ್ಲಿ ನಿರುದ್ಯೋಗ ದರವು ಶೇ 18.3 ರಷ್ಟಿದೆ. 'ನಿರುದ್ಯೋಗ ದರದ ರಾಷ್ಟ್ರೀಯ ಸರಾಸರಿಯು ಶೇ 8ರಷ್ಟಿದೆ' ಎಂದು ಕೇಂದ್ರ ಗೃಹ ಸಚಿವಾಲಯವು 2023ರ ಜುಲೈನಲ್ಲಿ ರಾಜ್ಯಸಭೆಗೆ ತಿಳಿಸಿತ್ತು. ಇಲ್ಲಿನ ನಿರುದ್ಯೋಗ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ 10 ಶೇಕಡಾವಾರು ಅಂಶಗಳಷ್ಟು ಹೆಚ್ಚು. ಅಂದರೆ, ರಾಷ್ಟ್ರೀಯ ಸರಾಸರಿಗಿಂತ ಒಂದು ಪಟ್ಟು ಹೆಚ್ಚು ನಿರುದ್ಯೋಗವು ಜಮ್ಮು ಮತ್ತು ಕಾಶ್ಮೀರದಲ್ಲಿದೆ.

'ಉದ್ಯೋಗ ಸಿಗದೆ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವಿಶೇಷ ಸ್ಥಾನಮಾನ ರದ್ದು ಮಾಡಿದ್ದಕ್ಕಾಗಿ ಕಾಶ್ಮೀರವು ಅಭಿವೃದ್ಧಿ ಹೊಂದುತ್ತಿದೆ ಎನ್ನುತ್ತೀರಿ. ಆದರೆ, ದೇಶದ ಇತರೆ ಪ್ರದೇಶಗಳಿಗಿಂತ ಜಮ್ಮು ಮತ್ತು ಕಾಶ್ಮೀರದಲ್ಲಿಯೇ ನಿರುದ್ಯೋಗ ಸಮಸ್ಯೆ ಹೆಚ್ಚು ಇದೆ' ಎಂದು ಬಿಜೆಪಿಯನ್ನು ವಿರೋಧ ಪಕ್ಷಗಳು ತರಾಟೆಗೆ ತೆಗೆದುಕೊಳ್ಳುತ್ತಿವೆ.

ಲಡಾಖ್‌ನಲ್ಲಿ ಈಗ ತ್ರಿಕೋನ ಸ್ಪರ್ಧೆ

ಲಡಾಖ್ ಕೇಂದ್ರಾಡಳಿತ ಪ್ರದೇಶವು ಈ ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭಾಗವಾಗಿತ್ತು. 2019ರಲ್ಲಿ ಜಮ್ಮು-ಕಾಶ್ಮೀರದ ರಾಜ್ಯದ ಸ್ಥಾನ ರದ್ದಾದ ನಂತರ, ಲಡಾಖ್‌ಗೆ ಕೇಂದ್ರಾಡಳಿತ ಪ್ರದೇಶದ ಸ್ಥಾನ ದೊರೆತಿದೆ. ತಾಂತ್ರಿಕವಾಗಿ ಜಮ್ಮು-ಕಾಶ್ಮೀರದ ಭಾಗವಾಗಿದ್ದರೂ ಭೌಗೋಳಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಲಡಾಖ್ ಸಂಪೂರ್ಣ ಭಿನ್ನವಾದ ಪ್ರದೇಶ. ಹೀಗಾಗಿಯೇ ಕೇಂದ್ರಾಡಳಿತ ಪ್ರದೇಶದ ಸ್ಥಾನ ದೊರೆತಾಗ ಅಲ್ಲಿನ ಜನರು ಸಂಭ್ರಮಿಸಿದ್ದರು. ಆಗ ಸ್ವಾಯತ್ತ ಆಡಳಿತ ವ್ಯವಸ್ಥೆಯನ್ನು ರೂಪಿಸುವುದಾಗಿ ಕೇಂದ್ರ ಸರ್ಕಾರವು ಲಡಾಖಿ ಜನರಿಗೆ ಮಾತು ನೀಡಿತ್ತು. ಅದಿನ್ನೂ ನೆರವೇರಿಲ್ಲ. ಈ ಬಾರಿಯ ಚುನಾವಣೆಯ ವಿಷಯಗಳಲ್ಲಿ ಇದೂ ಒಂದು ಪ್ರಮುಖ ಅಂಶ.

ಲಡಾಖ್‌ನೊಳಗೂ ಭೌಗೋಳಿಕ ಮತ್ತು ಸಾಂಸ್ಕೃತಿಕ ಭಿನ್ನತೆ ಇದೆ. ಪೂರ್ವದ ಲೇಹ್‌ನಲ್ಲಿ ಬೌದ್ಧ ಧರ್ಮೀಯರದ್ದೇ ಬಹುಸಂಖ್ಯೆ. ಪಶ್ಚಿಮದ ಕಾರ್ಗಿಲ್‌ನಲ್ಲಿ ಮುಸ್ಲಿಮರ ಪ್ರಾಬಲ್ಯ. ಈ ಅಂತರ ಈಗ ಚುನಾವಣೆಯಲ್ಲೂ ಕಾಣುತ್ತಿದೆ. ಲಡಾಖ್‌ನಲ್ಲಿ ಇರುವುದು ಒಂದು ಲೋಕಸಭಾ ಕ್ಷೇತ್ರ. 2014 ಮತ್ತು 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಈ ಕ್ಷೇತ್ರದಿಂದ ಆರಿಸಿ ಬಂದಿದ್ದರು. 2024ರಲ್ಲಿ ಬಿಜೆಪಿ ಇಲ್ಲಿ ಸತತ ಮೂರನೇ ಬಾರಿಗೆ ಆರಿಸಿ ಬರುವ ಗುರಿ ಹಾಕಿಕೊಂಡಿತ್ತು. ಆದರೆ ಈಗ ಅದು ಅಷ್ಟು ಸುಲಭದ ಹಾದಿಯಾಗಿ ಉಳಿದಿಲ್ಲ.

ಲಡಾಖ್‌ಗೆ ಸಂಪೂರ್ಣ ಸ್ವಾಯತ್ತ ಆಡಳಿತ ವ್ಯವಸ್ಥೆ ನೀಡದೇ ಇರುವುದು, ಸಂವಿಧಾನದ 6ನೇ ಪರಿಚ್ಛೇದಕ್ಕೆ ಲಡಾಖ್ ಅನ್ನು ಸೇರಿಸುವ ಮೂಲಕ ಅಲ್ಲಿನ ಜನರ ಹಕ್ಕುಗಳಿಗೆ ವಿಶೇಷ ರಕ್ಷಣೆ ನೀಡದೇ ಇರುವುದು ಚುನಾವಣೆಯಲ್ಲಿ ಬಹುದೊಡ್ಡ ವಿಷಯವಾಗಿದೆ. ಈ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜನರು ವಾರಗಟ್ಟಲೆ ಪ್ರತಿಭಟನೆ ನಡೆಸಿದ್ದಾರೆ. 2014ರಲ್ಲಿ ಬಿಜೆಪಿ ಮೂಲಕ ಸಂಸದರಾಗಿ ಆರಿಸಿ ಬಂದಿದ್ದ ತುಪ್‌ಸ್ತಾನ್ ಚವಾಂಗ್ ಅವರು ಕೇಂದ್ರ ಸರ್ಕಾರದೊಂದಿಗಿನ ಭಿನ್ನಾಭಿಪ್ರಾಯದಿಂದ 2018ರಲ್ಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಿಜೆಪಿಯನ್ನೂ ತೊರೆದಿದ್ದರು. 2019ರಲ್ಲಿ ಬಿಜೆಪಿಯಿಂದ ಜೆ.ಟಿ.ನಂಗ್ಯಾಲ್ ಅವರು ಆರಿಸಿ ಬಂದಿದ್ದರು. ಚೀನಾ ಸೈನಿಕರು ಭಾರತದ ಗಡಿದಾಟಿ ಒಳಬಂದಿದ್ದಾರೆ. ನಮ್ಮ ನೆಲವನ್ನು ಅತಿಕ್ರಮಿಸಿದ್ದಾರೆ ಎಂದು ಜೆ.ಟಿ.ನಂಗ್ಯಾಲ್ ಅವರು ಸಾರ್ವಜನಿಕ ವಾಗಿಯೇ ಹೇಳಿದ್ದರು. ಅವರಿಗೆ ಬಿಜೆಪಿ ಈಗ ಟಿಕೆಟ್ ನಿರಾಕರಿಸಿದೆ. ಈ ಬಾರಿ ಬಿಜೆಪಿ ತಾಶಿ ಗ್ಯಾಲ್ಸನ್ ಅವರನ್ನು ಕಣಕ್ಕೆ ಇಳಿಸಿದೆ. ಕಾಂಗ್ರೆಸ್‌ನಿಂದ ತ್ಸೆರಿಂಗ್ ನಂಗ್ಯಾಲ್ ಅವರು ಕಣಕ್ಕೆ ಇಳಿದಿದ್ದಾರೆ. ಈ ಇಬ್ಬರೂ ಬೌದ್ಧ ಧರ್ಮೀಯರು. ಲಡಾಖ್‌ನ ಲೇಹ್ ಪ್ರಾಂತ್ಯದಲ್ಲಿ ಇವರಿಬ್ಬರ ಪ್ರಭಾವವಿದೆ. ಈ ಇಬ್ಬರ ಮಧ್ಯೆಯೇ ಪ್ರಬಲ ಪೈಪೋಟಿ ಇರಲಿದೆ ಎಂಬಂತಹ ಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಂದರ್ಭದಲ್ಲಿ ಎನ್‌ಸಿ ಬೆಂಬಲಿತ ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ ತನ್ನ ಅಭ್ಯರ್ಥಿಯನ್ನಾಗಿ ಹಾಜಿ ಹನೀಫಾ ಜಾನ್ ಅವರನ್ನು ಕಣಕ್ಕೆ ಇಳಿಸಿದೆ. ಈ ಮೂಲಕ ಲಡಾಖ್‌ನದ್ದು ತ್ರಿಕೋನ ಸ್ಪರ್ಧೆಗೆ ತಿರುಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಗಳಷ್ಟೇ ಕಣದಲ್ಲಿ ಇದ್ದಾಗ, ಕಾಂಗ್ರೆಸ್ ಅಭ್ಯರ್ಥಿಗೇ ಗೆಲ್ಲುವ ಹೆಚ್ಚಿನ ಅವಕಾಶಗಳು ಇದ್ದವು. ಈಗ ಎನ್‌ಸಿ ಬೆಂಬಲಿತ ಅಭ್ಯರ್ಥಿ ಕಣಕ್ಕೆ ಇಳಿದಿರುವ ಕಾರಣ ಕಾಂಗ್ರೆಸ್‌ನ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ. ಹೀಗಾಗಿ ಬಿಜೆಪಿ ಅಭ್ಯರ್ಥಿಗೇ ಗೆಲುವಿನ ಸಾಧ್ಯತೆ ಹೆಚ್ಚು ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರತಿಭಟನೆಯ ಕಾವು?

ಲಡಾಖ್‌ನಲ್ಲಿ ಗಣಿಗಾರಿಕೆ, ಬೃಹತ್ ಸೌರವಿದ್ಯುತ್ ಘಟಕ ಕಾರ್ಯಾಚರಣೆಗಳಿಂದ ಪರಿಸರಕ್ಕೆ ತೀವ್ರ ಹಾನಿಯಾಗುತ್ತಿದೆ ಎಂದು ಪರಿಸರವಾದಿ ಮತ್ತು ಶಿಕ್ಷಣ ತಜ್ಞ ಸೋನಮ್ ವಾಂಗ್ಚುಕ್ ನೇತೃತ್ವದಲ್ಲಿ ಲಡಾಖಿ ಜನರು ಉಪವಾಸ ಸತ್ಯಾಗ್ರಹ ನಡೆಸಿದ್ದರು. ಚೀನಾದ ಸೈನಿಕರು ಲಡಾಖ್‌ನ ನೆಲವನ್ನು ಅತಿಕ್ರಮಿಸಿರುವುದನ್ನು ತೋರಿಸುವ ಉದ್ದೇಶದಿಂದ ಗಡಿ ಮೆರವಣಿಗೆಯನ್ನೂ ಆಯೋಜಿಸಿದ್ದರು. ಆದರೆ ಮೆರವಣಿಗೆಯ ದಿನ ಪೊಲೀಸರು ನಿಷೇಧಾಜ್ಞೆ ಜಾರಿ ಮಾಡಿ, ಮೆರವಣಿಗೆಯನ್ನು ತಡೆದರು. ಇದು ರಾಜಕೀಯವಾಗಿ ಬಿಜೆಪಿಗೆ ಮುಳುವಾಗಲಿದೆ ಎಂದು ಹೇಳಲಾಗುತ್ತಿತ್ತು. ಆದರೆ ಈಗ ತ್ರಿಕೋನ ಸ್ಪರ್ಧೆಯ ಸ್ಥಿತಿ ನಿರ್ಮಾಣವಾಗಿರುವುದರಿಂದ ಬಿಜೆಪಿಗೆ ಲಾಭವೇ ಆಗಬಹುದು ಎಂದು ಹೇಳಲಾಗುತ್ತಿದೆ.

ಆಧಾರ: ಬಿಬಿಸಿ, ಪಿಟಿಐ, ರಾಯಿಟರ್ಸ್, ಚುನಾವಣಾ ಆಯೋಗ

ಜಮ್ಮು-ಬಿಜೆಪಿ-ಹಿಂದುತ್ವ

ಜಮ್ಮು ಪ್ರದೇಶವು 'ದೇವಾಲಯಗಳ ನಗರ' ಎಂದೇ ಪ್ರಸಿದ್ಧವಾಗಿದೆ. ಅಯೋಧ್ಯೆಯಲ್ಲಿನ ರಾಮ ಮಂದಿರ ನಿರ್ಮಾಣವೇ ಜಮ್ಮು ಪ್ರದೇಶದ ಲೋಕಸಭಾ ಕ್ಷೇತ್ರಗಳ ಮುಖ್ಯ ಚುನಾವಣಾ ವಿಷಯವಾಗಿತ್ತು. ಜಮ್ಮುವಿನ ಎರಡು ಕ್ಷೇತ್ರಗಳಿಗೆ ಈಗಾಗಲೇ ಮತದಾನ ಮುಗಿದಿದೆ. ಬೀದಿ ಬೀದಿಗಳಲ್ಲಿ ರಾಮ ಮಂದಿರದ ವಿಚಾರಗಳನ್ನೇ ಇಟ್ಟುಕೊಂಡು ಬಿಜೆಪಿಯು ಮತಯಾಚನೆ ಮಾಡಿತ್ತು. ಆದರೆ, ಈ ಬಾರಿ ಹಿಂದುತ್ವವು ಈ ಪ್ರದೇಶದಲ್ಲಿ ಅಷ್ಟೊಂದು ಪ್ರಾಮುಖ್ಯ ಪಡೆದುಕೊಳ್ಳಲಿಲ್ಲ ಎನ್ನುತ್ತಾರೆ ವಿಶ್ಲೇಷಕರು. ಅದಕ್ಕೆ ಕಾರಣಗಳೂ ಇವೆ.

ಮನೆಗಳಿಗೆ ಅಳವಡಿಸಲಾದ ಸ್ಮಾರ್ಟ್ ವಿದ್ಯುತ್ ಮೀಟರ್‌ನಲ್ಲಿನ ತಾಂತ್ರಿಕ ಸಮಸ್ಯೆಯು ಜನರನ್ನು ಹೈರಾಣು ಮಾಡಿತ್ತು. ದೊಡ್ಡ ಮೊತ್ತದ ಬಿಲ್‌ಗಳು ಜನರನ್ನು ಕಾಡಿದವು. ಇದಕ್ಕಾಗಿ ಜನರು ಬೀದಿಗಿಳಿದು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದ್ದರು. ಇದು ಚುನಾವಣೆಯ ಪ್ರಮುಖ ವಿಚಾರವಾಯಿತು. ಇದರ ಜೊತೆಯಲ್ಲಿಯೇ ನಿರುದ್ಯೋಗ ಸಮಸ್ಯೆಯು ತಾರಕಕ್ಕೇರಿತ್ತು. ಇದು ಕೂಡ ಪ್ರಮುಖ ವಿಷಯವಾಯಿತು. ಈ ವಿಚಾರಗಳನ್ನು ಮರೆಸಲು, ಬಿಜೆಪಿಯು ಹಿಂದುತ್ವದ ಮೊರೆ ಹೋಯಿತು.

ಇಲ್ಲಿನ ಶಿವಾಲಿಕ್ ಕಾಡುಗಳ ಮಧ್ಯೆ ತಿರುಪತಿ ಬಾಲಾಜಿಯ ಮಂದಿರವನ್ನು ಸ್ಥಾಪಿಸಲಾಯಿತು. ವೈಷ್ಣೋದೇವಿ ದೇವಸ್ಥಾನವಿರುವ ಕತರಾಕ್ಕೆ ವೇಗದ ರೈಲುಗಳ ಸಂಪರ್ಕವನ್ನು ಕಲ್ಪಿಸಲಾಯಿತು. ಇವು ಬಿಜೆಪಿಯು ಜನರ ಆಕ್ರೋಶವನ್ನು ತಣಿಸಲು ಮಾಡಿದ ಪ್ರಯತ್ನಗಳು. ಇತರೆ ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ, ವಾಲ್ಮೀಕಿ ಸಮುದಾಯದವರಿಗೆ ಹಾಗೂ ಅಲೆಮಾರಿ ಜನಾಂಗಗಳಿಗೆ ಮೀಸಲಾತಿ ನೀಡುವ ಕುರಿತ ಭರವಸೆಯನ್ನೂ ನೀಡಿತು.

ನಿರುದ್ಯೋಗ ಸಮಸ್ಯೆ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರದ '10 ವರ್ಷಗಳ ವೈಫಲ್ಯ'ಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಮತಯಾಚನೆ ಮಾಡಿದೆ. 2023ರ ಜನವರಿಯಲ್ಲಿ ಕೊನೆಗೊಂಡ ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆಯನ್ನೂ ಕಾಂಗ್ರೆಸ್ ಬಳಸಿಕೊಂಡಿದೆ. ಬಿಜೆಪಿಯ ಭದ್ರಕೋಟೆಯಾಗಿರುವ, ಹಿಂದೂ ಮತಗಳು ಹೆಚ್ಚಿರುವ ಜಮ್ಮು ಪ್ರದೇಶಗಳಲ್ಲೂ ಭಾರತ್ ಜೋಡೊ ಯಾತ್ರೆಗೆ ಜನರಿಂದ ದೊಡ್ಡ ಮಟ್ಟದ ಬೆಂಬಲ ವ್ಯಕ್ತವಾಗಿತ್ತು. ಇದನ್ನೂ ಕಾಂಗ್ರೆಸ್ ಪಕ್ಷವು ನೆಚ್ಚಿಕೊಂಡಿದೆ.

ಸಿನಿ ಬಿಟ್ಸ್

'ಮ್ಯಾಕ್ಸ್' ಚಿತ್ರೀಕರಣ ಮುಕ್ತಾಯ



ಕಿಚ್ಚ ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಸ್ವತಃ ಕಿಚ್ಚ ಸುದೀಪ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಈ ಮಾಹಿತಿ ಹಂಚಿಕೊಂಡಿದ್ದಾರೆ.

'ವಿಕ್ರಾಂತ್ ರೋಣ' ಸಿನಿಮಾದ ಬಳಿಕ ಸುದೀಪ್ ಅವರ ಬೇರೆ ಸಿನಿಮಾ ಬಿಡುಗಡೆಗೊಂಡಿಲ್ಲ. 'ಮ್ಯಾಕ್ಸ್' ಚಿತ್ರಕ್ಕಾಗಿ ಸಮಯ ಮೀಸಲಿಟ್ಟಿದ್ದ ಅವರು ಕಿರುತೆರೆಯ ರಿಯಾಲಿಟಿ ಶೋನಲ್ಲಿ ಮಾತ್ರ ಕಾಣಿಸಿಕೊಂಡಿದ್ದರು.

'ಮಹಾಬಲಿಪುರಂನಲ್ಲಿ 'ಮ್ಯಾಕ್ಸ್' ಚಿತ್ರೀಕರಣ ಪೂರ್ಣಗೊಂಡಿದೆ. 10 ತಿಂಗಳ ದೀರ್ಘವಾದ ಪಯಣ. ನಾನು ಇಲ್ಲಿನ ಪ್ರತಿ ಕ್ಷಣವನ್ನು ಆನಂದಿಸಿದ್ದೇನೆ. ಅತ್ಯುತ್ತಮ ತಂಡ ಮತ್ತು ಕಲಾವಿದರ ಜೊತೆ ಕೆಲಸ ಮಾಡಿದ ತೃಪ್ತಿಯಿದೆ. ಚಿತ್ರೀಕರಣ ಸುಗಮವಾಗಿ ಸಾಗಲು ನೆರವಾದ ನಿರ್ಮಾಪಕರಿಗೆ, ನಿರ್ದೇಶಕ ವಿಜಯ್ ಹಾಗೂ ಅವರ ತಂಡಕ್ಕೆ ವಿಶೇಷ ಧನ್ಯವಾದಗಳು' ಎಂದು ಸುದೀಪ್ ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದು, ಚಿತ್ರೀಕರಣ ಸ್ಥಳದ ವಿಡಿಯೋವನ್ನು ಹಂಚಿಕೊಂಡಿದ್ದಾರೆ.

ಆ್ಯಕ್ಷನ್ ಥ್ರಿಲ್ಲರ್ ಕಥೆ ಹೊಂದಿರುವ ಈ ಚಿತ್ರವನ್ನು ವಿಜಯ್ ಕಾರ್ತಿಕೇಯನ್ ನಿರ್ದೇಶನ ಮಾಡುತ್ತಿದ್ದಾರೆ. ಸಿನಿಮಾಕ್ಕೆ ಕಲೈಪುಲಿ ಥಾನು ಬಂಡವಾಳ ಹೂಡಿದ್ದು, ಮಹಾಬಲಿಪುರಂನಲ್ಲಿ ದೊಡ್ಡ ಸೆಟ್ ನಿರ್ಮಾಣ ಮಾಡಲಾಗಿತ್ತು. ಈ ವರ್ಷವೇ ಚಿತ್ರ ತೆರೆಗೆ ಬರಲಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ | 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

'45' ಚಿತ್ರದಲ್ಲಿ ಭರ್ಜರಿ ಗ್ರಾಫಿಕ್ಸ್

ಶಿವರಾಜ್‌ಕುಮಾರ್, ಉಪೇಂದ್ರ, ರಾಜ್ ಬಿ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ '45' ಚಿತ್ರ ಸೆಟ್ಟೇರಿ ವರ್ಷ ಕಳೆದಿದೆ. ಈ ವರ್ಷ ಚಿತ್ರ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಈ ಹಿಂದೆ ಘೋಷಿಸಿತ್ತು. ಆದರೆ ಚಿತ್ರದಲ್ಲಿ ಗ್ರಾಫಿಕ್ಸ್‌ನ ಭಾಗ ಹೆಚ್ಚಿರುವುದರಿಂದ ಈ ವರ್ಷ ಚಿತ್ರ ತೆರೆಗೆ ಬರುವುದು ಕಷ್ಟ ಎನ್ನುತ್ತಿದೆ ಚಿತ್ರ ತಂಡದ ಮೂಲಗಳು.

ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಎಂ ರಮೇಶ್ ರೆಡ್ಡಿ ಚಿತ್ರವನ್ನು ನಿರ್ಮಿಸುತ್ತಿದ್ದು, ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶನವಿದೆ. 'ಶಿವರಾಜ್‌ಕುಮಾರ್ ಚುನಾವಣೆ ಪ್ರಚಾರಕ್ಕೆ ತೆರಳಿರುವುದರಿಂದ ಚಿತ್ರೀಕರಣ ನಿಂತಿತ್ತು. ಈಗಾಗಲೇ ನಾಲ್ಕು ಹಂತಗಳ ಚಿತ್ರೀಕರಣ ಪೂರ್ಣಗೊಂಡಿದ್ದು, ಇನ್ನೆರಡು ಹಂತದ ಚಿತ್ರೀಕರಣ ಬಾಕಿಯಿದೆ. ಎಲ್ಲ ನಟರ ಡೇಟ್ ಹೊಂದಾಣಿಕೆ ಸಮಸ್ಯೆಯಿಂದ ಚಿತ್ರೀಕರಣ ಅಂದುಕೊಂಡಷ್ಟು ವೇಗವಾಗಿ ನಡೆದಿಲ್ಲ. ಚಿತ್ರದಲ್ಲಿ ಸಾಕಷ್ಟು ಗ್ರಾಫಿಕ್ಸ್ ಇದ್ದು, ಬೆಂಗಳೂರು, ಹೈದ್ರಾಬಾದ್, ಲಂಡನ್‌ಗಳಲ್ಲಿ ಇದರ ಕೆಲಸ ನಡೆಯುತ್ತಿದೆ' ಎನ್ನುತ್ತಾರೆ ನಿರ್ಮಾಪಕ ರಮೇಶ್ ರೆಡ್ಡಿ.

'ಮನುಷ್ಯನ ಸಾವಿನ ನಂತರದ ಹಾಸ್ಯಮಯ ಕಥಾ ಹಂದರವನ್ನು ಈ ಚಿತ್ರ ಹೊಂದಿದ್ದು, ಸ್ವರ್ಗ, ನರಕಗಳ ಗ್ರಾಫಿಕ್ಸ್ ಲೋಕವೇ ಚಿತ್ರದಲ್ಲಿದೆ' ಎನ್ನುತ್ತಿದೆ ಚಿತ್ರತಂಡ. ಈ ಚಿತ್ರಕ್ಕೆ ಅರ್ಜುನ್ ಜನ್ಯ ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದು, ಸತ್ಯ ಹೆಗಡೆ ಛಾಯಾಚಿತ್ರಗ್ರಹಣವಿದೆ.

ಬೆಂಗಳೂರು, ಮೈಸೂರು ಮುಂತಾದ ಕಡೆ ಚಿತ್ರೀಕರಣ ನಡೆದಿದ್ದು, ಕನ್ನಡವಲ್ಲದೆ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲೂ ಮೂಡಿಬರುತ್ತಿದೆ.

ಗುಂಡಣ್ಣ

ನುಡಿ ಬೆಳಗು

ನೀನು ಅನಿವಾರ್ಯವಲ್ಲ



ಪ್ರೊ.ಎಂ.ಕೃಷ್ಣೇಗೌಡ

ಆಕೆ ಒಂದು ದೊಡ್ಡ ಕಂಪೆನಿಯಲ್ಲಿ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿದ್ದಳು. ಭಾರಿ ಸಂಬಳ. ವರ್ಷದ ಸಂಬಳ ಕೋಟಿಗಳಲ್ಲಿತ್ತು. ಅವಳ ಸಾಮರ್ಥ್ಯ ಕೂಡ ಹಾಗೇ ಇತ್ತು ಅನ್ನಿ. ಅಷ್ಟಲ್ಲದೆ ಅಷ್ಟೊಂದು ಸಂಬಳ ಯಾರು ಕೊಡುತ್ತಾರೆ? ಇರಲಿ. ಕತೆ ಕೇಳಿ.

ಅದೊಂದು ದಿನ ಆಕೆ ಆ ಕಂಪೆನಿಯ ಸಿ.ಇ.ಒ ಅನ್ನು ಭೇಟಿಯಾಗಿ ತಾನು ಕಂಪೆನಿಯ ಹುದ್ದೆಗೆ ರಾಜೀನಾಮೆ ಕೊಡಲು ಇಚ್ಛಿಸುತ್ತೇನೆ ಎಂದು ಹೇಳಿ ರಾಜೀನಾಮೆ ಪತ್ರವನ್ನು ಸಿ.ಇ.ಒ ಮೇಜಿನ ಮೇಲಿಟ್ಟಳು.

ಸಿ.ಇ.ಒ ಕೇಳಿದ: 'ನೀನು ಇಷ್ಟು ಒಳ್ಳೆಯ ಹುದ್ದೆ, ಸಂಬಳ ಇರುವ ಕೆಲಸಕ್ಕೆ ರಾಜೀನಾಮೆ ಕೊಡುತ್ತಿರುವುದೇಕೆ?'

ಆಕೆ: 'ಸಾರಿ, ಅದನ್ನು ನಾನು ನಿಮಗೆ ಹೇಳಬೇಕಾಗಿಲ್ಲ. ನನ್ನ ರಾಜೀನಾಮೆ ಸ್ವೀಕರಿಸಿ'.

ಸಿ.ಇ.ಒ: 'ಆಗಲಿ. ನಿನಗೆ ನಾನು ಒಂದು ಸೌಜನ್ಯದ ಆಫರ್ ಕೊಡುತ್ತೇನೆ. ಅದೇನೆಂದರೆ, ಇನ್ನೊಂದು ತಿಂಗಳು ನಮ್ಮ ಕಂಪನಿಯ ಖರ್ಚಿನಲ್ಲಿ ನೀನು ಒಂದು ವರ್ಲ್ಡ್ ಟೂರ್ ಮಾಡಿಕೊಂಡು ಬಾ. ನಿನಗೆ ತೃಪ್ತಿಯಾಗುವಷ್ಟು ಹಣ ಖರ್ಚು ಮಾಡು. ಅದೆಲ್ಲವನ್ನೂ ಕಂಪೆನಿಯೇ ನೋಡಿಕೊಳ್ಳುತ್ತದೆ. ನೀನು ಬಂದ ಮೇಲೆಯೂ ನಿನಗೆ ರಾಜೀನಾಮೆ ಕೊಡಬೇಕು ಅನ್ನಿಸಿದರೆ ಕೊಡು. ನಾನು ಸ್ವೀಕರಿಸುತ್ತೇನೆ'.

ಇದು ವಿಚಿತ್ರ ಅನ್ನಿಸಿತು ಆಕೆಗೆ. ಆಗಲಿ, ಏಕೆ ಬೇಡ, ಎಂದು ಒಪ್ಪಿಕೊಂಡಳು.

ತಿಂಗಳು ಕಳೆದ ಮೇಲೆ ಆಕೆ ವರ್ಲ್ಡ್ ಟೂರ್ ಮುಗಿಸಿ ವಾಪಸಾದಳು. ಬಂದವಳೇ ಮತ್ತೆ ಸಿ.ಇ.ಒ ಅನ್ನು ಭೇಟಿಯಾದಳು.

ಸಿ.ಇ.ಒ ಕೇಳಿದ: 'ಈಗಲೂ ನಿನಗೆ ರಾಜೀನಾಮೆ ಕೊಡಬೇಕು ಅನ್ನಿಸುತ್ತಿದೆಯಾ?'

ಆಕೆ: 'ಶೂರ್, ನನ್ನ ನಿರ್ಧಾರದಲ್ಲಿ ಬದಲಾವಣೆಯಿಲ್ಲ. ನನ್ನ ರಾಜೀನಾಮೆಯನ್ನು ಸ್ವೀಕರಿಸಿ.

ಸಿ.ಇ.ಒ: 'ಆಗಲಿ. ನಿನ್ನ ರಾಜೀನಾಮೆಯನ್ನು ಸ್ವೀಕರಿಸಿದ್ದೇನೆ. ನೀನಿನ್ನು ಹೋಗಬಹುದು. ಆಲ್ ದ ಬೆಸ್ಟ್'.

ಆಕೆ ಈಗ ಕೇಳಿದಳು: 'ಅದು ಸರಿ. ಆದರೆ ಈ ಕೆಲಸವನ್ನು ಒಂದು ತಿಂಗಳ ಮೊದಲೇ ಮಾಡಬಹುದಿತ್ತಲ್ಲ? ಅದಕ್ಕೆ ನನಗಾಗಿ ಇಷ್ಟು ಖರ್ಚು ಮಾಡುವುದು ತಪ್ಪುತ್ತಿತ್ತಲ್ಲ?'

ಸಿ.ಇ.ಒ ಹೇಳಿದ: 'ಸಾರಿ, ಅದನ್ನು ನಾನು ನಿನಗೆ ಹೇಳಬೇಕಾಗಿಲ್ಲ. ಆದರೂ ಹೇಳುತ್ತೇನೆ ಕೇಳು. ಈ ಒಂದು ತಿಂಗಳು ನೀನಿಲ್ಲದೆಯೂ ನಮ್ಮ ಕಂಪೆನಿಯ ಕೆಲಸ ಸುಸೂತ್ರವಾಗಿ ನಡೆಯುತ್ತದೆಯೇ ಅಂತ ನೋಡಿದೆ. ನಿನ್ನ ಟೀಮಿನ ಮಂದಿಯನ್ನು ಹುರಿದುಂಬಿಸಿದೆ. ಅವರೆಲ್ಲಾ ಅದ್ಭುತವಾಗಿ ಆ ಕೆಲಸವನ್ನು ನಿಭಾಯಿಸಿದರು. ಹಾಗಾಗಿ ನೀನು ನನ್ನ ಕಂಪೆನಿಗೆ ಅನಿವಾರ್ಯವಲ್ಲ. ನೀನು ಅನಿವಾರ್ಯವಾಗಿದ್ದರೆ ನಿನ್ನ ಸಂಬಳವನ್ನು ಎರಡು ಪಟ್ಟು ಏರಿಸಿ ನಿನ್ನ ಮನವೊಲಿಸುತ್ತಿದ್ದೆ. ಗೊತ್ತಾಯಿತಲ್ಲ, ನೀನು ಅನಿವಾರ್ಯ ಅನ್ನಿಸಿದರೆ ಮಾತ್ರ ನಿನ್ನ ಕಿಮ್ಮತ್ತು. ಇನ್ನು ನೀನು ಹೊರಡಬಹುದು'.

ಸಿ.ಇ.ಒ ಮಾತಿನರ್ಥವನ್ನು ಇನ್ನೂ ಬಿಡಿಸಿ ಹೇಳಬೇಕೆ? ಇನ್ನು ಮುಂದೆ ನಮ್ಮ ಕಂಪೆನಿಗೆ, ಕಚೇರಿಗೆ, ಕಾರ್ಖಾನೆಗೆ, ಇಲಾಖೆಗೆ ನಾವು ಅನಿವಾರ್ಯ ಅನ್ನಿಸುವಂಥ ಪ್ರತಿಭೆ, ಜ್ಞಾನ, ಶ್ರದ್ಧೆ, ಚಾತುರ್ಯ ಬೆಳೆಸಿಕೊಳ್ಳದಿದ್ದರೆ ನಮಗೆ ಉಳಿಗಾಲವಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮೇ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ನವಮಿ ಗಂ. 8-49, ನಕ್ಷತ್ರ: ಪೂರ್ವಾಫಲ್ಗುಣಿ ಗಂ. 21-18, ಯೋಗ: ವ್ಯಾಘಾತ ಗಂ. 09-21, ಕರಣ : ಕೌಲವ ಗಂ. 8-49 ನಂತರ ತೈತಿಲ ಗಂ. 22-06, ವೃಷಭ ಮಾಸದ ನೇ 04 ದಿನ, ಮಳೆನಕ್ಷತ್ರ: ಕೃತ್ತಿಕಾ 2. ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 08 ಜುಲ್ಖಾಯದ್
ಅದೃಷ್ಟ ಸಂಖ್ಯೆ : 7, 1

ಮೇಷ: ಸಜ್ಜನರ ಹಾಗೂ ದುರ್ಜನರ ಸಹವಾಸಗಳಂತೆ ಫಲಗಳನ್ನು ಕೊಡುವುದು ಅನುಭವಕ್ಕೆ ಬರುತ್ತದೆ. ಹೂವು ಹಣ್ಣುಗಳ ಬೆಳೆಗಾರರಿಗೆ ಲಾಭ ನಷ್ಟಗಳೆರೆಡರ ಅನುಭವವೂ ಆಗಬಹುದು.

ವೃಷಭ: ನೋಯಿಸಲೆಂದು ಮಾತನಾಡದಿದ್ದರೂ ಮಾತು ಇತರರ ಬೇಸರಕ್ಕೆ ಕಾರಣವಾಗಬಹುದು. ಮನದ ಆಸೆ ಪೂರೈಸಿಕೊಳ್ಳಲು ಹಣ ಖರ್ಚು ಮಾಡುವಿರಿ. ತಲೆನೋವು ಕಾಣಿಸಿಕೊಳ್ಳಬಹುದು.

ಮಿಥುನ: ಮನೆಯ ಖರ್ಚು ವೆಚ್ಚಗಳ ಮೇಲಿನ ನಿರ್ಲಕ್ಷ್ಯವು ಮುಂದೊಂದು ದಿನದ ಹಣದ ಅಭಾವಕ್ಕೆ ಕಾರಣವಾಗಬಹುದು. ಕುಟುಂಬದ ಸಂಗತಿಗಳನ್ನು ಏನಾದರೂ ಮರೆತೆ ಎಂದು ಜ್ಞಾಪಿಸಿಕೊಳ್ಳಿ.

ಕರ್ಕಾಟಕ: ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗ ಈ ದಿನವಿದೆ. ರಫ್ತು ವ್ಯಾಪಾರ ಮಾಡುವವರಿಗೆ ಸಂಪರ್ಕದಲ್ಲಿ ಅಡೆತಡೆಗಳು ಉಂಟಾಗಲಿದೆ. ಹೊಸ ವಸ್ತ್ರಗಳ ಖರೀದಿ ಮಾಡುವಿರಿ.

ಸಿಂಹ: ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ವಿಶ್ವಾಸ ಹೆಚ್ಚಲಿದೆ. ಸ್ವಭಾವತಃ ಖುಷಿಯಾಗಿ ಇರುವುದನ್ನು ಬಯಸುವ ನೀವು ಪರಜನರ ಮಾತುಗಳಿಗೆ ಕಿವಿಗೊಡಬೇಡಿ.

ಕನ್ಯಾ: ಇತರರ ಬಗ್ಗೆ ಅನುಕಂಪ ತೋರುವ ನೀವು, ನಿಮ್ಮ ಬಗ್ಗೆಯೂ ಗಮನವಿರಿಸಿಕೊಳ್ಳಬೇಕೆಂದು ಮರೆಯದಿರಿ. ಅನುಭವೇ ಇಲ್ಲದೆ ಮಾಡಿದ ಅಡುಗೆಯು ಗುಣಮಟ್ಟದ್ದಾಗುತ್ತದೆ. ಮಕ್ಕಳೊಂದಿಗೆ ಸಮಯ ಕಳೆಯುವಿರಿ.

ತುಲಾ: ರೇಷ್ಮೆ ನೇಕಾರರು ಉತ್ತಮ ಮಟ್ಟದ ನೇಯ್ಗೆಯಿಂದ ಏಳಿಗೆ ಹೊಂದುವ ಸಾಧ್ಯತೆಗಳಿವೆ. ಪ್ರಾಕೃತ ಭಾಷಾತಜ್ಞರಿಗೆ ಬೇಡಿಕೆ ಬರುವಂತಹ ಸಾಧ್ಯತೆಗಳಿವೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ವೃಶ್ಚಿಕ: ಖರ್ಚುವೆಚ್ಚಗಳ ನಿಯಂತ್ರಣಕ್ಕಾಗಿ ಹರಸಾಹಸ ಪಡಬೇಕಾಗುವುದು. ದುಃಖಕರ ವಿಚಾರವನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವುದರಿಂದ ಮನಸ್ಸು ಹಗುರವಾದದಂತೆ ಭಾಸವಾಗುವುದು.

ಧನು: ಇತ್ತೀಚಿನ ದಿನಗಳಲ್ಲಿ ಹೊಸ ಪರಿಚಯವು ಯಾವುದೋ ಒಂದು ತರಹದಿಂದ ಪ್ರಯೋಜನಕ್ಕೆ ಬರಲಿದೆ. ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಮಕರ: ನಿರಂತರ ಸೇವೆಗಾಗಿ ಮಕ್ಕಳ ಪ್ರತಿಜ್ಞೆಗಳು ಬಹಳ ಹೆಮ್ಮೆಪಡುವಂತೆ ಮಾಡುತ್ತವೆ. ಕಂಪನಿಯ ಹೊಸ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಹೆಗ್ಗಳಿಕೆ ನಿಮ್ಮದಾಗಲಿದೆ

ಕುಂಭ: ಹೊಸ ಕ್ಲಿನಿಕ್ ಆರಂಭದ ಶುಭ ಕಾರ್ಯಗಳ ಬಗ್ಗೆ ಹಿರಿಯರೊಡನೆ ಸಮಾಲೋಚನೆ ನಡೆದು ತೀರ್ಮಾನ ಸಿಗಲಿದೆ. ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಆಸಕ್ತಿ ಹೆಚ್ಚುವುದು, ಜೊತೆಗೆ ಲಾಭವೂ ಇದೆ.

ಮೀನ: ಅಂಗಾಂಗ ಕೃಷಿಯ ಸಂಶೋಧನೆಯಲ್ಲಿ ತೊಡಗಿರುವವರಿಗೆ ಹೊಸ ಸವಾಲುಗಳು ಎದುರಾಗುತ್ತವೆ. ಒಪ್ಪತ್ತಿನ ಊಟವನ್ನು ಮಾಡುವುದರಿಂದಾಗಿ ಅಜೀರ್ಣ, ಇನ್ನಿತರ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು.

ಪದಬಂಧ 5683

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಗಣಿತದಲ್ಲಿ ವರ್ಗ ಸಂಖ್ಯೆ ಬರಲು ಕಾರಣ (4)
6.ತೆಳ್ಳಗಿನ ಸೊಂಟ (4)
7.ಕೊಡದಂತಿರುವ ದೊಡ್ಡ ಪಾತ್ರೆ (3)
9.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
10.ದಾಯಾದಿ ಜಗಳವಿದು (5)
11.ವನದ ಕೊನೆಗೆ ಪರಿಶುದ್ಧವಾದುದು ಕಾಣುತ್ತಿದೆ (3)
12.ಈತ ಬಲು ಲೋಭಿ (3)
16.ಪರಿ ಪರಿಯಾಗಿ ಹೇಳಿದಾಗ ಸಿಕ್ಕಿದ ಗುರುತು! (4)
17.ವಿಗ್ರಹಗಳ ಹಿಂದೆ ಅಲಂಕಾರವಾಗಿ ಜೋಡಿಸುವ ಕಮಾನಿನ ಉಪಕರಣ (4)

ಮೇಲಿಂದ ಕೆಳಕ್ಕೆ
1.ಇಳಿಯುವುದನ್ನು ಹೀಗೆನ್ನಿ (4)
2.ಸಣ್ಣ ತೂತುಗಳಿರುವ ಸೌಟು (3)
3. ಮೂಗಿನಿಂದ ಸುರಿವ ಶ್ಲೇಷ್ಮ (3)
4.ಈತ ಬಲು ಬುದ್ಧಿವಂತ (4)
8.ಸೈನ್ಸ್ ಅನ್ನು ಕನ್ನಡೀಕರಿಸಿ (3)
9.ಭವ್ಯವಾದ ಸೌಧವಿದು (3)
11.ಪಾರು ಮೊದಲಿದ್ದು ನಡೆಸಿದ ಮೇಲ್ವಿಚಾರಣೆ! (4)
13.ವೀಳ್ಯದೆಲೆ ಓಲೆಗರಿ ಮೊದಲಾದುವುಗಳ ಕಟ್ಟು (4)
14.ಈತ ಹಾಡುಗಾರ (3)
15.ಸದ್ಯದ ಪರಿಸ್ಥಿತಿ (3)

1	■	■	2	■	3	■	■	4
5				■	6			
	■	■		■		■	■	
7		8	■	■	■	9		
■	■	10					■	■
11			■	■	■	12		13
	■	■	14	■	15	■	■	
16				■	17			
	■	■		■		■	■	

5682ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೋಹರ 3.ಸಂಕೋಚ
5.ವಿಷಯ 6.ಖಡ್ಗಧಾರೆ
7.ನದೀಮುಖಜಭೂಮಿ
10.ತಳವಾರ 11.ಶಬರ
14.ಮೆಲ್ಲುಲಿ 15.ಹೊಗೆಸೊಪ್ಪು

ಮೇಲಿಂದ ಕೆಳಕ್ಕೆ:
1.ಮಜ್ಜೆ 2.ಹರುಷ
4.ಚತುರೆ 5.ವಿಧಾನ
6.ಖನಿಜ 8.ಮುಕುರ
9.ಮಿಹಿರ 10.ತರ್ಜುಮೆ
12.ಬಡಿಗೆ 13.ಮುಪ್ಪು

ಸುಡೊಕು 6068

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6067 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಹಾಸನ ಪ್ರಕರಣ: ಶಾಸಕ ಪ್ರೀತಂ ಗೌಡ ಆಪ್ತರ ಮನೆಗಳಲ್ಲಿ ದಾಳಿ • 7 ಪೆನ್‌ಡ್ರೈವ್, 6 ಹಾರ್ಡ್‌ಡಿಸ್ಕ್, 4 ಲ್ಯಾಪ್‌ಟಾಪ್ ವಶ

ಎಸ್‌ಐಟಿ ದಾಳಿ: ಮಹತ್ವದ ದಾಖಲೆ ವಶ

ಪ್ರಜಾವಾಣಿ ವಾರ್ತೆ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದು ಎನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೊ ಹಂಚಿಕೆಗೆ ಸಂಬಂಧಿಸಿದಂತೆ ಜಿಲ್ಲೆಯ 18 ಕಡೆ ಎಸ್‌ಐಟಿ ತಂಡ ದಾಳಿ ನಡೆಸಿತು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಆಪ್ತರ ಮನೆಗಳಲ್ಲಿ ದಾಳಿ ನಡೆದಿದ್ದು, ಒಟ್ಟು 7 ಪೆನ್ ಡ್ರೈವ್‌ಗಳು, 6 ಹಾರ್ಡ್ ಡಿಸ್ಕ್, 4 ಲ್ಯಾಪ್‌ಟಾಪ್, 3 ಡೆಸ್ಕ್ ಟಾಪ್‌ಗಳನ್ನು ವಶಕ್ಕೆ ಪಡೆದಿದೆ.

ಪ್ರೀತಂ ಗೌಡ ಆಪ್ತರು ಮತ್ತು ಪ್ರಕರಣದ ಸಂಬಂಧ ಈಗಾಗಲೇ ಬಂಧನಕ್ಕೆ ಒಳಗಾಗಿರುವ ಆರೋಪಿಗಳಿಗೆ ಸೇರಿದ ಜಾಗಗಳು ಸೇರಿದಂತೆ 18 ಕಡೆಗಳಲ್ಲಿ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿದ್ದರು.

'ವಶಕ್ಕೆ ಪಡೆದ ಪೆನ್‌ಡ್ರೈವ್ ಗಳನ್ನು ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಎಸ್‌ಐಟಿ ಕಳುಹಿಸಲಿದೆ. ಪೆನ್‌ಡ್ರೈವ್‌ಗಳು ಪ್ರಜ್ವಲ್ ಪ್ರಕರಣಕ್ಕೆ ಸಂಬಂಧಿಸಿದ್ದೇ ಹೌದೋ, ಅಲ್ಲವೋ ಎಂಬುದು ವರದಿ ಬಂದ ಬಳಿಕವಷ್ಟೇ ತಿಳಿದುಬರಲಿದೆ' ಎಂದು ಮೂಲಗಳು ತಿಳಿಸಿವೆ.

ದಾಳಿ ನಡೆಸಿದ ಮನೆ, ಕಚೇರಿಗಳಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನೂ ಪರಿಶೀಲಿಸಲಾಗುತ್ತಿದೆ. ವಿಡಿಯೊಗಳನ್ನು ಪೆನ್ ಡ್ರೈವ್, ಲ್ಯಾಪ್ ಟಾಪ್ ಹಾಗೂ ಡೆಸ್ಕ್ ಟಾಪ್‌ಗೆ ಕಾಪಿ ಮಾಡಿ, ನಂತರ ಬೇರೆಯವರಿಗೆ ಹಂಚಿರುವ ಆರೋಪವಿದೆ. ಪೆನ್‌ಡ್ರೈವ್ ಹಂಚಿಕೆಯ ಆರೋಪ ಎದುರಿಸುತ್ತಿರುವವರ ಮನೆ, ಕಚೇರಿಗೆ ಬಂದು ಹೋಗಿರುವವರ ಬಗ್ಗೆಯೂ ಎಸ್‌ಐಟಿ ಮಾಹಿತಿ ಕಲೆ ಹಾಕುತ್ತಿದೆ.

ಕಸ್ಟಡಿ ವಿಸ್ತರಣೆ: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಬಂಧಿತರಾಗಿರುವ ಬಿಜೆಪಿ ಮುಖಂಡ, ವಕೀಲ ದೇವರಾಜಗೌಡರ ಅವರ ಪೊಲೀಸ್ ಕಸ್ಟಡಿ ಅವಧಿಯನ್ನು ಒಂದು ದಿನಕ್ಕೆ ವಿಸ್ತರಿಸಲಾಗಿದೆ.

ಹೊಳೆನರಸೀಪುರ ನಗರ ಠಾಣೆ ಪೊಲೀಸರು ಮೇ 14ರಂದು ಪೊಲೀಸ್ ಕಸ್ಟಡಿಗೆ ಪಡೆದಿದ್ದರು. ಅವಧಿ ಮುಗಿದಿದ್ದರಿಂದ ಕೋರ್ಟ್‌ಗೆ ಹಾಜರು ಪಡಿಸಿದ್ದು, ಹೆಚ್ಚಿನ ವಿಚಾರಣೆಗೆ ಮತ್ತೊಂದು ದಿನ ನೀಡಬೇಕು ಎಂಬ ಪೊಲೀಸರ ಮನವಿಯನ್ನು ಜೆಎಂಎಫ್ ನ್ಯಾಯಾಲಯ ಪುರಸ್ಕರಿಸಿತು.

ಪೆನ್‌ಡ್ರೈವ್ ಕೊಟ್ಟರೆ ಕ್ರಮ ಕೈಗೊಳ್ತೀರಾ, ತಾಕತ್ತಿದೆಯೇ: ಎಚ್‌ಡಿಕೆ



ಮೈಸೂರು: 'ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ ನನ್ನಲ್ಲಿರುವ ಪೆನ್‌ಡ್ರೈವ್ ನೀಡಲು ಸಿದ್ಧ. ಅದನ್ನು ಆಧರಿಸಿ ಕ್ರಮಕೈಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾಕತ್ತು ಇದೆಯೇ?' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ಗುರುವಾರ ಇಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಅಧಿಕಾರಿಗಳಿಗೆ ವರ್ಗಾವಣೆಗಾಗಿ ಹಣಕ್ಕಾಗಿ ಒತ್ತಡ ಹಾಕಿದ್ದು ಯಾರು ಎಂಬ ವಿವರ ನೀಡುತ್ತೇನೆ. ದಾಖಲೆಗಳನ್ನು ಕೊಟ್ಟ ಮೇಲೆ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವವರು ಯಾರು' ಎಂದು ಪ್ರಶ್ನಿಸಿದರು.

'ಸಂಸದ ಪ್ರಜ್ವಲ್ ಇಲ್ಲಿ ಇದ್ದಾಗಲೇ ನನ್ನ ಸಂಪರ್ಕದಲ್ಲಿರಲಿಲ್ಲ. ಇನ್ನು ವಿದೇಶಕ್ಕೆ ಹೋದ ಬಳಿಕ ನನ್ನ ಸಂಪರ್ಕಕ್ಕೆ ಬರುತ್ತಾರೆಯೇ?' ಎಂದು ಅವರು ಪ್ರಶ್ನಿದರು.

'ಬಿಜೆಪಿ ಮುಖಂಡ ದೇವೇರಾಜೇಗೌಡರನ್ನು ಅತ್ಯಾಚಾರದ ಸುಳ್ಳು ಆರೋಪದ ಮೇಲೆ ಬಂಧಿಸಲಾಗಿದೆ. ಎಫ್‌ಐಆರ್ ದಾಖಲಿಸುವ ಮೊದಲೇ ಅವರೇ ಹನಿಟ್ರ್ಯಾಪ್ ಎಂದು ದೂರು ನೀಡಿದ್ದರು. ಈಗ ಬಂಧಿಸಿದ್ದನ್ನು ನೋಡಿದರೆ ಕಾಂಗ್ರೆಸ್‌ನವರಿಗೆ ದೇವೇರಾಜೇಗೌಡರ ಬಳಿ ಇರುವ ಆಡಿಯೊ ತುಣುಕು ಬೇಕಷ್ಟೇ' ಎಂದು ವ್ಯಂಗ್ಯವಾಡಿದರು.

'ದೊಡ್ಡ ತಿಮಿಂಗಿಲ ಯಾರು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರಿಗೇ ಗೊತ್ತಿದೆ. ಅದು ಅವರ ಪಕ್ಕದಲ್ಲೇ ಇದೆ. ತನಿಖೆಯಾದರೆ ಹತ್ತು ನಿಮಿಷದಲ್ಲಿ ಸಿಗುತ್ತದೆ. ವಿಡಿಯೊ ಬಹಿರಂಗ ಮಾಡಿದ ಮೂಲವ್ಯಕ್ತಿ ಹಿಡಿದರೆ ದೊಡ್ಡ ತಿಮಿಂಗಲ ತಾನಾಗಿಯೇ ಸಿಗುತ್ತದೆ' ಎಂದರು.

'ಇಡೀ ಪ್ರಕರಣದಲ್ಲಿ ಪ್ರಾಮಾಣಿಕವಾದ ತನಿಖೆಯು ನಡೆಯುತ್ತಿಲ್ಲ. ಎಸ್‌ಐಟಿ ತನಿಖಾ ವರದಿಗಳು ಗೃಹ ಸಚಿವರಿಗಿಂತ ಮೊದಲು ಮಂಡ್ಯದ ಶಾಸಕರಿಗೆ ಹೋಗುತ್ತಿವೆ. ಗೃಹಸಚಿವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ' ಎಂದು ಅವರು ಆರೋಪಿಸಿದರು.

ರಥೋತ್ಸವ ಬೆಳಗಾವಿ ತಾಲ್ಲೂಕಿನ ಸಾಂಬ್ರಾದಲ್ಲಿ ಗ್ರಾಮದೇವತೆ ಮಹಾಲಕ್ಷ್ಮಿ ಜಾತ್ರೆಯ ಅಂಗವಾಗಿ ಗುರುವಾರ ಮಹಾ ರಥೋತ್ಸವ ಅಪಾರ ಭಕ್ತರ ಸಂಭ್ರಮದ ಮಧ್ಯೆ ನೆರವೇರಿತು

ರೇವಣ್ಣಗೆ ಮಧ್ಯಂತರ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿರುವ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಜನಪ್ರತಿನಿಧಿಗಳ 42ನೇ ಎಸಿಎಂಎಂ ವಿಶೇಷ ನ್ಯಾಯಾಲಯ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದೆ.

ಮನೆಗೆಲಸದ ಸಂತ್ರಸ್ತೆ ದಾಖಲಿಸಿರುವ ಈ ಪ್ರಕರಣ ಶುಕ್ರವಾರಕ್ಕೆ (ಮೇ 16) 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್ ಅವರ ಮುಂದೆ ವಿಚಾರಣೆ ನಿಗದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಆರೋಪಿ ರೇವಣ್ಣ ಮುಂಚಿತವಾಗಿಯೇ ಗುರುವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಶರಣಾಗಿ ಜಾಮೀನು ಕೋರಿದ್ದರು.

ಎಚ್.ಡಿ.ರೇವಣ್ಣ

ಏತನ್ಮಧ್ಯೆ, ಪ್ರಾಸಿಕ್ಯೂಷನ್ ಪರ ವಕೀಲರು ಹಾಜರಾಗಿ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕೋರಿದರು. ಜಾಮೀನು ನೀಡದಂತೆ ನ್ಯಾಯಾಧೀಶರಿಗೆ ಮನವಿ ಮಾಡಿದರು. ಕೆಲಕಾಲ ವಾದ ಆಲಿಸಿದ ನ್ಯಾಯಾಧೀಶರು, '₹5 ಲಕ್ಷ ಮೊತ್ತದ ಬಾಂಡ್ ನೀಡಬೇಕು ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು' ಎಂಬ ಷರತ್ತಿನೊಂದಿಗೆ ಮಧ್ಯಂತರ ಜಾಮೀನು ನೀಡಿ ಅರ್ಜಿ ವಿಚಾರಣೆಯನ್ನು ಶುಕ್ರವಾರಕ್ಕೆ (ಮೇ 17) ಮುಂದೂಡಿದರು.

ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಮೊದಲನೇ ಆರೋಪಿಯಾಗಿದ್ದು, ಸಂಸದರೂ ಆದ ಪುತ್ರ ಪ್ರಜ್ವಲ್ ರೇವಣ್ಣ ಎರಡನೇ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ಆರೋಪಿ ವಿರುದ್ಧ ಐಪಿಸಿ ಕಲಂ 376 ಸೇರ್ಪಡೆ ಮಾಡಬೇಕೆಂದು ಎಸ್‌ಐಟಿ ಮಾಡಿದ್ದ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಿದೆ.

ಮುಖ್ಯಾಂಶಗಳು

- ಮನೆಗೆಲಸದ ಸಂತ್ರಸ್ತೆ ದಾಖಲಿಸಿದ್ದ ದೂರು
- ಬೆಳಿಗ್ಗೆಯೇ ಕೋರ್ಟ್‌ಗೆ ಶರಣಾಗಿ ಜಾಮೀನು ಕೋರಿದ್ದ ಶಾಸಕ
- ಎರಡನೆ ಆರೋಪಿ ಪ್ರಜ್ವಲ್ ವಿರುದ್ಧ ಐಪಿಸಿ ಕಲಂ 376 ಸೇರಿಸಲು ಕೋರ್ಟ್ ಸಮ್ಮತಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ '**ಶೈಕ್ಷಣಿಕ ನೆರವಿಗೆ ಅರ್ಜಿ**' ಎಂದು ಬರೆಯಬೇಕು.

ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಿದೆ

'ಪ್ರಜಾವಾಣಿ' ಪತ್ರಿಕೆ ನೀಡಿದ ವಿದ್ಯಾರ್ಥಿವೇತನದಿಂದ ಕಾಲೇಜಿನ ಶುಲ್ಕ ಕಟ್ಟಿ, ಉಳಿದ ಹಣದಲ್ಲಿ ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಿದೆ. ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಸಹಾಯ ಮಾಡುತ್ತಿರುವ 'ಪ್ರಜಾವಾಣಿ'ಗೆ ನಾನು ಋಣಿಯಾಗಿದ್ದೇನೆ

ನಚಿಕೇತ್, ಸಲವಡಿ, ಉಡುಪಿ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಮೇಲ್ಮನೆ ಚುನಾವಣೆ: ಪಕ್ಷೇತರನಾಗಿ ನಾಮಪತ್ರ ಸಲ್ಲಿಸದಂತೆ ಕಾರ್ಯಕರ್ತರ ವಿರೋಧ

ಸಭೆಯಲ್ಲಿ ಗದ್ದಲ: ಆಸ್ಪತ್ರೆಗೆ ಕೆ.ಟಿ.ಶ್ರೀಕಂಠೇಗೌಡ

ಪ್ರಜಾವಾಣಿ ವಾರ್ತೆ

ಮೈಸೂರು: ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಟಿ.ಶ್ರೀಕಂಠೇಗೌಡ, ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೆಂಬಲಿಗರ ಸಭೆಯಲ್ಲಿ ಗದ್ದಲ ಉಂಟಾಗಿದ್ದು, ಗಾಯಗೊಂಡ ಶ್ರೀಕಂಠೇಗೌಡರು ಆಸ್ಪತ್ರೆ ಸೇರಬೇಕಾಯಿತು.

ಇದರಿಂದಾಗಿ ಕ್ಷೇತ್ರದಿಂದ ಪಕ್ಷೇತರನಾಗಿ ನಾಮಪತ್ರ ಸಲ್ಲಿಸಲು ಆಗಲಿಲ್ಲ. ಜೆಡಿಎಸ್- ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಕೆ.ವಿವೇಕಾನಂದ ಅವರಿಗೆ ಜೆಡಿಎಸ್ 'ಬಿ ಫಾರಂ' ನೀಡಿತ್ತು. ಬೇಸರಗೊಂಡಿದ್ದ ಶ್ರೀಕಂಠೇಗೌಡ ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧರಿಸಿದ್ದರು.

ಈ ಕುರಿತು ಚರ್ಚಿಸಲು 'ಸ್ವಾಭಿಮಾನಿ ಶಿಕ್ಷಕರ ವೇದಿಕೆ' ಹೆಸರಿನಲ್ಲಿ ಬೆಂಬಲಿಗರ ಸಭೆ ನಡೆಸಿದ್ದರು. ಈ ಸಭೆಗೆ ಬಂದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಮುಖಂಡರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸ್ಪರ್ಧಿಸುವ ನಿರ್ಧಾರ ಕೈಬಿಟ್ಟು ಪಕ್ಷದ ಅಭ್ಯರ್ಥಿ ಬೆಂಬಲಿಸುವಂತೆ ಕೋರಿದರು.

ಆಗ ಶ್ರೀಕಂಠೇಗೌಡ ಹಾಗೂ ಅವರ ಬೆಂಬಲಿಗರು, ಅನ್ಯಾಯದ ಬಗ್ಗೆ ಅಳಲು ತೋಡಿಕೊಂಡರು.

ಮೈಸೂರಿನಲ್ಲಿ ಕೆ.ಟಿ. ಶ್ರೀಕಂಠೇಗೌಡ ಗುರುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಬೆಂಬಲಿಗರು ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಜಿ.ಟಿ. ದೇವೇಗೌಡ, ಸಿ.ಎನ್. ಮಂಜೇಗೌಡ ಸಾಕ್ಷಿಯಾದರು

ಈ ಸಂದರ್ಭದಲ್ಲಿ ಮುಖಂಡರ ಸಮ್ಮುಖದಲ್ಲೇ ಕಾರ್ಯಕರ್ತರು ಹಾಗೂ ಶ್ರೀಕಂಠೇಗೌಡರ ಬೆಂಬಲಿಗರ ನಡುವೆ ತಳ್ಳಾಟ ನಡೆಯಿತು. ಇದರಿಂದ ಅವರ ಕೈಗೆ ಪೆಟ್ಟಾಯಿತು.

'ನೋವಾದರೂ ಪರವಾಗಿಲ್ಲ. ಎಲ್ಲವನ್ನೂ ಸಹಿಸಿಕೊಂಡಿದ್ದೀರಿ. ನೀವು ಇಂದು ನಾಮಪತ್ರ ಸಲ್ಲಿಸಲೇ ಬೇಕು' ಎಂದು ಬೆಂಬಲಿಗರು ಒತ್ತಾಯಿಸಿದರು. ಬಳಿಕ, ಶ್ರೀಕಂಠೇಗೌಡ ಆಸ್ಪತ್ರೆಗೆ ದಾಖಲಾದರು. ನಾಮಪತ್ರ ಸಲ್ಲಿಕೆಗೆ ಗುರುವಾರ ಕಡೆಯ ದಿನವಾಗಿತ್ತು.

ಮೈತ್ರಿ ಅಭ್ಯರ್ಥಿಯಿಂದ ನಾಮಪತ್ರ: ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಿದರು. ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ, ಜಿ.ಟಿ.ದೇವೇಗೌಡ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ, ಮೈಸೂರು-ಕೊಡಗು ಲೋಕಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಾಥ್ ನೀಡಿದರು.

> **ಒಕ್ಕಲಿಗ ಸಮುದಾಯದ ನನಗೆ ಟಿಕೆಟ್ ತಪ್ಪಿಸಿದ್ದು ಸರಿಯಲ್ಲ. ಜೆಡಿಎಸ್ ತನ್ನ ಅಭ್ಯರ್ಥಿ ಕೈ ಬಿಟ್ಟು ನನಗೆ ಬೆಂಬಲ ನೀಡಬೇಕು**
>
> **ಈ.ಸಿ.ನಿಂಗರಾಜು ಗೌಡ,** ಬಿಜೆಪಿ ಅಭ್ಯರ್ಥಿ

ನಿಂಗರಾಜ್ ಜೊತೆ ಅಶೋಕ ಮಾತುಕತೆ

ಮೈಸೂರು: ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಈ.ಸಿ.ನಿಂಗರಾಜ್ ಗೌಡ ಜೊತೆ ಆರ್.ಅಶೋಕ ಗುರುವಾರ ಇಲ್ಲಿ ಭೇಟಿ ಮಾಡಿದ್ದು, ನಾಮಪತ್ರ ವಾಪಸಾತಿಗೆ ಮನವೊಲಿಸಲು ಯತ್ನಿಸಿದರು.

ಬಿಜೆಪಿ ಈ ಕ್ಷೇತ್ರದಿಂದ ನಿಂಗರಾಜ್ ಅವರಿಗೆ ಟಿಕೆಟ್ ಘೋಷಿಸಿತ್ತು. ಆದರೆ ನಂತರದ ಬೆಳವಣಿಗೆಯಲ್ಲಿ ಕ್ಷೇತ್ರವನ್ನು ತನ್ನ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ.

ಆದಾಗ್ಯೂ ನಿಂಗರಾಜ ಬುಧವಾರ 'ಬಿ ಫಾರಂ' ಇಲ್ಲದೆ ನಾಮಪತ್ರ ಸಲ್ಲಿಸಿದ್ದರು. ಗುರುವಾರ ಜೆಡಿಎಸ್- ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ನಾಮಪತ್ರ ಸಲ್ಲಿಕೆಗೂ ಮುನ್ನ ಅಶೋಕ ಅವರು ನಿಂಗರಾಜ್ ಅವರನ್ನು ಭೇಟಿಯಾದರು. 'ನಿಂಗರಾಜ್ ನಾಮಪತ್ರ ವಾಪಸ್ ಪಡೆಯಲು ಒಪ್ಪಿದ್ದಾರೆ. ವಿವೇಕಾನಂದ ಅವರೇ ಎನ್‌ಡಿಎ ಮೈತ್ರಿಕೂಟದ ಒಮ್ಮತದ ಅಭ್ಯರ್ಥಿ' ಎಂದು ಅಶೋಕ ತಿಳಿಸಿದರು.

ವಿವೇಕಾನಂದ ಕುಟುಂಬದ ಆಸ್ತಿ ₹124.65 ಕೋಟಿ

ಮೈಸೂರು: ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದ ಕೆ. ವಿವೇಕಾನಂದ ಅವರ ಕುಟುಂಬದ ಒಟ್ಟು ಆಸ್ತಿ ₹124.65 ಕೋಟಿ.

ಅವರ ಬಳಿ ₹16.09 ಕೋಟಿ ಮೌಲ್ಯದ ಚರಾಸ್ತಿ ಇದೆ. ಒಂದು ಔಡಿ ಕಾರ್, 2 ರಾಯಲ್ ಎನ್‌ಫೀಲ್ಡ್ ಬೈಕ್ ಇವೆ. 1.5 ಕೆ.ಜಿ. ಚಿನ್ನ ಹಾಗೂ 30 ಕೆ.ಜಿ. ಬೆಳ್ಳಿ ಇದೆ. ಪತ್ನಿ ಕೆ.ಎಂ. ಗೀತಾ ₹61 ಲಕ್ಷ ಮೌಲ್ಯದ ಚರಾಸ್ತಿ, ಮರ್ಸಿಡಿಸ್ ಬೆಂಜ್ ಕಾರ್, 1 ಕೆ.ಜಿ. ಚಿನ್ನ ಇದೆ.

ಸ್ಥಿರಾಸ್ತಿ: ವಿವೇಕಾನಂದರ ಒಟ್ಟು ಸ್ಥಿರಾಸ್ತಿ ಮೌಲ್ಯ ₹101.85 ಕೋಟಿ. ಮೈಸೂರು, ಮಂಡ್ಯ ಜಿಲ್ಲೆಯ ವಿವಿಧೆಡೆ ಕೃಷಿ ಭೂಮಿ ಹೊಂದಿದ್ದಾರೆ. ಮೈಸೂರಿನಲ್ಲಿ ₹8 ಕೋಟಿ ಮೌಲ್ಯದ ವಾಣಿಜ್ಯ ಕಟ್ಟಡ, ಮೈಸೂರು, ಬೆಂಗಳೂರಿನಲ್ಲಿ 2 ವಾಸದ ಮನೆಗಳಿವೆ. ವಾರ್ಷಿಕ ಆದಾಯವೇ ₹1.04 ಕೋಟಿ ಇದೆ. ಒಟ್ಟು ₹16.42 ಕೋಟಿ ಸಾಲವಿದೆ ಎಂದು ಘೋಷಿಸಿಕೊಂಡಿದ್ದಾರೆ.

ಚಲಿಸುತ್ತಿದ್ದ ರೈಲಿನಲ್ಲಿ ಸಿಬ್ಬಂದಿ ಕೊಲೆ, ಮೂವರಿಗೆ ಗಾಯ

ದೇವಋಷಿ ವರ್ಮಾ

ಬೆಳಗಾವಿ: ಚಲಿಸುತ್ತಿದ್ದ ರೈಲಿನಲ್ಲಿ ಗುರುವಾರ ಪ್ರಯಾಣಿಕನೊಬ್ಬ ಟಿಕೆಟ್ ಪರಿವೀಕ್ಷಕ (ಟಿಟಿಇ) ಟಿಕೆಟ್ ತಪಾಸಣೆ ಮಾಡುವಾಗ ಚಾಕುವಿನಿಂದ ದಾಳಿ ನಡೆಸಿದಾಗ ರೈಲ್ವೆ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದು, ಟಿಟಿಇ ಸೇರಿ ಮೂವರು ಗಾಯಗೊಂಡಿದ್ದಾರೆ.

'ಬೋಗಿ ಅಟೆಂಡರ್ ದೇವಋಷಿ ವರ್ಮಾ (23) ಮೃತರು. ಆರೋಪಿಯು ಎದೆಗೇ ಚಾಕು ಇರಿದಿದ್ದರಿಂದ ಅವರು ತೀವ್ರ ನಿತ್ರಾಣಗೊಂಡರು. ಬೆಳಗಾವಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು' ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

'ಪುದುಚೆರಿ– ಮುಂಬೈ ಚಾಲುಕ್ಯ ಎಕ್ಸ್‌ಪ್ರೆಸ್ ರೈಲಿನ ಎಸ್–8 ಬೋಗಿಯಲ್ಲಿ ಧಾರವಾಡದಿಂದ ಬೆಳಗಾವಿಯತ್ತ ಚಲಿಸುತ್ತಿದ್ದಾಗ ಈ ಘಟನೆ ನಡೆದಿದೆ. ಟಿಕೆಟ್ ಕೇಳಿದ್ದಕ್ಕೆ ಹಲ್ಲೆ ಮಾಡಲಾಗಿದೆ. 'ಆರೋಪಿ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಪರಾರಿಯಾಗಿದ್ದಾನೆ' ಎಂದು ತಿಳಿಸಿದ್ದಾರೆ.

'ಅಲೆಮಾರಿ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್ಸಿ-ಎಸ್ಟಿ ಅಲೆಮಾರಿ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡದೇ ಅನ್ಯಾಯ ಮಾಡಲಾಗಿದೆ. ಮುಂಬರುವ ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸಮುದಾಯದವರನ್ನು ಗುರುತಿಸಿ ನಾಮನಿರ್ದೇಶನ ಮಾಡಬೇಕು' ಎಂದು ಎಸ್.ಸಿ-ಎಸ್.ಟಿ ಅಲೆಮಾರಿ, ವಿಮುಕ್ತ ಬುಡಕಟ್ಟು ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಆದರ್ಶ್ ಯಲ್ಲಪ್ಪ, 'ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡದ ಅಲೆಮಾರಿ ಘಟಕಗಳನ್ನು ರಚಿಸಬೇಕು. ರಾಜ್ಯದಲ್ಲಿ ಅವಕಾಶ ವಂಚಿತ ಎಸ್.ಸಿಗೆ ಸೇರಿದ 51 ಹಾಗೂ ಎಸ್.ಟಿಗೆ 23 ಅಲೆಮಾರಿ ಜಾತಿಗಳಿದ್ದು, 25 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇದೆ. ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿವೆ' ಎಂದರು.

'ರಾಜ್ಯದಲ್ಲಿ ನಮ್ಮ ಸಮುದಾಯದವರಿಗೆ ರಾಜಕೀಯ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಸಮುದಾಯದಲ್ಲಿ ಸಂಘಟಕರು, ವಿದ್ವಾಂಸರು, ತಜ್ಞರು, ಅನುಭವಿಗಳು ಇದ್ದರೂ ಸಹ, ನೇರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆ ಆಗಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

ಆಲಮಟ್ಟಿ: 38 ಕೆ.ಜಿ ತೂಕದ ಮೀನು ಬಲೆಗೆ

ಪ್ರಜಾವಾಣಿ ವಾರ್ತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಇಲ್ಲಿಯ ಕೃಷ್ಣಾ ನದಿಯ ಹಳೆ ಚಿಮ್ಮಲಗಿ ಬಳಿಯ ಬಾವಾಸಾಬ್ ಗುಡ್ಡದ ಬಳಿ ಗುರುವಾರ ಸ್ಥಳೀಯ ಮೀನುಗಾರರೊಬ್ಬರಿಗೆ 38 ಕೆ.ಜಿ ತೂಕದ ದೊಡ್ಡ ಮೀನು ಬಲೆಗೆ ಬಿದ್ದಿದೆ.

ಈಗ ಕೃಷ್ಣೆಯ ಹಿನ್ನೀರು ಕಡಿಮೆಯಾಗಿದೆ. ಆಳದ ನೀರಿನಲ್ಲಿ ಬೃಹತ್ ಗಾತ್ರದ ಮೀನುಗಳು ಇರುತ್ತವೆ. ಕೆಲ ದಿನಗಳಿಂದ ದೊಡ್ಡ ಗಾತ್ರದ ಮೀನು ಬೀಳುವ ಅಗಲದ ಬಲೆಯನ್ನೇ ಮೀನುಗಾರರು ಬಳಸುತ್ತಿದ್ದಾರೆ.

38 ಕೆಜಿ ತೂಕದ ಕಾಟ್ಲಾ ಮೀನು

'ಇದು ಕಟ್ಲಾ ಜಾತಿಗೆ ಸೇರಿದ ಮೀನಾಗಿದ್ದು, 38 ಕೆ.ಜಿ ತೂಕವಿದೆ. ಕಳೆದ ವಾರ 35 ಕೆ.ಜಿ ತೂಕದ ಮೀನು ಇದೇ ಸ್ಥಳದಲ್ಲಿ ಇನ್ನೊಬ್ಬ ಮೀನುಗಾರನಿಗೆ ಸಿಕ್ಕಿತ್ತು. ಈಗ ನನಗೆ ಸಿಕ್ಕಿದ್ದು ಖುಷಿಯಾಗಿದೆ' ಎಂದು ಮೀನುಗಾರ ಭರತ ಯಮನೂರಿ ಸಾಳೆ ಸಂಭ್ರಮಿಸಿದರು.

₹5,700 ಕ್ಕೆ ಮಾರಾಟ: ಸಗಟು ವ್ಯಾಪಾರಿ ಮಹಾಂತೇಶ ಧನವೆ ಈ ಮೀನನ್ನು ₹5,700ಗೆ ಅವರು ಖರೀದಿಸಿದ್ದಾರೆ

ಊರಾಚೆ ಗುಡಿಸಲಲ್ಲಿ ಬಾಣಂತಿ, ಮಗು

ತೋವಿನಕೆರೆ (ತುಮಕೂರು): ಬಿಸಾಡಿಹಳ್ಳಿಯಲ್ಲಿ ಗೊಲ್ಲ ಸಮುದಾಯದ ಬಾಣಂತಿಯರನ್ನು ಹೆರಿಗೆ ನಂತರ ಊರ ಹೊರಗಿನ ಗುಡಿಸಲಿನಲ್ಲಿ ಇರಿಸಲಾಗಿದೆ.

ಗೊಲ್ಲರ ಹಟ್ಟಿಯಲ್ಲಿ ಕೆಲವು ದಿನಗಳ ಅಂತರದಲ್ಲಿ ನಾಲ್ವರು ಮಹಿಳೆಯರಿಗೆ ಹೆರಿಗೆ ಆಗಿದೆ. ಸಂಪ್ರದಾಯದಂತೆ ಮಗು, ಬಾಣಂತಿಯನ್ನು 90 ದಿನ ಮನೆ ಒಳಗಡೆ ಬಿಟ್ಟುಕೊಳ್ಳದೆ ತಾತ್ಕಾಲಿಕ ಗುಡಿಸಲು ನಿರ್ಮಿಸಿ ಅಲ್ಲಿ ಬಿಟ್ಟಿದ್ದಾರೆ.

ವಿಷಯ ತಿಳಿದ ಅಶಾ, ಅಂಗನವಾಡಿ ಕಾರ್ಯಕರ್ತೆಯರು ಸ್ಥಳಕ್ಕೆ ತೆರಳಿ

ಕಾನೂನು ಕ್ರಮದ ಎಚ್ಚರಿಕೆ ನೀಡಿದ್ದಾರೆ. ಬಳಿಕ ಗುಡಿಸಲಲ್ಲಿ ಇದ್ದ ಮಗು ಮತ್ತು ಬಾಣಂತಿಯನ್ನು ಸಂಜೆ ಒಳಗೆ ಮನೆಗೆ ಕರೆದುಕೊಂಡು ಹೋಗುವ ಭರವಸೆಯನ್ನು ಹಿರಿಯರು ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ವರ್ಗಾವಣೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯ ನಿರ್ವಾಹಕ ನಿರ್ದೇಶಕಿ ಸ್ಥಾನದಿಂದ ಎಸ್. ರಮ್ಯಾ ಅವರನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಎಚ್. ಪ್ರಸನ್ನ ಅವರಿಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಸ್ಥಾನದ ಹೆಚ್ಚುವರಿ ಹೊಣೆ ನೀಡಲಾಗಿದೆ. ಈ ಹುದ್ದೆಯನ್ನು ರಮ್ಯಾ ಅವರೂ ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದರು.

ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕಳೆದ ತಿಂಗಳು ನಡೆಸಿದ್ದ ಸಿಇಟಿಯಲ್ಲಿ ಪಠ್ಯ ಹೊರತಾದ ಪ್ರಶ್ನೆಗಳು ಕಾಣಿಸಿಕೊಂಡಿದ್ದ ಪ್ರಕರಣದಲ್ಲಿ ಅವರು ಸಾಕಷ್ಟು ಟೀಕೆಗೆ ಒಳಗಾಗಿದ್ದರು.

ಉಡುಪಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದ ಎಚ್.ಪ್ರಸನ್ನ ಅವರನ್ನು ಇದೇ ವರ್ಷದ ಜನವರಿಯಲ್ಲಿ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಎರಡು ದಿನಗಳಲ್ಲೇ ಅವರನ್ನು ಮತ್ತೆ ವರ್ಗಾವಣೆ ಮಾಡಿ, ರಮ್ಯಾ ಅವರನ್ನೇ ಮುಂದುವರಿಸಲಾಗಿತ್ತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2: ನೋಂದಣಿ ಅವಧಿ ವಿಸ್ತರಣೆ

ಬೆಂಗಳೂರು: ಜೂನ್ 7ರಿಂದ 14ರವರೆಗೆ ಎಸ್‌ಎಸ್‌ಎಲ್‌ಸಿ ಎರಡನೇ ಪರೀಕ್ಷೆ ನಡೆಯಲಿದ್ದು, ನೋಂದಣಿ ದಿನಾಂಕವನ್ನು ಮೇ 19ರವರೆಗೆ ವಿಸ್ತರಿಸಲಾಗಿದೆ.

ಮೊದಲು ಮೇ 16 ಕೊನೆಯ ದಿನವಾಗಿತ್ತು. ಇದುವರೆಗೂ ಸುಮಾರು 2 ಲಕ್ಷ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ ಅನುತ್ತೀರ್ಣರಾದ ಹಾಗೂ ಕಡಿಮೆ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಫಲಿತಾಂಶ ವೃದ್ಧಿಸಿಕೊಳ್ಳಲು ಎರಡನೇ ಮತ್ತು ಮೂರನೇ ಪರೀಕ್ಷೆ ನಡೆಸಲಾಗುತ್ತಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ವೇಳಾಪಟ್ಟಿ: ಜೂನ್ 7–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 8–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 10–ಗಣಿತ, 11–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 12–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 13–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 14–ಸಮಾಜ ವಿಜ್ಞಾನ.

ಕೆರೆ ಹೂಳಿನಲ್ಲಿ ಸಿಲುಕಿ ನಾಲ್ವರು ಬಾಲಕರು ಸಾವು

ಆಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಕದಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುತ್ತಿಗೆಪುರದ ಕೆರೆಯಲ್ಲಿ ಗುರುವಾರ ಈಜಲು ಹೋಗಿದ್ದ ನಾಲ್ವರು ಬಾಲಕರು ಹೂಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಪೃಥ್ವಿರಾಜ್ (14), ವಿಶ್ವಾಸ್ (13), ಜೀವನ್ (13), ಸಾತ್ವಿಕ್ (13) ಮೃತರು. ಬೇಲೂರು ತಾಲ್ಲೂಕು ಮದಘಟ್ಟ ಗ್ರಾಮದ ಸಾತ್ವಿಕ್, ರಜೆ ಹಿನ್ನೆಲೆಯಲ್ಲಿ ಮುತ್ತಿಗೆಪುರದ ಅಜ್ಜಿ ಮನೆಗೆ ಬಂದಿದ್ದ. ಎರಡು ತಿಂಗಳ ಹಿಂದೆ ಈತನ ತಂದೆ ಮೃತಪಟ್ಟಿದ್ದರು.

ಎಲ್ಲ ಮಕ್ಕಳು ಕೂಲಿ ಕಾರ್ಮಿಕರ ಕುಟುಂಬದವರು. ವಿಶ್ವಾಸ್, ಆಶಾ ಕಾರ್ಯಕರ್ತೆ ಪುಷ್ಪಲತಾ ಅವರ ಮಗ. ನಾಲ್ವರು ಪೋಷಕರಿಗೂ ಒಬ್ಬೊಬ್ಬರೇ ಗಂಡು ಮಕ್ಕಳಿದ್ದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಭೇಟಿ ನೀಡಿದ್ದರು.

'ಬಾಲಕಿಯ ಹತ್ಯೆ ಪ್ರಕರಣ: ವಿಚಾರಣೆಗೆ ವಿಶೇಷ ಕೋರ್ಟ್'

ಮಡಿಕೇರಿ: 'ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕುಂಬಾರಗಡಿಗೆ ಗ್ರಾಮದಲ್ಲಿ 16 ವರ್ಷದ ಬಾಲಕಿಯ ರುಂಡ ಕಡಿದಿದ್ದ ಪ್ರಕರಣದ ತ್ವರಿತವಿಚಾರಣೆಗಾಗಿ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗುವುದು' ಎಂದು ಗೃಹಸಚಿವ ಜಿ.ಪರಮೇಶ್ವರ ತಿಳಿಸಿದರು.

ಬಾಲಕಿಯ ಮನೆಗೆ ಗುರುವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ರಾಜ್ಯದಲ್ಲಿ ಇಂಥ ಪ್ರಕರಣಗಳು ನಡೆದಾಗ ವಿಶೇಷ ಕೋರ್ಟ್ ಸ್ಥಾಪಿಸಲಾಗುತ್ತಿದೆ. ಈ ಪ್ರಕರಣದಲ್ಲೂ ವಿಶೇಷ ಕೋರ್ಟ್ ಸ್ಥಾಪಿಸಿ, ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಿಸಲಾಗುವುದು' ಎಂದರು.

'ಚುನಾವಣಾ ನೀತಿಸಂಹಿತೆ ಮುಗಿದ ಕೂಡಲೇ ಸಂತ್ರಸ್ತ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಲಾಗುವುದು' ಎಂದು ತಿಳಿಸಿದರು.

'ಯುವತಿಯರ ಕೊಲೆಗಳು ಹೆಚ್ಚುತ್ತಿವೆ. ಕಾನೂನು ಸುವ್ಯವಸ್ಥೆ ಕುಸಿದಿದೆಯೆ' ಎಂಬ ಪ್ರಶ್ನೆಗೆ, 'ಜನರು ಕಾನೂನು ಕೈಗೆತ್ತಿ ಕೊಳ್ಳುತ್ತಿದ್ದಾರೆ. ಈ ಕೃತ್ಯಗಳು ಪೂರ್ವಯೋಜಿತವಾಗಿರದೇ ಆ ಕ್ಷಣಕ್ಕೆ ಎಸಗಿದ ಕೃತ್ಯ ಅನಿಸುತ್ತದೆ. ತನಿಖೆಯಿಂದ ಸತ್ಯಾಂಶ ತಿಳಿಯಲಿದೆ' ಎಂದು ಹೇಳಿದರು.

ಶರಣಾಗತರಿಗೆ ಪುನರ್ವಸತಿ ಪ್ಯಾಕೇಜ್: ಬಂಜಗೆರೆ ಜಯಪ್ರಕಾಶ್

ಮುಖ್ಯವಾಹಿನಿಗೆ ಬರಲು ನಕ್ಸಲರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದಲ್ಲಿ ಸಕ್ರಿಯವಾಗಿರುವ ನಕ್ಸಲರು ಸಶಸ್ತ್ರ ಹೋರಾಟ ಕೈಬಿಟ್ಟು ಮುಖ್ಯವಾಹಿನಿಗೆ ಬರಲು ಅವಕಾಶ ನೀಡಲು ರಾಜ್ಯ ಸರ್ಕಾರ ಸಮ್ಮತಿಸಿದೆ. ಪೂರ್ವ ಷರತ್ತು ಇಲ್ಲದೇ ಶರಣಾಗ ಬಯಸುವವರು ತಮ್ಮನ್ನು ಸಂಪರ್ಕಿಸಬಹುದು' ಎಂದು ನಕ್ಸಲರ ರಾಜ್ಯಮಟ್ಟದ ಶರಣಾಗತಿ ಸಮಿತಿಯ ಸದಸ್ಯ, ಹಿರಿಯ ಸಾಹಿತಿ ಬಂಜಗೆರೆ ಜಯಪ್ರಕಾಶ್ ಮನವಿ ಮಾಡಿದರು.

'ಹಿಂದೆ ಸರ್ಕಾರದ ಆಹ್ವಾನಕ್ಕೆ ಒಪ್ಪಿ 14 ನಕ್ಸಲರು ಶರಣಾಗಿದ್ದಾರೆ. ಅವರಲ್ಲಿ ಕೆಲವರು ಪುನರ್ವಸತಿ ಪ್ಯಾಕೇಜ್ ಪಡೆದಿದ್ದಾರೆ. ಇನ್ನೂ ಕೆಲವರು ಪ್ಯಾಕೇಜ್ ಪಡೆಯದೇ ಮುಖ್ಯವಾಹಿನಿ ಯಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸದ್ಯ ನಕ್ಸಲ್ ಚಟುವಟಿಕೆಯಲ್ಲಿ ಕರ್ನಾಟಕದ 8ರಿಂದ 9 ಮಂದಿ ಸಕ್ರಿಯ ರಾಗಿರುವ ಬಗ್ಗೆ ಮಾಹಿತಿ ಇದೆ. ಅವರಲ್ಲಿ ಕೆಲವರು ಮುಖ್ಯವಾಹಿನಿಗೆ ಬರಲು ಸಿದ್ಧರಿದ್ದಾರೆ ಎಂಬುದು ಈಚೆಗೆ ತಮಿಳುನಾಡು, ಕೇರಳದಲ್ಲಿ ಬಂಧನಕ್ಕೊಳಗಾಗಿರುವ ನಕ್ಸಲರಿಂದ ಗೊತ್ತಾಗಿದೆ' ಎಂದು ಹೇಳಿದರು.

'ಶರಣಾಗತಿ ಬಯಸಿ ಬರುವ ನಕ್ಸಲರಿಗೆ ಯಾವುದೇ ತೊಂದರೆ ಕೊಡುವುದಿಲ್ಲ. ಆದರೆ, ಶಸ್ತ್ರ ಹಿಡಿದು ನಕ್ಸಲ್ ನಿಗ್ರಹ ದಳಕ್ಕೆ ಮುಖಾಮುಖಿ ಆಗುವವರ ವಿಚಾರದಲ್ಲಿ ಯಾವುದೇ ದಾಕ್ಷಿಣ್ಯ ಇರುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ನಕ್ಸಲರು ಶರಣಾಗತರಾದರೂ ಅವರ ವಿರುದ್ಧದ ಕಾನೂನು ಪ್ರಕ್ರಿಯೆಗಳು ಮುಂದುವರಿಯಲಿವೆ. ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ, ವಕೀಲರ ನೆರವು ಕಲ್ಪಿಸಲು ಸಮಿತಿ ಸರ್ಕಾರಕ್ಕೆ ಮನವಿ ಮಾಡಿದೆ' ಎಂದು ಸಮಿತಿ ಸದಸ್ಯ, ವಕೀಲ ಕೆ.ಪಿ.ಶ್ರೀಪಾಲ್ ಹೇಳಿದರು.

'ನಕ್ಸಲರ ಶರಣಾಗತಿಗೆ ಹಿಂದೆಯೂ ಎರಡು ಬಾರಿ ಸಮಿತಿ ರಚನೆಯಾಗಿತ್ತು. ಈಗಿನ ಪ್ಯಾಕೇಜ್‌ನಲ್ಲಿ ರಾಜ್ಯದ ನಕ್ಸಲರು, ಹೊರ ರಾಜ್ಯದವರಿಗೆ ಪ್ರತ್ಯೇಕ ಪುನರ್ವಸತಿಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಸಮಿತಿ ಸದಸ್ಯ, ಪತ್ರಕರ್ತ ಪಾರ್ವತೀಶ ಬಿಳಿದಾಳೆ ತಿಳಿಸಿದರು.

ಪುನರ್ವಸತಿ ಪ್ಯಾಕೇಜ್ ಪರಿಷ್ಕರಣೆ

ನಕ್ಸಲರನ್ನು ಮುಖ್ಯವಾಹಿನಿಗೆ ಕರೆತಂದು ಅವರಿಗೆ ಪುನರ್ವಸತಿ ಕಲ್ಪಿಸಲು ಈ ಮೊದಲು ಇದ್ದ ರಾಜ್ಯಮಟ್ಟದ ಸಮಿತಿ ಹಾಗೂ ಶರಣಾಗತಿ ಪ್ಯಾಕೇಜನ್ನು ರಾಜ್ಯ ಸರ್ಕಾರ ಪುನರ್‌ರಚಿಸಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ 10 ಜನರ ಸಮಿತಿಯಲ್ಲಿ ಹಿರಿಯ ಸಾಹಿತಿ ಬಂಜಗೆರೆ ಜಯಪ್ರಕಾಶ್ (ಮೊ. 9448233825) , ಪತ್ರಕರ್ತ ಪಾರ್ವತೀಶ ಬಿಳಿದಾಳೆ (9448380637) ಹಾಗೂ ವಕೀಲ ಕೆ.ಪಿ.ಶ್ರೀಪಾಲ್ (9448329757) ಸರ್ಕಾರೇತರ ಸದಸ್ಯರಾಗಿದ್ದಾರೆ. ಶರಣಾಗತಿ ಬಯಸುವವರು ಇವರನ್ನು ಸಂಪರ್ಕಿಸಬಹುದು. ನಕ್ಸಲ್ ನಿಗ್ರಹ ದಳದ ಡಿಜಿಪಿ ಈ ಸಮಿತಿಯ ಸಂಚಾಲಕರಾಗಿದ್ದಾರೆ.

ಪರಿಷ್ಕೃತ ಪ್ಯಾಕೇಜ್ ಅಡಿ ಶರಣಾಗುವ ನಕ್ಸಲರನ್ನು ಪ್ರವರ್ಗ ಎ,ಬಿ ಹಾಗೂ ಸಿ ಎಂದು ವರ್ಗೀಕರಿಸಲಾಗಿದೆ. ಕ್ರಮವಾಗಿ ₹ 7.5 ಲಕ್ಷ, ₹ 4 ಲಕ್ಷ ಹಾಗೂ ₹ 2 ಲಕ್ಷ ನಗದು ಪರಿಹಾರ ಮೊತ್ತ ನಿಗದಿಪಡಿಸಲಾಗಿದೆ. ಜೊತೆಗೆ ಅವರಿಗೆ ವೃತ್ತಿ ತರಬೇತಿಯನ್ನೂ ನೀಡಲಾಗುತ್ತದೆ.

ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶದ ಚುನಾವಣಾ ಅಖಾಡದಲ್ಲಿ ಸದ್ದು

ಸೇನೆ ಸೇರುವವರ ನಾಡಲ್ಲಿ ‘ಅಗ್ನಿಪಥ’ ಕಿಚ್ಚು

• ಮಂಜುನಾಥ ಹೆಬ್ಬಾರ್

ನವದೆಹಲಿ: ‘ಸೇನೆಗೆ ಸೇರಬೇಕು ಎಂಬುದು ನನ್ನ ಬಹುದಿನಗಳ ಕನಸಾಗಿತ್ತು. ಅದಕ್ಕಾಗಿ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದೆ. 2022ರ ಸೇನಾ ನೇಮಕಾತಿ ರ‍್ಯಾಲಿಯಲ್ಲಿ ಬಹುತೇಕ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿದ್ದೆ. ವೈದ್ಯಕೀಯ ಪರೀಕ್ಷೆಯೊಂದೇ ಬಾಕಿ ಇತ್ತು. ಅಗ್ನಿಪಥ ಯೋಜನೆಯ ಕಾರಣಕ್ಕೆ ಈ ನೇಮಕಾತಿ ಪ್ರಕ್ರಿಯೆಯನ್ನು ಏಕಾಏಕಿ ಸ್ಥಗಿತಗೊಳಿಸಲಾಗಿತ್ತು. ನನಗಾದ ಘೋರ ಅನ್ಯಾಯವನ್ನು ನೆನೆಸಿಕೊಂಡಾಗ ಕಣ್ಣೀರು ಬರುತ್ತದೆ’ ಎಂದು 30ರ ಹರೆಯದ ವಿನಯ್ ಶ್ರೀವಾಸ್ತವ ಹೇಳಿಕೊಂಡರು.

ರಾಷ್ಟ್ರ ರಾಜಧಾನಿಯಿಂದ 30 ಕಿ.ಮೀ ದೂರದಲ್ಲಿರುವ ಹರಿಯಾಣದ ಗುರುಗ್ರಾಮದ ಸಂಚಯ್ ಕೋಚಿಂಗ್ ಸೆಂಟರ್ ಸಮೀಪದಲ್ಲಿ ಸಿಕ್ಕ ಅವರು ತಮ್ಮ ಉದ್ಯೋಗ ಹುಡುಕಾಟದ ನೋವಿನ ಕಥೆಯನ್ನು ಬಿಚ್ಚಿಟ್ಟರು. ‘ಕೇಂದ್ರ ಸರ್ಕಾರದ ನಿರ್ಧಾರದಿಂದಾಗಿ ನಮ್ಮ ಕನಸು ನಾಶವಾಗಿದೆ. ಅಗ್ನಿಪಥ ಯೋಜನೆ ವಿರೋಧಿಸಿ ಯುವಜನರು ನಡೆಸಿದ ಹೋರಾಟಕ್ಕೂ ಕೇಂದ್ರ ಸರ್ಕಾರ ಕಿವಿಗೊಡಲಿಲ್ಲ. ಪ್ರತಿಭಟನಕಾರರನ್ನು ಅಪರಾಧಿಗಳಂತೆ ಬಿಂಬಿಸಲಾಯಿತು. ಮತ ಕೊಟ್ಟು ಗೆಲ್ಲಿಸಿದ ಯುವಜನರಿಗೆ ಬಿಜೆಪಿ ಅನ್ಯಾಯ ಮಾಡಿದೆ’ ಎಂದು ಕೋಪ ವ್ಯಕ್ತಪಡಿಸಿದರು. ‘ನಾಲ್ಕು ವರ್ಷಗಳ ಬಳಿಕ ಅಗ್ನಿವೀರರು ಎಲ್ಲಿಗೆ ಹೋಗಬೇಕು. ಮತ್ತೆ ಅವರು ನಗರಗಳಲ್ಲಿ ಕಾವಲುಗಾರರಾಗಿ ಕೆಲಸ ಮಾಡಬೇಕೇ’ ಎಂದು ಪ್ರಶ್ನಿಸಿದರು.

ಅವರು ಗುರುಗ್ರಾಮ ಸಮೀಪದ ಊರಿನ ನಿವಾಸಿ. ‘ಈಗ ಸಣ್ಣಪುಟ್ಟ ಕೆಲಸ ಮಾಡಿಕೊಂಡು ರಾಜ್ಯ ಸರ್ಕಾರ ನಡೆಸುವ ಪರೀಕ್ಷೆಗಳಿಗಾಗಿ ಸಿದ್ಧತೆ ನಡೆಸುತ್ತಿದ್ದೇನೆ. ಅದಕ್ಕೆ ಇಲ್ಲಿ ತರಬೇತಿ ಪಡೆಯುತ್ತಿದ್ದೇನೆ’ ಎಂದರು. ‘ಯುವಕರ ಭವಿಷ್ಯದ ಹಿತದೃಷ್ಟಿಯಿಂದ ಈ ಯೋಜನೆಯನ್ನು ರದ್ದುಪಡಿಸಲೇಬೇಕು’ ಎಂಬುದು ಅವರ ನುಡಿ.

‘ಅಗ್ನಿಪಥ ಯೋಜನೆಯನ್ನು ರದ್ದುಪಡಿಸುವುದಾಗಿ ವಿರೋಧ ಪಕ್ಷಗಳ ನಾಯಕರು ಘೋಷಿಸಿದ್ದಾರೆ. ಇದು ಆಗಬೇಕಾದ ಕೆಲಸ. ಜತೆಗೆ, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಗಂಭೀರ ಉಪಕ್ರಮಗಳನ್ನು ಕೈಗೊಳ್ಳಬೇಕು. ಯುವಕರ ಭವಿಷ್ಯದ ಜತೆಗೆ ಚೆಲ್ಲಾಟವಾಡಿದ ಪಕ್ಷಕ್ಕೆ ಈ ಸಲ ಮತ ಇಲ್ಲ’ ಎಂದು ಅವರು ಸ್ಪಷ್ಟವಾಗಿ ಹೇಳಿದರು.

‘ಗಡಿ ಪ್ರದೇಶ ಹಾಗೂ ಗುಡ್ಡಗಾಡು ಪ್ರದೇಶದ ಜನರು ದೈಹಿಕ ಸಾಮರ್ಥ್ಯಕ್ಕೆ ಹೆಸರುವಾಸಿ. ಸೇನೆಗೆ ಸೇರಬೇಕು ಎಂಬುದು ಇಲ್ಲಿನ ಹೆಚ್ಚಿನ ಯುವಜನರ ಕನಸು. ಬಿಜೆಪಿಯ ಚುನಾವಣಾ ಕಾರ್ಯಸೂಚಿಯಲ್ಲಿ ಈ ವಿಷಯದ ಪ್ರಸ್ತಾಪವೇ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜತೆಗಿದ್ದ ಯುವಕ ಸುಭಾಷ್ ಅವರು ಮಿತ್ರನ ಮಾತನ್ನು ಒಪ್ಪಲಿಲ್ಲ. ‘ರಾಷ್ಟ್ರೀಯತೆ ಪರ ಇರುವವರಿಗೆ ಈ ಸಲವೂ ನನ್ನ ಮತ ಹಾಕುತ್ತೇನೆ. ಆದರೆ, ಯುವಜನರ ಉದ್ಯೋಗ ಹಕ್ಕುಗಳನ್ನು ಕಸಿದುಕೊಂಡಿದ್ದು ತಪ್ಪು. ಮುಂದಿನ ದಿನಗಳಲ್ಲಿ ಬಿಜೆಪಿ ಇಂತಹ ಲೋಪಗಳನ್ನು ಎಸಗುವುದಿಲ್ಲ ಎಂಬ ವಿಶ್ವಾಸ ಇದೆ’ ಎಂದು ಹೇಳಿಕೊಂಡರು.

ಸೇನಾ ನೇಮಕಾತಿ ರ‍್ಯಾಲಿಗಳಲ್ಲಿ ಹರಿಯಾಣ, ಪಂಜಾಬ್ ಹಾಗೂ ಹಿಮಾಚಲ ಪ್ರದೇಶದ ಜನರು ಹೆಚ್ಚು ನೇಮಕವಾಗುತ್ತಾರೆ. 2019–20ರಲ್ಲಿ ಕೊನೆಯ ಬಾರಿಗೆ ಸೇನಾ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಆ ವರ್ಷ 78,692 ಮಂದಿ ನೇಮಕಗೊಂಡಿದ್ದರು. ಈ ಮೂರು ರಾಜ್ಯಗಳಿಂದ 18,792 ಮಂದಿ ಸೇನೆಗೆ ಸೇರಿದ್ದರು. ಅಂದರೆ, ಶೇ 25ರಷ್ಟು ಜನರು ಈ ರಾಜ್ಯಗಳಿಂದಲೇ ನೇಮಕವಾಗಿದ್ದರು. ಅಗ್ನಿಪಥ ಯೋಜನೆಯಡಿ ಅಗ್ನಿವೀರರ ನೇಮಕಾತಿ ಪ್ರಕ್ರಿಯೆ ವಿರೋಧಿಸಿ 2022ರಲ್ಲಿ ಭಾರಿ ಪ್ರತಿಭಟನೆಗಳು ನಡೆದಿದ್ದವು. ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಪ್ರತಿಭಟನೆಯ ಕಿಚ್ಚು ದೊಡ್ಡ ಪ್ರಮಾಣದಲ್ಲಿ ಹಬ್ಬಿತ್ತು. ಹರಿಯಾಣ, ಪಂಜಾಬ್ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಇದು ಪ್ರಮುಖ ಚುನಾವಣಾ ವಿಷಯವಾಗಿದೆ. ಅಗ್ನಿಪಥ ಯೋಜನೆಯನ್ನು ಕಿತ್ತೆಸೆದು ಹಳೆಯ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ಕಾಂಗ್ರೆಸ್ ನಾಯಕರು ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಮುಖವಾಗಿ ಭರವಸೆ ನೀಡುತ್ತಿದ್ದಾರೆ. ಈ ವಿಷಯವು ಬಿಜೆಪಿ ಹಾಗೂ ವಿರೋಧ ಪಕ್ಷಗಳ ನಾಯಕರ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಕೋಚಿಂಗ್ ಅಕಾಡೆಮಿಯ ಉದ್ಯೋಗಿ ಸುಧೀರ್ ಸಿಂಗ್, ‘ಬಡ ಕುಟುಂಬಗಳ ಯುವಜನರಿಗೆ ಸೇನೆಯೇ ದೊಡ್ಡ ಆಶಾಕಿರಣವಾಗಿತ್ತು. ಸೇನೆಗೆ ಸೇರಲು ಸಿದ್ಧತೆ ಮಾಡಿಕೊಳ್ಳಲು ದೊಡ್ಡಮಟ್ಟದ ಖರ್ಚೂ ಆಗುತ್ತಿರಲಿಲ್ಲ. ಅವರು ಈಗ ಬೇರೆ ಸರ್ಕಾರಿ ಉದ್ಯೋಗಗಳತ್ತ ಗಮನ ಹರಿಸುತ್ತಿದ್ದಾರೆ. ನಮ್ಮಲ್ಲಿ ಕೋಚಿಂಗ್ ಪಡೆಯುವವರ ಸಂಖ್ಯೆ ಹೆಚ್ಚಾಗುರುವುದೇ ಇದಕ್ಕೆ ಸಾಕ್ಷಿ’ ಎಂದು ಹೇಳಿದರು.

‘ಅಗ್ನಿಪಥ’ ಯೋಜನೆ ವಿರೋಧಿಸಿ 2022ರ ಜುಲೈನಲ್ಲಿ ಶಿಮ್ಲಾದಲ್ಲಿ ನಡೆದಿದ್ದ ಪ್ರತಿಭಟನೆಯ ನೋಟ



ಮನೆ ಮನೆಗೆ ಯುವ ಕಾಂಗ್ರೆಸ್ ಅಭಿಯಾನ

ಅಗ್ನಿಪಥ ಯೋಜನೆ ರದ್ದುಪಡಿಸುವುದು ಸೇರಿದಂತೆ ಕಾಂಗ್ರೆಸ್‌ನ 25 ಗ್ಯಾರಂಟಿಗಳ ಬಗ್ಗೆ ಮಾಹಿತಿ ನೀಡಲು ರಾಷ್ಟ್ರೀಯ ಯುವ ಕಾಂಗ್ರೆಸ್ ಘಟಕವು ಸಹಾಯವಾಣಿ ಆರಂಭಿಸಿತ್ತು. ಇದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿತ್ತು. ಜತೆಗೆ, ಈ ವಿಷಯವನ್ನು ಚುನಾವಣಾ ಆಯೋಗದ ಗಮನಕ್ಕೆ ತಂದಿತ್ತು. ಸಹಾಯವಾಣಿಯನ್ನು ನಿಲ್ಲಿಸುವಂತೆ ಯುವ ಕಾಂಗ್ರೆಸ್‌ಗೆ ಆಯೋಗ ಸೂಚಿಸಿದೆ. ಇದೀಗ ಮೂರು ರಾಜ್ಯಗಳಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಮನೆ ಮನೆ ಅಭಿಯಾನ ನಡೆಸುತ್ತಿದ್ದಾರೆ.

‘ಸೇನಾ ನೇಮಕಾತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ನೇಮಕಾತಿ ಪತ್ರಕ್ಕಾಗಿ ಕಾಯುತ್ತಿರುವ 1.5 ಲಕ್ಷ ಯುವಜನರಿಗಾಗಿ ರಾಹುಲ್ ಗಾಂಧಿ ಅವರು ಜೈ ಜವಾನ್ ಅಭಿಯಾನ ಆರಂಭಿಸಿದ್ದಾರೆ. ಇದರ ಭಾಗವಾಗಿ ‘ಯುವ ನ್ಯಾಯ’ದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ನಾವು ಮನೆ ಮನೆ ಅಭಿಯಾನ ನಡೆಸುತ್ತಿದ್ದೇವೆ’ ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಹೇಳಿದರು.

ಚುಟುಕು

ಸಿ.ಎಂ ಶಿಂದೆ ಬ್ಯಾಗ್ ಪರಿಶೀಲನೆ

ನಾಸಿಕ್ (ಪಿಟಿಐ): ಚುನಾವಣಾ ಪ್ರಚಾರಕ್ಕಾಗಿ ಇಲ್ಲಿನ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಬ್ಯಾಗ್ ಅನ್ನು ಅಧಿಕಾರಿಗಳು ಗುರುವಾರ ಪರಿಶೀಲಿಸಿದರು.

ಶಿಂದೆ ಅವರ ಬ್ಯಾಗ್‌ನಲ್ಲಿ ಯಾವುದೇ ಆಕ್ಷೇಪಾರ್ಹ ವಸ್ತುಗಳು ಕಂಡುಬಂದಿಲ್ಲ ಎಂದು ಬಳಿಕ ಚುನಾವಣಾ ಅಧಿಕಾರಿಗಳು ತಿಳಿಸಿದರು.

ಏಕನಾಥ ಶಿಂದೆ ಅವರು ಪ್ರಯಾಣಿಸುವ ಹೆಲಿಕಾಪ್ಟರ್‌ನಲ್ಲಿ ಹಣದ ಬ್ಯಾಗ್‌ಗಳನ್ನು ಕೊಂಡೊಯ್ಯಲಾಗುತ್ತಿದೆ ಎಂದು ಶಿವಸೇನಾ ಉದ್ಧವ್ ಠಾಕ್ರೆ ಬಣದ ಮುಖಂಡ ಸಂಜಯ್ ರಾವುತ್ ಅವರು ಆರೋಪಿಸಿದ ಮರುದಿನ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಶಿಂದೆ ಅವರು ಪ್ರಯಾಣಿಸಿದ್ದ ಹೆಲಿಕಾಪ್ಟರ್‌ನಿಂದ ಕೆಲವು ವ್ಯಕ್ತಿಗಳು ದೊಡ್ಡ ಬ್ಯಾಗ್‌ಗಳನ್ನು ಸಾಗಿಸುತ್ತಿರುವ ದೃಶ್ಯವಿರುವ ವಿಡಿಯೊವನ್ನೂ ರಾವುತ್ ಅವರು ‘ಎಕ್ಸ್’ ವೇದಿಕೆಯಲ್ಲಿ ಹಂಚಿಕೊಂಡಿದ್ದರು.

‘ನನ್ನ ಬಳಿ ಇದ್ದ ಬ್ಯಾಗ್‌ನಲ್ಲಿ ಬಟ್ಟೆಗಳಿದ್ದವು’ ಎಂದು ಏಕನಾಥ ಶಿಂದೆ ತಿಳಿಸಿದರು. ಪಕ್ಷದ ಅಭ್ಯರ್ಥಿ ಹೇಮಂತ್ ಗೋಡ್ಸೆ ಪರ ಪ್ರಚಾರಕ್ಕಾಗಿ ಶಿಂದೆ ಅವರು ಹೆಲಿಕಾಪ್ಟರ್‌ನಲ್ಲಿ ನಾಸಿಕ್‌ಗೆ ಬಂದಿದ್ದರು.

ನಾಲ್ಕು ಹಂತ: ಶೇ 67 ಮತದಾನ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಮೊದಲ ನಾಲ್ಕು ಹಂತಗಳಲ್ಲಿ ಒಟ್ಟಾರೆ ಶೇ 66.95ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗವು ಗುರುವಾರ ಹೇಳಿದೆ.

ಅಂದಾಜು 97 ಕೋಟಿ ಮತದಾರರಲ್ಲಿ 45.10 ಕೋಟಿ ಜನರು ಮತ ಚಲಾಯಿಸಿದ್ದಾರೆ ಎಂದೂ ವಿವರಿಸಿದೆ.

ಮೇ 13ರಂದು ನಡೆದಿದ್ದ ನಾಲ್ಕನೇ ಹಂತದಲ್ಲಿ ಶೇ 69.16ರಷ್ಟು ಮತದಾನವಾಗಿದ್ದು, 2019ರ ಚುನಾವಣೆಗೆ ಹೋಲಿಸಿದರೆ ಶೇ 3.65ರಷ್ಟು ಹೆಚ್ಚಳವಾಗಿದೆ ಎಂದು ಆಯೋಗವು ಹೇಳಿಕೆಯಲ್ಲಿ ತಿಳಿಸಿದೆ.

ಮೂರನೇ ಹಂತದಲ್ಲಿ ಶೇ 65.68ರಷ್ಟು ಮತದಾನವಾಗಿದ್ದು, 2019ರ ಸಾರ್ವತ್ರಿಕ ಚುನಾವಣೆಯ ಮೂರನೇ ಹಂತದಲ್ಲಿ ಶೇ 68.4ರಷ್ಟು ಮತದಾನವಾಗಿತ್ತು. ಏಪ್ರಿಲ್ 26ರಂದು ನಡೆದಿದ್ದ ಎರಡನೇ ಹಂತದಲ್ಲಿ ಶೇ 66.71ರಷ್ಟು ಮತದಾನವಾಗಿದೆ. 2019ರ ಚುನಾವಣೆಯ ಎರಡನೇ ಹಂತದಲ್ಲಿ ಶೇ 69.64ರಷ್ಟು ಮತದಾನವಾಗಿತ್ತು ಎಂದೂ ವಿವರಿಸಿದೆ.

ಈ ಬಾರಿ ಮೊದಲ ಹಂತದಲ್ಲಿ ಶೇ 66.14ರಷ್ಟು ಮತದಾನವಾಗಿದ್ದು, 2019ರಲ್ಲಿ ಮೊದಲ ಹಂತದಲ್ಲಿ ಶೇ 69.43ರಷ್ಟು ಮತದಾನವಾಗಿತ್ತು ಎಂದಿದೆ.

23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 379 ಕ್ಷೇತ್ರಗಳಿಗೆ ಮೊದಲ ನಾಲ್ಕು ಹಂತಗಳಲ್ಲಿ ಮತದಾನ ನಡೆದಿದೆ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ಹೇಳಿಕೆ ಸುಳ್ಳು: ಚಿದಂಬರಂ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಬಜೆಟ್‌ನಲ್ಲಿ ಶೇ 15ರಷ್ಟು ಮೊತ್ತವನ್ನು ಮುಸ್ಲಿಮರಿಗೆ ಮೀಸಲಿಡಲು ಬಯಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿರುವುದು ಶುದ್ಧ ಸುಳ್ಳು ಎಂದು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಅವರು ಗುರುವಾರ ಹೇಳಿದರು. ಹಿಂದೂ ಮತ್ತು ಮುಸ್ಲಿಮರನ್ನು ವಿಭಜಿಸುವ ಹೇಳಿಕೆ ನೀಡಿದ್ದರೆ ನಾನು ಸಾರ್ವಜನಿಕ ಜೀವನದಲ್ಲಿರಲು ಯೋಗ್ಯನಲ್ಲ ಎಂದು ಪ್ರಧಾನಿ ಈಚೆಗೆ ಹೇಳಿದ್ದರು. ಅದರ ಮರುದಿನವೇ ಮತ್ತೆ ಹಿಂದೂ ಮತ್ತು ಮುಸ್ಲಿಮರನ್ನು ವಿಭಜಿಸುವ ಹೇಳಿಕೆಗಳನ್ನು ನೀಡಿದ್ದಾರೆ ಎಂದು ದೂರಿದರು.

‘ಮೋದಿ ಅವರ ಹೇಳಿಕೆಗಳು ಅತ್ಯಂತ ವಿಚಿತ್ರವಾಗಿವೆ. ಅವರಿಗೆ ಭಾಷಣ ಬರೆದುಕೊಡುವವರು ಹಳಿ ತಪ್ಪಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಆರೋಪಿಸಿದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಸ್ಲಿಂ ಬಜೆಟ್ ಮತ್ತು ಹಿಂದೂ ಬಜೆಟ್ ಮಂಡಿಸಲಿದೆ ಎಂದು ಮೋದಿ ಅವರು ಹೇಳಿರುವುದಕ್ಕೆ ಪ್ರತಿಕ್ರಿಯಿಸಿರುವ ಚಿದಂಬರಂ, ‘ಸಂವಿಧಾನದ 112ನೇ ವಿಧಿಯ ಪ್ರಕಾರ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿ ಮಾತ್ರ ಬಜೆಟ್ ಮಂಡಿಸಬಹುದಾಗಿದೆ. ಹೀಗಿರುವಾಗ ಎರಡು ಬಜೆಟ್ ಮಂಡಿಸಲು ಸಾಧ್ಯವೇ’ ಎಂದು ಪ್ರಶ್ನಿಸಿದರು. ಮೋದಿ ಅವರ ಮಾತುಗಳನ್ನು ಕೇವಲ ಭಾರತೀಯರು ಮಾತ್ರ ಆಲಿಸುತ್ತಿಲ್ಲ. ಇಡೀ ಜಗತ್ತೇ ಕೇಳಿಸುತ್ತಿದೆ ಮತ್ತು ಅದನ್ನು ವಿಶ್ಲೇಷಿಸುತ್ತಿದೆ. ಇದು ದೇಶಕ್ಕೆ ಕೀರ್ತಿ ತರದು ಎಂದೂ ಹೇಳಿದರು.

ಸುಳ್ಳು ಹಬ್ಬಿಸಿದ ವಿಪಕ್ಷಗಳು: ಪ್ರಧಾನಿ ಮೋದಿ ಟೀಕೆ

ಸಿಎಎ ರದ್ದು ಸಾಧ್ಯವಿಲ್ಲ

ಆಜಂಗಢ/ ಜೌನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಬಗ್ಗೆ ವಿರೋಧ ಪಕ್ಷಗಳು ಸುಳ್ಳು ಹರಡುತ್ತಿವೆ ಎಂದು ಆರೋಪಿಸಿದ ಪ್ರಧಾನಿ ನರೇಂದ್ರ ಮೋದಿ, ‘ಸಿಎಎ ರದ್ದುಗೊಳಿಸಲು ಯಾರಿಗೂ ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು.

ಉತ್ತರ ಪ್ರದೇಶದ ಆಜಂಗಢದಲ್ಲಿ ಗುರುವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಮೋದಿ, ‘ಸಿಎಎ ಅಡಿಯಲ್ಲಿ ಪೌರತ್ವ ನೀಡುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಪೌರತ್ವ ಪಡೆದವರು ಹಿಂದೂ, ಸಿಖ್, ಜೈನ ಮತ್ತು ಬೌದ್ಧ ಸಮುದಾಯಕ್ಕೆ ಸೇರಿದವರು. ಅವರು ಈ ದೇಶದಲ್ಲಿ ಸುದೀರ್ಘ ಸಮಯದಿಂದ ನಿರಾಶ್ರಿತರಾಗಿಯೇ ಇದ್ದರು’ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಇಷ್ಟು ವರ್ಷಗಳ ಕಾಲ ನಿರಾಶ್ರಿತರನ್ನು ಕಡೆಗಣಿಸಿದೆ ಎಂದ ಅವರು, ‘ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು (ಎಸ್‌ಪಿ) ಸಿಎಎ ಹೆಸರಿನಲ್ಲಿ ಸುಳ್ಳುಗಳನ್ನು ಹಬ್ಬಿಸಿದವು. ಉತ್ತರ ಪ್ರದೇಶ ಸೇರಿದಂತೆ ಇಡೀ ದೇಶದಲ್ಲಿ ದಂಗೆ ಎಬ್ಬಿಸಲು ಪ್ರಯತ್ನಿಸಿದವು’ ಎಂದು ವಾಗ್ದಾಳಿ ನಡೆಸಿದರು.

‘ನೀವು ಮೋಸಗಾರರು... ದೇಶವನ್ನು ಕೋಮುವಾದದ ಬೆಂಕಿಯಲ್ಲಿ ಸುಡುವಂತೆ ಮಾಡಿದ್ದೀರಿ’ ಎಂದು ಹೆಸರು ಹೇಳದೆಯೇ ವಿರೋಧ ಪಕ್ಷಗಳನ್ನು ಟೀಕಿಸಿದ ಪ್ರಧಾನಿ, ‘ಸಿಎಎ ಅಡಿಯಲ್ಲಿ ಸಾವಿರಾರು ಮಂದಿ ನಿರಾಶ್ರಿತರು ಭಾರತದ ಪೌರತ್ವ ಪಡೆಯಲಿದ್ದಾರೆ’ ಎಂದು ತಿಳಿಸಿದರು.

ಸಂವಿಧಾನದ 370ನೇ ವಿಧಿ ಬಗ್ಗೆ ಮಾತನಾಡಿ, ‘ಕಾಶ್ಮೀರದಲ್ಲಿ ಈಚೆಗೆ ಮತದಾನ ನಡೆದಾಗ ಜನರು ಪ್ರಜಾಪ್ರಭುತ್ವದ ಹಬ್ಬದಲ್ಲಿ ಬಹಳ ಸಂಭ್ರಮದಿಂದ ಪಾಲ್ಗೊಂಡರು. 370 ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ಮರಳಿ ತರಲು ಮತ್ತು ವೋಟ್ ಬ್ಯಾಂಕ್ ರಾಜಕೀಯ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂಬುದಕ್ಕೆ ಶ್ರೀನಗರದ ಜನರು ಮತದಾನದ ವೇಳೆ ತೋರಿದ ಉತ್ಸಾಹವೇ ಸಾಕ್ಷಿ’ ಎಂದು ಹೇಳಿದರು.

ಆಜಂಗಢದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ ಅವರು ಜನರತ್ತ ಕೈಬೀಸಿದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪ್ರಧಾನಿ ಮಾತು...

- ದೇಶದ ಯಾವುದೇ ಭಾಗದಲ್ಲಿ ಬಾಂಬ್ ಸ್ಫೋಟ ನಡೆದರೂ ಜನರು ಉತ್ತರ ಪ್ರದೇಶದ ಆಜಂಗಢವನ್ನು ನೆನಪಿಸುತ್ತಿದ್ದರು. ಆದರೆ ಕಳೆದ ಹತ್ತು ವರ್ಷಗಳಲ್ಲಿ ಆಜಂಗಢ ಚಿತ್ರಣವೇ ಬದಲಾಗಿದೆ.
- ಎಸ್‌ಪಿ ಆಡಳಿತದಲ್ಲಿ ಉತ್ತರ ಪ್ರದೇಶದಲ್ಲಿ ‘ಗೂಂಡಾ ರಾಜ್’ ಇತ್ತು. ಯೋಗಿ ಆದಿತ್ಯನಾಥ ಅವರು ಮಾಫಿಯಾ, ದಂಗೆಕೋರರು ಮತ್ತು ಸುಲಿಗೆಕೋರರ ವಿರುದ್ಧ ಹೋರಾಟ ನಡೆಸಿ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ಮರಳಿ ಸ್ಥಾಪಿಸಿದರು.
- ಈ ಲೋಕಸಭಾ ಚುನಾವಣೆಯು ‘ಭಾರತದ ಶಕ್ತಿಯನ್ನು ಜಗತ್ತಿಗೆ ತಿಳಿಯಪಡಿಸುವ’ ಬಲಿಷ್ಠ ಸರ್ಕಾರವನ್ನು ಮುನ್ನಡೆಸಬಲ್ಲ ನಾಯಕನ ಆಯ್ಕೆ ಮಾಡಲು ಮತದಾರರಿಗೆ ಲಭಿಸಿದ ಒಂದು ಅವಕಾಶ.
- ಒಂದು ಬಲಿಷ್ಠ ಸರ್ಕಾರ ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಾಶಿ ಮತ್ತು ಅಯೋಧ್ಯೆಯನ್ನು ನೋಡಿದಾಗ ನಿಮಗೆ ತಿಳಿಯುತ್ತದೆ.
- ಕಾಂಗ್ರೆಸ್ ಮತ್ತು ಎಸ್‌ಪಿ, ಉತ್ತರ ಪ್ರದೇಶದಲ್ಲಿ ‘ಟಿಎಂಸಿ ಮಾದರಿ ರಾಜಕಾರಣ’ ಮಾಡಲು ಪ್ರಯತ್ನಿಸುತ್ತಿವೆ. ಟಿಎಂಸಿ ರಾಜಕಾರಣ ಎಂದರೆ ಹಿಂದೂಗಳ ಕೊಲೆ, ದಲಿತರು ಮತ್ತು ಆದಿವಾಸಿಗಳಿಗೆ ಕಿರುಕುಳ ನೀಡುವುದು ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಎಸಗುವುದು ಆಗಿದೆ.
- ಅಮೇಠಿಯನ್ನು ಕಳೆದುಕೊಂಡಿರುವ ಕಾಂಗ್ರೆಸ್ ಈ ಬಾರಿ ರಾಯ್‌ಬರೇಲಿಯಲ್ಲೂ ಸೋಲಲಿದೆ.

ಮೋದಿಗೆ ಸಹಾಯ ಮಾಡಿದ್ದೆ: ಪವಾರ್

ಮುಂಬೈ: ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ವೇಳೆ ಅವರಿಗೆ ಸಹಾಯ ಮಾಡಿದ್ದೆ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಗುರುವಾರ ಹೇಳಿದರು.

‘ಮೋದಿ ಅವರು ನನಗೆ ಪತ್ರ ಬರೆಯುತ್ತಿದ್ದರು ಮತ್ತು ನಾನು ಕೃಷಿ ಕ್ಷೇತ್ರ ಎದುರಿಸುತ್ತಿದ್ದ ಬಿಕ್ಕಟ್ಟನ್ನು ಪರಿಹರಿಸಲು ಅವರಿಗೆ ಸಹಾಯ ಮಾಡುತ್ತಿದ್ದೆ’ ಎಂದು ಪವಾರ್ ಸುದ್ದಿಗಾರರಿಗೆ ವಿವರಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಶರದ್ ಪವಾರ್ ಅವರು ಕೃಷಿ ಸಚಿವರಾಗಿದ್ದರು. ಮೋದಿ ಅವರು ಚುನಾವಣಾ ರ‍್ಯಾಲಿಗಳಲ್ಲಿ ಶರದ್ ಪವಾರ್ ಅವರನ್ನು ಸತತವಾಗಿ ಟೀಕಿಸುತ್ತಿದ್ದಾರೆ.

ಕೇಜ್ರಿವಾಲ್‌ಗೆ ಮಾನಸಿಕ ಸ್ಥಿಮಿತ ತಪ್ಪಿದೆ: ಯೋಗಿ

ಬಾಂದಾ (ಉತ್ತರ ಪ್ರದೇಶ) (ಪಿಟಿಐ): ಜೈಲಿಗೆ ಹೋಗಿ ಬಂದ ಬಳಿಕ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

‘ಬಿಜೆಪಿಯು ಅಧಿಕಾರಕ್ಕೆ ಬಂದರೆ ಆದಿತ್ಯನಾಥ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕಿಳಿಸಲಾಗುತ್ತದೆ’ ಎಂಬ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದ್ದಾರೆ.

‘ಅಣ್ಣಾ ಹಜಾರೆ ಇಟ್ಟಿದ್ದ ಭರವಸೆಯನ್ನು ಕೇಜ್ರಿವಾಲ್ ಛಿದ್ರಗೊಳಿಸಿದ್ದಾರೆ. ಭ್ರಷ್ಟರ ಪರ ನಿಂತಿರುವ ಅವರು ಇದೀಗ ನನ್ನನ್ನು ಗುರಿಯಾಗಿಸುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಇಂಡಿಯಾ ಕೂಟದ ಜತೆಗಿದ್ದೇವೆ’

ತಾಮ್ಲುಕ್ (ಪಶ್ಚಿಮ ಬಂಗಾಳ) (ಪಿಟಿಐ): ಟಿಎಂಸಿಯು ರಾಜ್ಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದರೂ, ರಾಷ್ಟ್ರಮಟ್ಟದಲ್ಲಿ ‘ಇಂಡಿಯಾ’ ಒಕ್ಕೂಟದ ಜತೆಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಟಿಎಂಸಿಯು ‘ಇಂಡಿಯಾ’ ಒಕ್ಕೂಟಕ್ಕೆ ಬಾಹ್ಯ ಬೆಂಬಲ ನೀಡಲಿದೆ ಎಂದು ಹೇಳಿಕೆ ನೀಡಿದ್ದ ಮರುದಿನ ಅವರು ಈ ಸ್ಪಷ್ಟನೆ ಕೊಟ್ಟಿದ್ದಾರೆ.

ತಾಮ್ಲುಕ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿ, ‘ನಾನು ಕಳೆದ ದಿನ ನೀಡಿದ್ದ ಹೇಳಿಕೆಯನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ‘ಇಂಡಿಯಾ’ ಒಕ್ಕೂಟವು ನನ್ನ ಚಿಂತನೆಯ ಫಲ ಆಗಿದೆ. ರಾಷ್ಟ್ರಮಟ್ಟದಲ್ಲಿ ನಾವು ಜತೆಯಾಗಿದ್ದು, ಮುಂದೆಯೂ ಒಟ್ಟಾಗಿರುತ್ತೇವೆ’ ಎಂದು ತಿಳಿಸಿದರು.

ಆದರೆ ಸಿಪಿಎಂ ಮತ್ತು ಕಾಂಗ್ರೆಸ್‌ನ ಬಂಗಾಳದ ರಾಜ್ಯ ಘಟಕಗಳು ಬಿಜೆಪಿ ಜತೆ ಕೈಜೋಡಿಸಿವೆ ಎಂದು ಆರೋಪಿಸಿದ ಅವರು, ‘ಸಿಪಿಎಂ ಮತ್ತು ಕಾಂಗ್ರೆಸ್‌ನವರು ಬಂಗಾಳದಲ್ಲಿ ನಮ್ಮ ಜತೆ ಇಲ್ಲ. ಅವರು ಬಿಜೆಪಿ ಜತೆ ಇದ್ದಾರೆ’ ಎಂದರು.

ಮಮತಾ ಅವಕಾಶವಾದಿ: ಅಧೀರ್

ಕೋಲ್ಕತ್ತ: ‘ರಾಷ್ಟ್ರ ರಾಜಕಾರಣದಲ್ಲಿ ತಮ್ಮ ಪ್ರಸ್ತುತತೆ ಕಾಪಾಡಿಕೊಳ್ಳಲಿಕ್ಕಾಗಿ ಮಮತಾ ಅವರು ಇಂಡಿಯಾ ಒಕ್ಕೂಟವನ್ನು ಬೆಂಬಲಿಸುತ್ತಿದ್ದಾರೆ’ ಎಂದು ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಟೀಕಿಸಿದ್ದಾರೆ.

‘ಇಂಡಿಯಾ ಕೂಟವು ಕೇಂದ್ರದಲ್ಲಿ ಸರ್ಕಾರ ರಚಿಸುವತ್ತ ದಿಟ್ಟ ಹೆಜ್ಜೆಯಿಟ್ಟಿದೆ. ಈ ಕಾರಣದಿಂದ ಕುಟಿಲ ಹಾಗೂ ಅವಕಾಶವಾದಿ ನಾಯಕಿ ಮಮತಾ ಅವರು ಇಂಡಿಯಾ ಕೂಟಕ್ಕೆ ಬೆಂಬಲ ನೀಡಲು ನಿರ್ಧರಿಸಿದ್ದಾರೆ’ ಎಂದರು.

ಜಮ್ಮು ಮತ್ತು ಕಾಶ್ಮೀರದ ಅನಂತನಾಗ್– ರಜೌರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರ ಪರವಾಗಿ ಪುತ್ರಿ ಇಲ್ತಿಜಾ ಮುಫ್ತಿ ಪೂಂಛ್ ಜಿಲ್ಲೆಯಲ್ಲಿ ಪ್ರಚಾರ ಕೈಗೊಂಡರು –ಪಿಟಿಐ ಚಿತ್ರ

ಎಂಥಾ ಮಾತು!



ಬೃಹತ್ ಜಾಹೀರಾತು ಫಲಕ ಕುಸಿದು 16 ಮಂದಿ ಮೃತಪಟ್ಟಿರುವ ಪ್ರದೇಶದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ರೋಡ್ ಶೋ ನಡೆಸಿರುವುದು ಅಮಾನವೀಯ ವರ್ತನೆ. ಘಾಟ್‌ಕೋಪರ್ ಪಶ್ಚಿಮದಿಂದ ಪೂರ್ವ ಘಾಟ್‌ಕೋಪರ್‌ವರೆಗೆ ಪ್ರಧಾನಿ ಅವರು ರೋಡ್ ಶೋ ನಡೆಸುವುದರಿಂದ ಬುಧವಾರದಿಂದಲೇ ಮೆಟ್ರೊ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ರಸ್ತೆಯಲ್ಲಿ ವಾಹನಗಳ ಸಂಚಾರವನ್ನೂ ನಿರ್ಬಂಧಿಸಲಾಗಿತ್ತು. ಒಬ್ಬ ವ್ಯಕ್ತಿಯ ಪ್ರಚಾರಕ್ಕಾಗಿ ಇಲ್ಲಿ ಹಿಂದೆಂದೂ ರಸ್ತೆ ಬಂದ್ ಮಾಡಿರಲಿಲ್ಲ. ಇದರಿಂದ ಜನರು ತೊಂದರೆ ಅನುಭವಿಸಿದ್ದಾರೆ

ಸಂಜಯ್ ರಾವುತ್, ಶಿವಸೇನಾ ಉದ್ಧವ್ ಠಾಕ್ರೆ ಬಣ



ದೇಶವು ಪ್ರಬಲ ಪ್ರಧಾನಿಯನ್ನು ಬಯಸುತ್ತಿದೆ. ವರ್ಷಕೊಬ್ಬ ಪ್ರಧಾನಿಯನ್ನು ಬಯಸುವುದಿಲ್ಲ. ‘ಇಂಡಿಯಾ’ ಒಕ್ಕೂಟಕ್ಕೆ ಪ್ರಧಾನಿ ಅಭ್ಯರ್ಥಿಯೇ ಇಲ್ಲ. ನರೇಂದ್ರ ಮೋದಿ ಅವರನ್ನು ಮೂರನೇ ಬಾರಿ ಪ್ರಧಾನಿಯಾಗಿಸಲು ದೇಶವು ನಿರ್ಧರಿಸಿದೆ. ‘ಇಂಡಿಯಾ’ ಒಕ್ಕೂಟವು ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರದು. ಒಂದು ವೇಳೆ ಬಂದರೆ ಮಮತಾ ಬ್ಯಾನರ್ಜಿ, ಎಂ.ಕೆ.ಸ್ಟಾಲಿನ್ ಅಥವಾ ಲಾಲು ಪ್ರಸಾದ್ ಇವರಲ್ಲಿ ಯಾರು ಪ್ರಧಾನಿಯಾಗುತ್ತಾರೆ? ದೇಶ ನಡೆಸುವುದು ದಿನಸಿ ಅಂಗಡಿ ನಡೆಸಿದಂತಲ್ಲ. ಕೋವಿಡ್‌ನಂತಹ ಸನ್ನಿವೇಶ ಮತ್ತೆ ಎದುರಾದರೆ ಅವರು ದೇಶವನ್ನು ಕಾಪಾಡಬಹುದೇ?

ಅಮಿತ್ ಶಾ, ಕೇಂದ್ರ ಗೃಹಸಚಿವ

ಕ್ಷೇತ್ರ ಮಹಾತ್ಮೆ

ಕೈಸರ್‌ಗಂಜ್ (ಉತ್ತರ ಪ್ರದೇಶ)



ಉತ್ತರ ಪ್ರದೇಶದ ಅಯೋಧ್ಯೆಯ ನೆರೆಯ ಲೋಕಸಭಾ ಕ್ಷೇತ್ರವಾದ ಕೈಸರ್‌ಗಂಜ್‌ನಲ್ಲಿ ಚುನಾವಣಾ ಕಾವು ಏರಿಕೆಯಾಗಿದ್ದು, ಈ ಬಾರಿಯೂ ಘಟಾನುಘಟಿಗಳೇ ಕಣದಲ್ಲಿದ್ದಾರೆ. ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಅವರ ಪುತ್ರ ಕರಣ್ ಭೂಷಣ್ ಸಿಂಗ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಇವರಿಗೆ ಪೈಪೋಟಿ ನೀಡಲು ಸಮಾಜವಾದಿ ಪಕ್ಷವು ರಾಮ್ ಭಗತ್ ಮಿಶ್ರಾ ಅವರನ್ನು ಅಖಾಡಕ್ಕಿಳಿಸಿದೆ. ಬಿಎಸ್‌ಪಿಯು ನರೇಂದ್ರ ಪಾಂಡೆ ಅವರನ್ನು ಅಭ್ಯರ್ಥಿಯಾಗಿಸಿದೆ. 2019ರ ಚುನಾವಣೆಯಲ್ಲಿ ಬ್ರಿಜ್‌ಭೂಷಣ್ ಸಿಂಗ್ ಅವರು 2,61,601 ಮತಗಳ ಅಂತರದಿಂದ ಬಿಎಸ್‌ಪಿಯ ಚಂದ್ರದೇವ್ ರಾಮ್ ಯಾದವ್ ಅವರನ್ನು ಪರಾಭವಗೊಳಿಸಿದ್ದರು. ಬ್ರಿಜ್‌ಭೂಷಣ್ ಅವರು, ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವುದರಿಂದ ಈ ಬಾರಿ ಬಿಜೆಪಿಯು ಅವರ ಪುತ್ರನನ್ನು ಕಣಕ್ಕಿಳಿಸಿದೆ. ಠಾಕೂರ್ ಸಮುದಾಯದ ನಾಯಕರಾಗಿರುವ ಬ್ರಿಜ್‌ಭೂಷಣ್ ಅವರು ಬಿಜೆಪಿಯ ಪ್ರಭಾವಿ ಮುಖಂಡರಾಗಿದ್ದಾರೆ. ಕರಣ್ ಭೂಷಣ್ ಅವರು, ಉತ್ತರ ಪ್ರದೇಶ ಕುಸ್ತಿ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದಾರೆ. ಕಾಂಗ್ರೆಸ್‌ನಲ್ಲಿದ್ದ ರಾಮ್ ಭಗತ್ ಅವರು ಅನಂತರ ಬಿಜೆಪಿಗೆ ಸೇರಿದ್ದರು. ಆ ಪಕ್ಷದಲ್ಲೂ ಕೆಲಕಾಲ ಕಾರ್ಯನಿರ್ವಹಿಸಿ ಬಳಿಕ ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ರಾಮ್ ಭಗತ್ ಅವರು ಕರಣ್ ಭೂಷಣ್ ಅವರಿಗೆ ಪ್ರಬಲ ಪೈಪೋಟಿ ನೀಡಲಿದ್ದಾರೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಎಸ್‌ಪಿಯು ‘ಇಂಡಿಯಾ’ ಒಕ್ಕೂಟದ ಜತೆಗಿರುವುದು ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ.

ಶೇ 16 ಅಭ್ಯರ್ಥಿಗಳ ವಿರುದ್ಧ ಗಂಭೀರ ಪ್ರಕರಣ

ನವದೆಹಲಿ: ಲೋಕಸಭಾ ಚುನಾವಣೆಯ ಆರನೇ ಹಂತದ ಮತದಾನ ನಡೆಯಲಿರುವ 57 ಕ್ಷೇತ್ರಗಳಲ್ಲಿ 869 ಹುರಿಯಾಳುಗಳು ಕಣದಲ್ಲಿದ್ದಾರೆ. ಈ ಪೈಕಿ ಶೇ 16ರಷ್ಟು ಅಭ್ಯರ್ಥಿಗಳು ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಶೇ 39ರಷ್ಟು ಕೋಟ್ಯಧಿಪತಿಗಳಾಗಿದ್ದಾರೆ. ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಗುರುವಾರ ವರದಿ ಪ್ರಕಟಿಸಿದೆ.

ಆರನೇ ಹಂತದಲ್ಲಿ ಕಣದಲ್ಲಿರುವ ಎಎಪಿಯ ಎಲ್ಲ ಐದು ಅಭ್ಯರ್ಥಿಗಳೂ ಅಪರಾಧ ಪ್ರಕರಣ ಎದುರಿಸುತ್ತಿದ್ದಾರೆ. ಬಿಜೆಪಿಯ 51 ಅಭ್ಯರ್ಥಿಗಳಲ್ಲಿ 28 ಮಂದಿ ಹಾಗೂ ಕಾಂಗ್ರೆಸ್‌ನ 25 ಅಭ್ಯರ್ಥಿಗಳಲ್ಲಿ ಎಂಟು ಮಂದಿ ವಿವಿಧ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. 24 ಅಭ್ಯರ್ಥಿಗಳು ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿದ್ದು, ಅದರಲ್ಲಿ ಅತ್ಯಾಚಾರ ಆರೋಪ ಎದುರಿಸುತ್ತಿರುವ ಮೂವರು ಇದ್ದಾರೆ. 16 ಅಭ್ಯರ್ಥಿಗಳು ದ್ವೇಷ ಭಾಷಣಕ್ಕೆ ಸಂಬಂಧಿಸಿದ ಪ್ರಕರಣ ಎದುರಿಸುತ್ತಿದ್ದಾರೆ ಎಂದು ವರದಿ ತಿಳಿಸಿದೆ. ಆರನೇ ಹಂತದ ಮತದಾನ ಮೇ 25 ರಂದು ನಡೆಯಲಿದೆ.

ಅಭ್ಯರ್ಥಿಗಳ ವಿವರ

869 ಒಟ್ಟು ಅಭ್ಯರ್ಥಿಗಳು

866 ಪ್ರಮಾಣಪತ್ರ ವಿಶ್ಲೇಷಣೆ

ಅಪರಾಧ ಪ್ರಕರಣ

180	141	6	21	24	12
ಅಪರಾಧ ಪ್ರಕರಣ ಎದುರಿಸುತ್ತಿರುವ ಅಭ್ಯರ್ಥಿಗಳು	ಗಂಭೀರ ಪ್ರಕರಣ ಎದುರಿಸುತ್ತಿರುವವರು	ಕೊಲೆ ಆರೋಪ	ಕೊಲೆ ಯತ್ನ ಆರೋಪ	ಮಹಿಳೆಯರ ವಿರುದ್ಧದ ಅಪರಾಧ	ಪ್ರಕರಣಗಳಲ್ಲಿ ಶಿಕ್ಷೆಗೊಳಗಾದವರು

ಸಂಪತ್ತು

₹6.21 ಕೋಟಿ ಅಭ್ಯರ್ಥಿಗಳ ಸರಾಸರಿ ಆಸ್ತಿ

338 ಕೋಟ್ಯಧಿಪತಿಗಳು

ಪಕ್ಷವಾರು ಕೋಟ್ಯಧಿಪತಿಗಳು

ಬಿಜೆಪಿ	ಕಾಂಗ್ರೆಸ್	ಎಸ್‌ಪಿ	ಬಿಜೆಡಿ
48	20	11	6

ಶ್ರೀಮಂತ ಅಭ್ಯರ್ಥಿಗಳು

ನವೀನ್ ಜಿಂದಾಲ್ (ಬಿಜೆಪಿ, ಕುರುಕ್ಷೇತ್ರ)	ಸಂತೃಪ್ತ್ ಮಿಶ್ರಾ (ಬಿಜೆಡಿ, ಕಟಕ್)	ಡಾ.ಸುಶೀಲ್ ಗುಪ್ತಾ (ಎಎಪಿ, ಕುರುಕ್ಷೇತ್ರ)
₹1,241 ಕೋಟಿ	₹482 ಕೋಟಿ	₹169 ಕೋಟಿ

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಷೇರುಪೇಟೆ ವಹಿವಾಟು 676



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,200
ಇಂದಿನ ಅಂತ್ಯ	22,403
▲	203
ದಿನದ ಗರಿಷ್ಠ	22,432

ವಿನಿಮಯ ದರ

$ ಡಾಲರ್	83.52
£ ಪೌಂಡ್	105.75
€ ಯುರೊ	90.78
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹917 (920)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹882 (887)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14750
ಎಸಿ	₹8540
ಆರ್‌ಪಿ	₹14900
ಆರ್‌ಸಿ	₹8800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹5000-9110
ದಾವಣಗೆರೆ	₹6900-7800
ಮಳವಳ್ಳಿ	₹9000-9000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹323-490
ದ್ವಿತಳಿ (ಬಿ.ವಿ)	₹365-429

ಎಸ್‌ಬಿಐ: ಆಯ್ದ ನಿಶ್ಚಿತ ಠೇವಣಿ ಬಡ್ಡಿದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಆಯ್ದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 0.75ರ ವರೆಗೂ ಹೆಚ್ಚಿಸಿದೆ. ಹಾಗಾಗಿ, ಉಳಿದ ಬ್ಯಾಂಕ್‌ಗಳು ಕೂಡ ಬಡ್ಡಿದರ ಹೆಚ್ಚಿಸುವ ಸಾಧ್ಯತೆಯಿದೆ.

ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾಹಿತಿ ಪ್ರಕಾರ ಬುಧವಾರದಿಂದಲೇ ಈ ಪರಿಷ್ಕೃತ ಬಡ್ಡಿದರವು ಜಾರಿಗೆ ಬಂದಿದೆ.

₹2 ಕೋಟಿ ಮೊತ್ತದ ನಿಶ್ಚಿತ ಠೇವಣಿಯ ಅಲ್ಪಾವಧಿ ಮತ್ತು ದೀರ್ಘಾವಧಿ ವರೆಗಿನ ಬಡ್ಡಿದರವನ್ನೂ ಹೆಚ್ಚಿಸಲಾಗಿದೆ.

7 ದಿನಗಳಿಂದ 210 ದಿನಗಳ ವರೆಗಿನ ನಿಶ್ಚಿತ ಠೇವಣಿಗಳ ಬಡ್ಡಿದರವನ್ನು ಶೇ 0.10ರಿಂದ ಶೇ 0.25ರಷ್ಟು ಹೆಚ್ಚಿಸಲಾಗಿದೆ. ಒಂದು ವರ್ಷದಿಂದ ಮೂರು ವರ್ಷದವರೆಗಿನ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 0.20ರಿಂದ ಶೇ 0.25ರಷ್ಟು ಏರಿಕೆ ಮಾಡಲಾಗಿದೆ.

ಹೊಸ ಬಡ್ಡಿದರ (ಶೇಕಡಾವಾರು)

ಅವಧಿ	ಸಾಮಾನ್ಯ	ಹಿರಿಯ ನಾಗರಿಕರು
7ರಿಂದ 45 ದಿನಗಳು	3.50	4
46ರಿಂದ 179 ದಿನಗಳು	5.50	6
180ರಿಂದ 210 ದಿನಗಳು	6	6.50
211 ದಿನಗಳಿಂದ 1 ವರ್ಷಕ್ಕಿಂತ ಕಡಿಮೆ	6.25	6.75
1 ವರ್ಷದಿಂದ 2 ವರ್ಷಗಳಿಗಿಂತ ಕಡಿಮೆ	6.80	7.30
2 ವರ್ಷದಿಂದ 3 ವರ್ಷಗಳಿಗಿಂತ ಕಡಿಮೆ	7	7.50
3 ವರ್ಷದಿಂದ 5 ವರ್ಷಗಳಿಗಿಂತ ಕಡಿಮೆ	6.75	7.25
5 ವರ್ಷಗಳು ಹಾಗೂ 10 ವರ್ಷಗಳ ವರೆಗೆ	6.50	7.50

ಮಾಹಿತಿ: ಎಸ್‌ಬಿಐ ವೆಬ್‌ಸೈಟ್

ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	18000-28500
ಹೊಸತು	28500-38000
ಹಳತು	38000-46500

ಕಾರ್ಕಳ

ಹೊಸತು	25000-25000
ಹಳತು	30000-46500

ಸಾಗರ

ಕೋಕ	18219-32699
ಬಿಳಿಗೋಟು	22989-31566
ಚಾಲಿ	32999-36299
ಕೆಂಪುಗೋಟು	28569-37199
ರಾಶಿ	37119-53299
ಸಿಪ್ಪೆಗೋಟು	10199-20669

ಶಿರಸಿ

ಬೆಟ್ಟೆ	37299-45299
ಬಿಳಿಗೋಟು	37299-45299
ಚಾಲಿ	34618-39088
ರಾಶಿ	45009-49899

ಯಲ್ಲಾಪುರ

ಬಿಳಿಗೋಟು	24232-32899
ಕೋಕ	12812-28212
ಕೆಂಪುಗೋಟು	24899-33709
ರಾಶಿ	44109-55099
ತಟ್ಟಿಬೆಟ್ಟೆ	35100-44770

ವಾರ್ಷಿಕ ₹2 ಕೋಟಿ ಆದಾಯ • ದಂಪತಿಯ ಯಶೋಗಾಥೆ

ಅಮೆರಿಕಕ್ಕೆ ಶಾದಿಪುರ ಮಾವು

• ಜಗನ್ನಾಥ ಡಿ. ಶೇರಿಕಾರ

ಚಿಂಚೋಳಿ (ಕಲಬುರಗಿ ಜಿಲ್ಲೆ): ತೆಲಂಗಾಣ ರಾಜ್ಯದ ಗಡಿಗೆ ಹೊಂದಿಕೊಂಡಿರುವ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಪುಟ್ಟ ಗ್ರಾಮವಾದ ಶಾದಿಪುರದ ಮಾವಿನ ಹಣ್ಣಿನ ಘಮಲು ಅಮೆರಿಕ, ಸಿಂಗಪುರ, ಆಸ್ಟ್ರೇಲಿಯಾಕ್ಕೂ ಪಸರಿಸಿದೆ.

ಅಣುಶಕ್ತಿ ಇಲಾಖೆಯಲ್ಲಿ ವಿಜ್ಞಾನಿಯಾಗಿದ್ದ ಎ. ಸತ್ಯನಾರಾಯಣ ಮತ್ತು ನಿವೃತ್ತ ಎಂಜಿನಿಯರ್ ಧನ ಕೋಟೇಶ್ವರಮ್ಮ ದಂಪತಿ ತಮ್ಮ ತೋಟದಲ್ಲಿ ಬೆಳೆದ ವಿವಿಧ ತಳಿಯ ಮಾವಿನ ಹಣ್ಣುಗಳನ್ನು ಕಳೆದ 4 ವರ್ಷಗಳಿಂದ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಇದರಿಂದ ಕೈತುಂಬಾ ಆದಾಯ ಗಳಿಸುತ್ತಿದ್ದು, ನೂರಾರು ಜನರಿಗೆ ಉದ್ಯೋಗವನ್ನೂ ನೀಡಿದ್ದಾರೆ.

ತೆಲಂಗಾಣದ ನಿವಾಸಿಯಾಗಿದ್ದ ಅವರು 2013ರಲ್ಲಿ ನಿವೃತ್ತರಾದ ಬಳಿಕ ಶಾದಿಪುರಕ್ಕೆ ಬಂದು ನೆಲೆಸಿದರು. ಇಲ್ಲಿಯೇ 120 ಎಕರೆ ಬಂಜರು ಭೂಮಿ ಖರೀದಿಸಿ ಅದನ್ನು ಹಸನು ಮಾಡಿ ಫಲವತ್ತಾದ ಕೃಷಿ ಭೂಮಿಯಾಗಿ ಪರಿವರ್ತಿಸಿದ್ದರು. ಇದೀಗ 100 ಎಕರೆಯಲ್ಲಿ ಮಾವು ಬೆಳೆಯುತ್ತಿದ್ದಾರೆ.

ಮಲ್ಲಿಕಾ, ಬೆನಶಾನ್, ಕೇಸರ್, ದಶೇರಿ, ಹಿಮಾಯತ್ ರಸಕಾಯಿ (ರಸಾಲು) ಸೇರಿ ವಿವಿಧ ತಳಿಯ ಮಾವಿನ ಬೇಸಾಯ ಮಾಡುತ್ತಿದ್ದಾರೆ. ಇವರ ತೋಟದಲ್ಲಿ 100 ಮಂದಿ ಕಾಯಂ ನೌಕರರು ಮತ್ತು 50 ಕೃಷಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಮಾವಿನ ಹಣ್ಣಿನ ಬೆಳೆಗಾರ ಸತ್ಯನಾರಾಯಣ ಮತ್ತು ಧನಕೋಟೇಶ್ವರಮ್ಮ ದಂಪತಿ

ಕೊಯ್ಲು ಸಂದರ್ಭದಲ್ಲಿ ಕೌಶಲವುಳ್ಳ ಕಾರ್ಮಿಕರನ್ನು ಕರ್ನೂಲ್‌ನಿಂದ ಕರೆ ತಂದು ಕೆಲಸ ಮಾಡಿಸುತ್ತಿದ್ದಾರೆ. ಇವರ ತೋಟದಲ್ಲಿ ಬೆಳೆದ ಹಿಮಾಯತ್ ತಳಿಯ ಒಂದೊಂದು ಮಾವಿನ ಹಣ್ಣು ಒಂದು ಕೆ.ಜಿ ತೂಕವಿದೆ. ಬೆನಶಾನ್ ಮತ್ತು ಮಲ್ಲಿಕಾ ಮಾವಿನ ಹಣ್ಣು 800 ಗ್ರಾಂನಿಂದ ಒಂದು ಕೆ.ಜಿ ತೂಕ ಇವೆ.

ಮರದಲ್ಲಿರುವ ಕಾಯಿಗಳಿಗೆ ಪ್ಲಾಸ್ಟಿಕ್ ಚೀಲ ಕಟ್ಟಿ ರೋಗಗಳಿಂದ ರಕ್ಷಿಸಲಾಗುತ್ತಿದೆ. ಸುಮಾರು 1 ಲಕ್ಷ ಕಾಯಿಗಳಿಗೆ ಪ್ಲಾಸ್ಟಿಕ್ ಚೀಲ ಕಟ್ಟಲಾಗಿದೆ.

'ವಾರ್ಷಿಕ 350ರಿಂದ 400 ಟನ್ ಮಾವು ಬೆಳೆಯುತ್ತಿದ್ದೇವೆ. ಪ್ರತಿವರ್ಷ ವಿದೇಶಗಳಿಗೆ 100ರಿಂದ 120 ಟನ್ ರಫ್ತು ಮಾಡುತ್ತಿದ್ದೇವೆ. ಅಲ್ಲಿ ನೆಲೆಸಿರುವ ತೆಲುಗು ಭಾಷಿಕರು ಮತ್ತು ಕನ್ನಡಿಗರು ಬೆನಶಾನ್ ಮತ್ತು ಮಲ್ಲಿಕಾ ಮಾವಿನ ಹಣ್ಣುಗಳನ್ನು ಇಷ್ಟಪಡುತ್ತಾರೆ. ಬೆಂಗಳೂರಿನ ಮೂಲಕ ಹಣ್ಣುಗಳನ್ನು ರಫ್ತು ಮಾಡುತ್ತೇವೆ' ಎಂದು ಎ. ಸತ್ಯನಾರಾಯಣ ಮಾಹಿತಿ ನೀಡಿದರು.

'ಬೆಂಗಳೂರಿನ ಇನ್ನೋವಾ ಆಗ್ರೊ ಕಂಪನಿಯಲ್ಲಿ ಹಣ್ಣುಗಳನ್ನು ಸಂಸ್ಕರಣೆ ಮಾಡಿ ರಫ್ತು ಮಾಡುತ್ತಿದ್ದೇವೆ. ಮಾವಿನ ಬೇಸಾಯದಿಂದ ಪ್ರತಿ ವರ್ಷ ₹2 ಕೋಟಿ ಆದಾಯ ಪಡೆಯುತ್ತಿದ್ದೇವೆ. ಉಳಿದ ತಳಿಯ ಹಣ್ಣುಗಳನ್ನು ಹೈದರಾಬಾದ್‌ನಲ್ಲಿರುವ ವಿವಿಧ ಮಾರ್ಟ್‌ಗಳಿಗೆ ಸರಬರಾಜು ಮಾಡುತ್ತಿದ್ದೇವೆ. ನಮಗೆ ಮಾರುಕಟ್ಟೆಯ ಸಮಸ್ಯೆ ಇಲ್ಲ' ಎಂದರು.

ಬಂಜರು ಭೂಮಿ ಹದ ಮಾಡಿ ಆರಂಭದಲ್ಲಿ ತರಕಾರಿ, ಪಪ್ಪಾಯ, ಅರಿಸಿನ, ಹಸಿ ಶುಂಠಿ ಬೇಸಾಯ ಮಾಡಿದ್ದರು. ನಂತರ ಮಾವಿನ ಸಸಿ ನೆಟ್ಟು ಪೋಷಿಸಿದ್ದಾರೆ. ಸಮೀಪದಲ್ಲಿಯೇ ಉಮ್ಲಾನಾಯಕ ತಾಂಡಾವಿದ್ದು, ಅಲ್ಲಿನ ಜನರಿಗೆ ಉದ್ಯೋಗ ನೀಡುತ್ತಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 90001 62387 ಸಂಪರ್ಕಿಸಬಹುದು.

> ಸತ್ಯನಾರಾಯಣ ದಂಪತಿ ಬಂಜರು ಭೂಮಿಯನ್ನು ಹದ ಮಾಡಿ ಫಲವತ್ತಾದ ಭೂಮಿಯಾಗಿ ಪರಿವರ್ತಿಸಿದ್ದು ಒಂದು ಯಶೋಗಾಥೆ.
> **ಡಾ.ಜಹೀರ್ ಅಹಮದ್,** ಸಸ್ಯರೋಗ ತಜ್ಞ, ಕೃಷಿ ವಿಜ್ಞಾನ ಕೇಂದ್ರ

ಸುದ್ದಿ 2 ನಿಮಿಷ

ಬೆಳ್ಳಿ ದರ ಸಾರ್ವಕಾಲಿಕ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1,800 ಏರಿಕೆಯಾಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ. ಗುರುವಾರ ಒಂದು ಕೆ.ಜಿ. ಬೆಳ್ಳಿಯು ₹88,700ಕ್ಕೆ ಮಾರಾಟವಾಯಿತು.

ಚಿನ್ನದ ದರ 10 ಗ್ರಾಂಗೆ ₹650 ಏರಿಕೆಯಾಗಿದ್ದು, ₹74,050ಕ್ಕೆ ಮುಟ್ಟಿದೆ.

'ಕಳೆದ ಆರು ತಿಂಗಳ ಬಳಿಕ ಅಮೆರಿಕದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಇಳಿಕೆಯಾಗಿದೆ. ಹಾಗಾಗಿ, ಸೆಪ್ಟೆಂಬರ್‌ನಲ್ಲಿ ನಡೆಯುವ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ. ಹಾಗಾಗಿ, ಸತತ ಎರಡು ದಿನಗಳಿಂದಲೂ ಚಿನ್ನ ಹಾಗೂ ಬೆಳ್ಳಿ ದರವು ಏರಿಕೆಯ ಹಾದಿಯಲ್ಲಿ ಸಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

'ಅಮೆರಿಕದ ಕಾರ್ಮಿಕ ಇಲಾಖೆಯು ಬಿಡುಗಡೆಗೊಳಿಸಿರುವ ಹಣದುಬ್ಬರದ ವರದಿ ಅನ್ವಯ ಏಪ್ರಿಲ್‌ನಲ್ಲಿ ಡಾಲರ್ ಇಂಡೆಕ್ಸ್ ಐದು ವಾರಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಬಾಂಡ್‌ಗಳಿಕೆಯು ಇಳಿಕೆಯಾಗಿದೆ. ಹಾಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದತ್ತ ದೃಷ್ಟಿ ನೆಟ್ಟಿದ್ದಾರೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹75,700 ಹಾಗೂ ಒಂದು ಕೆ.ಜಿ ಬೆಳ್ಳಿ ಧಾರಣೆಯು ₹88,500 ಆಗಿದೆ.

ರಫ್ತು ಶೇ 15ರಷ್ಟು ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): 2024–25ನೇ ಹಣಕಾಸು ವರ್ಷದಲ್ಲಿ ದೇಶದ ರಫ್ತು ವಹಿವಾಟು ಮೌಲ್ಯವು ₹41.74 ಲಕ್ಷ ಕೋಟಿ ದಾಟಲಿದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ (ಎಫ್‌ಐಇಒ) ಅಂದಾಜಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ₹36.48 ಲಕ್ಷ ಕೋಟಿ ರಫ್ತು ವಹಿವಾಟು ನಡೆದಿತ್ತು. ಆದರೆ, ಇದರ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 3ರಷ್ಟು ಕುಸಿತವಾಗಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ₹5.84 ಲಕ್ಷ ಕೋಟಿಯಷ್ಟು ಏರಿಕೆಯಾಗುವ (ಶೇ 12ರಿಂದ ಶೇ 15ರಷ್ಟು) ನಿರೀಕ್ಷೆಯಿದೆ ಎಂದು ಹೇಳಿದೆ.

'ದೇಶದ ಸೇವಾ ರಫ್ತು ವಹಿವಾಟು ಮೌಲ್ಯವು ₹33.39 ಲಕ್ಷ ಕೋಟಿ ದಾಟುವ ನಿರೀಕ್ಷೆಯಿದೆ. ಅಮೆರಿಕ, ಯುರೋಪ್ ಮಾರುಕಟ್ಟೆಗಳು ದೇಶದ ರಫ್ತು ಹೆಚ್ಚಳಕ್ಕೆ ನೆರವಾಗಲಿವೆ' ಎಂದು ಒಕ್ಕೂಟದ ಅಧ್ಯಕ್ಷ ಅಶ್ವಿನಿ ಕುಮಾರ್ ಹೇಳಿದ್ದಾರೆ.

ಸೆನ್ಸೆಕ್ಸ್ 676 ಅಂಶ ಏರಿಕೆ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್ ಷೇರುಗಳ ಖರೀದಿ ಹಾಗೂ ಏಷ್ಯಾದ ಮಾರುಕಟ್ಟೆಗಳಲ್ಲಿ ನಡೆದ ಉತ್ತಮ ವಹಿವಾಟಿನಿಂದಾಗಿ ಗುರುವಾರ ದೇಶದ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 676 ಅಂಶ ಏರಿಕೆ ಕಂಡು (ಶೇ 0.93ರಷ್ಟು) 73,663 ಅಂಶಗಳಿಗೆ ತಲುಪಿದೆ. ದಿನದ ವಹಿವಾಟಿನ ಒಂದು ಸಂದರ್ಭದಲ್ಲಿ 73,749 ಅಂಶಗಳಿಗೆ ಮುಟ್ಟಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 203 ಅಂಶ ಹೆಚ್ಚಳವಾಗಿ, 22,403 ಅಂಶಗಳಲ್ಲಿ ಸ್ಥಿರವಾಯಿತು.

'ಏಪ್ರಿಲ್‌ನಲ್ಲಿ ಅಮೆರಿಕದ ಹಣದುಬ್ಬರವು ನಿರೀಕ್ಷೆಯಂತೆ ಕಡಿಮೆಯಾಗಿದೆ. ಪ್ರಸಕ್ತ ವರ್ಷದಲ್ಲಿ ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಎರಡು ಬಾರಿ ಬಡ್ಡಿದರ ಕಡಿತಗೊಳಿಸಬಹುದು ಎಂಬ ನಿರೀಕ್ಷೆಯು ಹೂಡಿಕೆದಾರರಲ್ಲಿದೆ. ಹಾಗಾಗಿ, ದೇಶೀಯ ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಟೆಕ್ ಮಹೀಂದ್ರ, ಟೈಟನ್, ಇನ್ಫೊಸಿಸ್, ಜೆಎಸ್‌ಡಬ್ಲ್ಯು ಸ್ಟೀಲ್, ಬಜಾಜ್ ಫಿನ್‌ಸರ್ವ್ ಎಚ್‌ಡಿಎಫ್‌ಸಿ ಬ್ಯಾಂಕ್, ಎಲ್ ಆ್ಯಂಡ್ ಟಿ, ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಮಾರುತಿ ಸುಜುಕಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್ ಗ್ರಿಡ್, ಟಾಟಾ ಮೋಟರ್, ಇಂಡಸ್‌ಇಂಡ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.07ರಷ್ಟು ಹಾಗೂ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 0.85ರಷ್ಟು ಏರಿಕೆಯಾಗಿದೆ.

ಬಂಡವಾಳ ಸರಕು ಸೂಚ್ಯಂಕ (ಶೇ 2.05), ಕೈಗಾರಿಕೆ (ಶೇ 1.99), ಟೆಕ್ (ಶೇ 1.66), ರಿಯಾಲ್ಟಿ (ಶೇ 1.59), ಮಾಹಿತಿ ತಂತ್ರಜ್ಞಾನ (ಶೇ 1.55), ಟೆಲಿಕಮ್ಯೂನಿಕೇಷನ್ (ಶೇ 0.99) ಹಾಗೂ ಹೆಲ್ತ್‌ಕೇರ್ ಸೂಚ್ಯಂಕ (ಶೇ 0.70) ಏರಿಕೆಯಾಗಿದೆ. ಯುಟಿಲಿಟಿ ಸೂಚ್ಯಂಕ ಇಳಿಕೆಯಾಗಿದೆ.

ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದರೆ, ಯುರೋಪ್ ಮಾರುಕಟ್ಟೆಗಳು ಇಳಿಕೆ ದಾಖಲಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ 0.33ರಷ್ಟು ಕುಸಿತವಾಗಿದ್ದು, ಪ್ರತಿ ಬ್ಯಾರೆಲ್ ದರವು 82.45 ಡಾಲರ್ ಆಗಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಒಟ್ಟು ₹2,832 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮಹೀಂದ್ರ ಷೇರಿನ ಮೌಲ್ಯ ಶೇ 4ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರ್ಚ್ ತ್ರೈಮಾಸಿಕದಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ನಿವ್ವಳ ಲಾಭದಲ್ಲಿ ಏರಿಕೆ ಆಗಿರುವುದರಿಂದ ಕಂಪನಿಯ ಷೇರಿನ ಮೌಲ್ಯದಲ್ಲಿ ಶೇ 4ರಷ್ಟು ಏರಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 3.05ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹2,372.85ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 3.97ರಷ್ಟು ಹೆಚ್ಚಳವಾಗಿದ್ದು, ಪ್ರತಿ ಷೇರಿನ ಬೆಲೆ ₹2,393.90 ಆಗಿದೆ.

ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹8,742 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹2.95 ಲಕ್ಷ ಕೋಟಿಗೆ ಮುಟ್ಟಿದೆ.

ಮಹೀಂದ್ರ ಕಂಪನಿಯ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2,754 ಕೋಟಿ ತೆರಿಗೆ ನಂತರದ ನಿವ್ವಳ ಲಾಭ ಗಳಿಸಿದೆ.

ವಾಹನಗಳ ವಿಭಾಗದಲ್ಲಿನ ಉತ್ತಮ ಬೆಳವಣಿಗೆ ಹಾಗೂ ಕೃಷಿ ಉಪಕರಣಗಳ ಮಾರಾಟದ ವಹಿವಾಟು ಹೆಚ್ಚಳದಿಂದಾಗಿ ಲಾಭದಲ್ಲಿ ಏರಿಕೆಯಾಗಿದೆ ಎಂದು ಕಂಪನಿ ಹೇಳಿದೆ.

2022–23ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2,637 ಕೋಟಿ ತೆರಿಗೆ ನಂತರದ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 4ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.ನಾಲ್ಕನೇ ತ್ರೈಮಾಸಿಕದಲ್ಲಿ ವರಮಾನವು ಶೇ 9ರಷ್ಟು ಏರಿಕೆಯಾಗಿದೆ. ಒಟ್ಟು ವರಮಾನವು ₹32,456 ಕೋಟಿಯಿಂದ ₹35,452 ಕೋಟಿಗೆ ತಲುಪಿದೆ.

2022–23ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹9,025 ಕೋಟಿ ನಿವ್ವಳ ಲಾಭಗಳಿಸಿತ್ತು. 2023–24ರಲ್ಲಿ ₹11,269 ಕೋಟಿ ಗಳಿಸಿದೆ. ಒಟ್ಟಾರೆ ಲಾಭದಲ್ಲಿ ಶೇ 25ರಷ್ಟು ಹೆಚ್ಚಳವಾಗಿದೆ. ವರಮಾನವು ₹1.21 ಲಕ್ಷ ಕೋಟಿಯಿಂದ ₹1.39 ಲಕ್ಷ ಕೋಟಿಗೆ (ಶೇ 15ರಷ್ಟು) ಏರಿಕೆಯಾಗಿದೆ.

'ಈ ಆರ್ಥಿಕ ವರ್ಷದಲ್ಲಿ ಕಂಪನಿಯು ವಹಿವಾಟು ಸದೃಢವಾಗಿದೆ. ವಾಹನಗಳ ಮಾರಾಟವು ಹೆಚ್ಚಿದೆ. ಮಾರುಕಟ್ಟೆಯ ಕಠಿಣ ಪರಿಸ್ಥಿತಿಯ ನಡುವೆಯೂ ಕೃಷಿ ಉಪಕರಣಗಳ ಮಾರಾಟದಲ್ಲಿ ಏರಿಕೆಯಾಗಿದೆ. ಆಸ್ತಿಯ ಗುಣಮಟ್ಟದಲ್ಲಿ ಮಹೀಂದ್ರ ಫೈನಾನ್ಸ್ ಸ್ಥಿರವಾದ ಕಾರ್ಯಕ್ಷಮತೆ ತೋರಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅನಿಶ್ ಶಾ ತಿಳಿಸಿದ್ದಾರೆ.

ಜಾಮೀನು ಪಡೆದವರಿಂದ ಮತ್ತೆ ಭ್ರೂಣಹತ್ಯೆ

ಒಂದನೇ ಪುಟದಿಂದ

ಈಗ ಆರೋಪಿಗಳೆಲ್ಲರೂ ಜಾಮೀನಿನ ಮೇಲೆ ಹೊರಗಿದ್ದಾರೆ. ಈ ನಡುವೆ ಪಾಂಡವಪುರದ ಆರೋಗ್ಯ ಇಲಾಖೆ ವಸತಿಗೃಹದಲ್ಲಿ ಭ್ರೂಣಹತ್ಯೆಯ ಮತ್ತೊಂದು ಪ್ರಕರಣ ಪತ್ತೆಯಾಗಿದೆ. ಈ ಪ್ರಕರಣದಲ್ಲಿ 10 ಮಂದಿಯನ್ನು ಬಂಧಿಸಲಾಗಿದೆ.

ಬಂಧಿತರಲ್ಲಿ ಆಲೆಮನೆ ಪ್ರಕರಣದಲ್ಲಿ ಬಂಧಿತರಾಗಿದ್ದವರೂ ಇದ್ದಾರೆ. ನವೀನ್ ಕುಮಾರ್ ಎರಡೂ ಪ್ರಕರಣಗಳಲ್ಲಿ ಪ್ರಮುಖ ಆರೋಪಿ. 'ಆಲೆಮನೆ ಪ್ರಕರಣದಲ್ಲಿ ಕ್ರಮಜರುಗಿಸುವುದು ವಿಳಂಬವಾದ ಕಾರಣ ಮತ್ತೆ ದುಷ್ಕೃತ್ಯ ಮುಂದುವರಿಯಿತು' ಎಂದು ಪೊಲೀಸರೇ ಹೇಳುತ್ತಾರೆ.

ತಡವಾಗಿದ್ದು ಏಕೆ?: ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ (ಪಿಸಿ ಮತ್ತು ಪಿಎನ್‌ಡಿಟಿ) ಅನ್ವಯ ಕಾಯ್ದೆ ಜಾರಿ ಮತ್ತು ಅನುಷ್ಠಾನ ಅಧಿಕಾರವನ್ನು ಉಪವಿಭಾಗಾಧಿಕಾರಿಗೆ ನೀಡಲಾಗಿದೆ. ಉಪ ವಿಭಾಗಾಧಿಕಾರಿ ಕಚೇರಿಯೇ ಸಕ್ಷಮ ಪ್ರಾಧಿಕಾರ. ಸಿಐಡಿ ವರದಿಯನ್ವಯ ಮಂಡ್ಯ ಉಪ ವಿಭಾಗಾಧಿಕಾರಿ ಅವರು ನ್ಯಾಯಾಲಯಕ್ಕೆ ದೂರು ಸಲ್ಲಿಸಬೇಕಾಗಿತ್ತು.

ಆದರೆ, ಮಂಡ್ಯ ಎ.ಸಿಯಾಗಿದ್ದ ಶಿವಮೂರ್ತಿ ಅವರನ್ನು ಲೋಕಸಭಾ ಚುನಾವಣೆ ಕಾರಣಕ್ಕೆ ಬೇರೆಡೆಗೆ ನಿಯೋಜನೆ ಮೇಲೆ ಕಳುಹಿಸಲಾಗಿದೆ. ಇವರು ತೆರಳುವುದಕ್ಕೂ ಮುನ್ನ ಆರೋಗ್ಯ ಇಲಾಖೆಗೆ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ನೀಡಬೇಕಾಗಿತ್ತು. ಈ ಪ್ರಕ್ರಿಯೆ ಆಗದಿರುವುದರಿಂದ ದೂರು ದಾಖಲಿಸಲು ಸಾಧ್ಯವಾಗಿಲ್ಲ. ಚುನಾವಣೆ ನೀತಿಸಂಹಿತೆ ಮುಗಿಯುವವರೆಗೂ ಈ ಪ್ರಕ್ರಿಯೆ ನಡೆಯದು ಎಂದು ಮೂಲಗಳು ತಿಳಿಸಿವೆ.

'ಜಿಲ್ಲಾಡಳಿತ, ಆರೋಗ್ಯ ಇಲಾಖೆ ಶೀಘ್ರವಾಗಿ ತಮ್ಮ ಜವಾಬ್ದಾರಿ ನಿರ್ವಹಣೆ ಮಾಡದ ಕಾರಣ ಆರೋಪಿಗಳು ಮತ್ತೆ ಕೃತ್ಯ ಮುಂದುವರಿಸಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದೇವೆ.ನ್ಯಾಯಾಲಯಕ್ಕೆ ದೂರು ದಾಖಲಿಸಿ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದೇವೆ' ಎಂದು ವಿಮೋಚನಾ ಮಹಿಳಾ ಸಂಘಟನೆಯ ಜನಾರ್ದನ್ ತಿಳಿಸಿದರು.

ನಿಜ್ಜರ್ ಹತ್ಯೆ: ನ್ಯಾಯಾಲಯದ ಮುಂದೆ ಆರೋಪಿ ಹಾಜರು

ಒಟ್ಟಾವ (ಪಿಟಿಐ): ಖಲಿಸ್ತಾನ್ ಪ್ರತ್ಯೇಕತಾವಾದಿ ಪರ ಹೋರಾಟಗಾರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ಸಂಬಂಧ ಬಂಧಿಸಲಾಗಿರುವ ಅಮನ್‌ದೀಪ್ ಸಿಂಗ್(22) ಅವರನ್ನು ಗುರುವಾರ ಇಲ್ಲಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಅಮನ್‌ದೀಪ್ ಸಿಂಗ್‌ನನ್ನು ಸರ್ರೆ ನ್ಯಾಯಾಲಯದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಯಿತು. ಇತರ ಮೂವರು ಆರೋಪಿಗಳ ಜತೆ ಮೇ 21ರಂದು ಮತ್ತೆ ಹಾಜರಾಗುವಂತೆ ನ್ಯಾಯಾಲಯ ಆದೇಶ ನೀಡಿದೆ.

ಹರ್ದೀಪ್ ಸಿಂಗ್ ನಿಜ್ಜರ್‌ನನ್ನು 2023ರ ಜೂನ್ 18ರಂದು ಹತ್ಯೆಗೈಯಲಾಗಿತ್ತು.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಗುರುವಾರ ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಮಾತುಕತೆ ನಡೆಸಿದರು – ಎಪಿ/ಪಿಟಿಐ ಚಿತ್ರ

'ಚೀನಾ– ರಷ್ಯಾ ಬಾಂಧವ್ಯ ವಿಶ್ವಶಾಂತಿಗೆ ಅನುಕೂಲಕರ'

ಬೀಜಿಂಗ್ (ಪಿಟಿಐ): ಚೀನಾ ಮತ್ತು ರಷ್ಯಾ ನಡುವಿನ ಬಾಂಧವ್ಯ ವಿಶ್ವದಲ್ಲಿ ಶಾಂತಿ ಸ್ಥಿರಗೊಳಿಸಲು ಅತ್ಯಂತ ಪೂರಕವಾಗಿದೆ. ಅಲ್ಲದೆ, ಇತರ ದೇಶಗಳಿಗೂ ಈ ಬಾಂಧವ್ಯ ಉತ್ತಮ ಉದಾಹರಣೆಯಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಗುರುವಾರ ಪ್ರತಿಪಾದಿಸಿದ್ದಾರೆ.

ಉಕ್ರೇನ್ ವಿರುದ್ಧದ ಯುದ್ಧವನ್ನು ಸ್ಥಗಿತಗೊಳಿಸಲು ರಷ್ಯಾದ ಮೇಲೆ ಚೀನಾ ತನ್ನ ಪ್ರಭಾವ ಬಳಸುವಂತೆ ಅಮೆರಿಕ ಮತ್ತು ಯುರೋಪ್ ಒಕ್ಕೂಟ ಒತ್ತಡ ಹೆಚ್ಚುತ್ತಿರುವುದರ ನಡುವೆ ಉಭಯ ನಾಯಕರು ಪರಸ್ಪರ ಭೇಟಿಯಾಗಿ ಮಾತುಕತೆ ನಡೆಸಿದರು. ಇದೇ ವೇಳೆ ಪುಟಿನ್ ಅವರು, ಉಕ್ರೇನ್ ಕುರಿತು ಮಾತುಕತೆಗೆ ರಷ್ಯಾ ಮುಕ್ತವಾಗಿದೆ ಎಂದೂ ಹೇಳಿದ್ದಾರೆ.

'ನಾವು ಉಕ್ರೇನ್ ಕುರಿತು ಮಾತುಕತೆಗೆ ಮುಕ್ತರಾಗಿದ್ದೇವೆ. ಆದರೆ, ಅಂತಹ ಮಾತುಕತೆಗಳು ನಮ್ಮನ್ನೂ ಒಳಗೊಂಡಂತೆ ಸಂಘರ್ಷದಲ್ಲಿ ತೊಡಗಿರುವ ಎಲ್ಲಾ ದೇಶಗಳ ಹಿತಾಸಕ್ತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು' ಎಂದು ಪುಟಿನ್ ಹೇಳಿರುವುದಾಗಿ ಚೀನಾದ ಅಧಿಕೃತ ಸುದ್ದಿ ಸಂಸ್ಥೆ ಷಿನುವಾ ವರದಿ ಮಾಡಿದೆ.

ಉಕ್ರೇನ್‌ನೊಂದಿಗಿನ ತೀವ್ರ ಯುದ್ಧದ ಮಧ್ಯೆ ಐದನೇ ಅವಧಿಗೆ ರಾಷ್ಟ್ರದ ಅಧ್ಯಕ್ಷರಾಗಿ ಪುನರ್ ಆಯ್ಕೆಯಾದ ಕೆಲವೇ ದಿನಗಳ ನಂತರ ಪುಟಿನ್ ತಮ್ಮ ಮೊದಲ ವಿದೇಶ ಭೇಟಿಗಾಗಿ ಗುರುವಾರ ಇಲ್ಲಿಗೆ ಆಗಮಿಸಿದ್ದಾರೆ. ಜಿನ್ ಪಿಂಗ್ ಅವರನ್ನು 'ನನ್ನ ಆತ್ಮೀಯ ಸ್ನೇಹಿತ' ಎಂದು ಸಂಬೋಧಿಸಿದ ಪುಟಿನ್, ಚೀನಾಕ್ಕೆ ಆಗಮಿಸಿರುವುದು ಮತ್ತು ಜಿನ್‌ಪಿಂಗ್ ಅವರನ್ನು ಭೇಟಿಯಾಗಿರುವುದು ಅತೀವ ಆನಂದ ನೀಡಿದೆ ಎಂದು ಹೇಳಿದ್ದಾರೆ.

ಸ್ಲೊವಾಕಿಯಾ: ರಾಬರ್ಟ್ ಫಿಕೊ ಸ್ಥಿತಿ ಗಂಭೀರ

ಬನ್‌ಸ್ಕಾ ಬಿಸ್ಟ್ರಿಕಾ (ಸ್ಲೊವಾಕಿಯಾ) (ಎಪಿ): ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರ ಹತ್ಯೆಗೆ ಯತ್ನಿಸಿದ್ದು ಒಬ್ಬ ವ್ಯಕ್ತಿ ಮಾತ್ರ ಎಂದು ಗೃಹ ಸಚಿವ ಮಾಟಸ್ ಸುಟಾಜ್ ಎಸ್ಟಾಕ್ ತಿಳಿಸಿದ್ದಾರೆ.

'ಈತ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ. ಶಂಕಿತನೊಬ್ಬನನ್ನು ಈಗಾಗಲೇ ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಫಿಕೊ ಅವರು ಸರ್ಕಾರಿ ಸಭೆಯಲ್ಲಿ ಪಾಲ್ಗೊಂಡಿದ್ದಾಗ ನಡೆದಿರುವ ಈ ದಾಳಿಯ ಹಿಂದೆ ರಾಜಕೀಯ ಉದ್ದೇಶವಿರುವುದು ತನಿಖೆಯಿಂದ ಸ್ಪಷ್ಟವಾಗಿದೆ' ಎಂದು ಎಸ್ಟಾಕ್ ಹೇಳಿದ್ದಾರೆ.

'ಫಿಕೊ ರೂಪಿಸಿದ್ದ ನೀತಿಗಳ ಬಗ್ಗೆ ಶಂಕಿತ ಆರೋಪಿ ತೀವ್ರ ಅಸಮಾಧಾನಗೊಂಡಿದ್ದ. ಇದೇ ಅಂಶ ದಾಳಿಗೆ ಪ್ರಚೋದನೆ ನೀಡಿದೆ. ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಗಳಲ್ಲೂ ಶಂಕಿತ ಆರೋಪಿ ಪಾಲ್ಗೊಂಡಿದ್ದ' ಎಂದರು.

ತೀವ್ರ ಗಾಯಗೊಂಡಿರುವ ಫಿಕೊ(59) ಸ್ಥಿತಿ ಗಂಭೀರವಾಗಿದ್ದರೂ, ಸ್ಥಿರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಫಿಕೊ ಅವರಿಗೆ ವೈದ್ಯರು ಐದು ತಾಸು ಶಸ್ತ್ರ ಚಿಕಿತ್ಸೆ ನಡೆಸಿದರು. ಅವರ ಪ್ರಾಣ ಅಪಾಯದಲ್ಲಿರುವ ವರದಿ ಇದೆ. ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಕೇಜ್ರಿವಾಲ್‌ಗೆ ವಿನಾಯಿತಿ ತೋರಿಲ್ಲ'

ಒಂದನೇ ಪುಟದಿಂದ

ಜನರು ಎಎಪಿಗೆ ಮತ ನೀಡದಿದ್ದರೆ ಮತ್ತೆ ತಾನು ಜೈಲಿಗೆ ಹೋಗಬೇಕಾಗುತ್ತದೆ ಎಂದು ಕೇಜ್ರಿವಾಲ್ ಅವರು ಹೇಳಿಕೆ ನೀಡಿಲ್ಲ ಎಂದು ಸಿಂಘ್ವಿ ಅವರು ಪೀಠಕ್ಕೆ ತಿಳಿಸಿದರು. 'ಅಗತ್ಯವಿದ್ದರೆ ಈ ಕುರಿತು ಪ್ರಮಾಣಪತ್ರ ಸಲ್ಲಿಸುತ್ತೇವೆ' ಎಂದರು.

ಬಂಧನವನ್ನು ಪ್ರಶ್ನಿಸಿರುವ ಕೇಜ್ರಿವಾಲ್ ಅವರ ಅರ್ಜಿ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ಷರತ್ತು ಉಲ್ಲಂಘನೆ– ಆರೋಪ

ಕೇಜ್ರಿವಾಲ್ ಅವರು ಜಾಮೀನಿನ ಷರತ್ತನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ ಮೆಹ್ತಾ, 'ಅವರು ಏನನ್ನು ಸೂಚಿಸುತ್ತಿದ್ದಾರೆ? ಇದು ನ್ಯಾಯಿಕ ಸಂಸ್ಥೆಗೇ ಪೆಟ್ಟು ನೀಡಿದಂತೆ' ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಖನ್ನಾ ಅವರು, ಜೂನ್ 2ರಂದು ಅವರು ಶರಣಾಗಬೇಕು ಎಂಬ ನ್ಯಾಯಾಲಯದ ಆದೇಶ ಸ್ಪಷ್ಟವಾಗಿದೆ ಎಂದರು. 'ಅದಾಗ್ಯೂ ಕೇಜ್ರಿವಾಲ್ ಅವರಿಗೆ ಪ್ರಕರಣದ ಕುರಿತು ಮಾತನಾಡುವಂತಿಲ್ಲ ಎಂದು ನಾವು ಆದೇಶದಲ್ಲಿ ಹೇಳಿಲ್ಲ' ಎಂದೂ ಪೀಠ ಹೇಳಿತು.

ಶೀಘ್ರ ಆರೋಪ ಪಟ್ಟಿ: ಇ.ಡಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ವಿರುದ್ಧ ಶೀಘ್ರದಲ್ಲಿಯೇ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಇ.ಡಿ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರ ಪೀಠಕ್ಕೆ ತಿಳಿಸಿದರು. ಕೇಜ್ರಿವಾಲ್ ತನ್ನ ಬಂಧನ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ರಾಜು ಈ ಮಾಹಿತಿ ನೀಡಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಬಸ್ ಚಾಲಕರು ಬೇಕಾಗಿದ್ದಾರೆ
ಅರ್ಹತೆ:
• ಹೆವಿ ಮೋಟಾರ್ ವಾಹನ ಚಾಲಕರಾಗಿ 2 ವರ್ಷಗಳ ಅನುಭವ ಹೊಂದಿರಬೇಕು/ ಕರ್ನಾಟಕದ ಮಾನ್ಯತೆ ಪಡೆದಿರುವ ಸರಕು ವಾಹನ ಬ್ಯಾಡ್ಜ್ ಹೊಂದಿರಬೇಕು.
• 7ನೇ ತರಗತಿ ಉತ್ತೀರ್ಣರಾಗಿರಬೇಕು.
• ವೇತನ: ರೂ.23,000/– (ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯವಿರುತ್ತದೆ).
ಸಂಪರ್ಕಿಸಬೇಕಾದ ದೂರವಾಣಿ: ಚಿಕ್ಕಬಳ್ಳಾಪುರ: 77952 24245, ತುಮಕೂರು: 95388 66744 ಶಿವಮೊಗ್ಗ: 84949 00181 ಮಂಡ್ಯ, ರಾಮನಗರ, ಮೈಸೂರು, ಚಾಮರಾಜನಗರ: 80509 80889, 86188 76846

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000-17,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೋಗ 8095555517

Cook

VACANCY FOR Dosa Master / South Indian Chef in Goa. Salary + Accommodation + Food Location - Panaji Goa Contact - 9513314398

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore Road

SALE 3 BHK Flats Brigade Panorama on Mysore Road, Luxurious Amenities Close to School College Metro STN 9686911410

ಪ್ರವಾಸ

Travel

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್ ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080-22429289 9448119290 9019301300

13 ದಿನಗಳ ಚಾರ್‌ಧಾಮ್ ಯಾತ್ರೆ. 10 ದಿನಗಳ ಗುಜರಾತ್. 7 ದಿನಗಳ ಕಾಶಿ,ಅಯೋಧ್ಯ 12ದಿನಗಳ ನೇಪಾಳ ಮುಕ್ತಿನಾಥ್. ಸಂಪರ್ಕಿಸಿ: ನಂದಿ ಹಾಲಿಡೇಸ್ DVG ರಸ್ತೆ, ಬೆಂಗಳೂರು.4. 9980270467 080-41467722

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 5/6/24 ಕಾಶಿ ಪ್ರವಾಸ ಗಯಾ, ಅಯೋಧ್ಯೆ ಪ್ರಯಾಗ್ರಾಜ್. 12/6/24 ನೇಪಾಳ ಮುಕ್ತಿನಾಥ್, ಪಶುಪತಿನಾ ಅಯೋಧ್ಯೆ. 9964527782, 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com ಬುಕ್ ಮಾಡಿ *Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ. ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಭಾರತ ಫುಟ್‌ಬಾಲ್ ಅಂಗಳದ 'ನೀಲಮಣಿ'

• ಗಿರೀಶ ದೊಡ್ಡಮನಿ

ಬೆಂಗಳೂರು: ಕ್ರಿಕೆಟ್ ಆಟವನ್ನೇ ಉಂಡುಟ್ಟು ಮಲಗುವ ಭಾರತ ದೇಶದಲ್ಲಿ ಫುಟ್‌ಬಾಲ್ ಕ್ರೀಡೆಗೂ ಅಭಿಮಾನಿಗಳ ದೊಡ್ಡ ಬಳಗವನ್ನು ಸೃಷ್ಟಿಸಿದ ಶ್ರೇಯ ಸುನಿಲ್ ಚೆಟ್ರಿಗೆ ಸಲ್ಲಬೇಕು.

ಕಳೆದ ಎರಡು ದಶಕಗಳಲ್ಲಿ ಕ್ರಿಕೆಟ್ ಭರಾಟೆ ಹೆಚ್ಚುತ್ತಲೇ ಬಂದಾಗ ಉಳಿದ ಕ್ರೀಡೆಗಳು ದುರ್ಬಲವಾಗುವ ಆತಂಕ ಎದುರಿಸಿದ್ದವು. ಅದರಲ್ಲಿ ಫುಟ್‌ಬಾಲ್ ಕೂಡ ಇತ್ತು. ಆದರೆ, ಇದೇ ಕಾಲಘಟ್ಟದಲ್ಲಿ ಬೇರೆ, ಬೇರೆ ಕ್ರೀಡೆಗಳಲ್ಲಿಯೂ ಕೆಲವು ಕ್ರೀಡಾಪಟುಗಳು ಪ್ರವಾಹದ ವಿರುದ್ಧ ಈಜಿ ಗೆದ್ದರು. ತಾರೆಯರಾಗಿ ಬೆಳಗಿದರು. ಅಂತಹ ಪ್ರತಿಭೆಗಳಲ್ಲಿ ಸುನಿಲ್ 'ನೀಲಮಣಿ'ಯಂತೆ ಕಂಗೊಳಿಸುತ್ತಾರೆ.

ಚೆಟ್ರಿ ಫುಟ್‌ಬಾಲ್ ಆಟದ 'ಗೋಲು ಯಂತ್ರ' ಎಂದೇ ಖ್ಯಾತರಾಗಿದ್ದಾರೆ. ಅವರ ಮಿಂಚಿನ ವೇಗದ ಓಟ, ಪಾಸ್‌ಗಳನ್ನು ಪಡೆಯುವ ಕೌಶಲ, ರಕ್ಷಣಾ ಆಟಗಾರರು ಮತ್ತು ಗೋಲ್‌ಕೀಪರ್‌ಗಳನ್ನು ವಂಚಿಸಿ ಚೆಂಡನ್ನು ಗೋಲು ಬಲೆಯೊಳಗೆ ಕಳಿಸುವ ಅವರ ಕಾಲ್ಚಳಕಕ್ಕೆ ಮನಸೋತ ಲಕ್ಷಾಂತರ ಅಭಿಮಾನಿಗಳಿದ್ದಾರೆ.

ಇದೀಗ ಚೆಟ್ರಿ ಅವರು ತಮ್ಮ 'ಆಟ–ಓಟ'ಕ್ಕೆ ವಿರಾಮ ನೀಡಲು ನಿರ್ಧರಿಸಿದ್ದಾರೆ. 'ಶೀಘ್ರದಲ್ಲಿ ಅಂತರರಾಷ್ಟ್ರೀಯ ಫುಟ್‌ಬಾಲ್ ಕ್ರೀಡೆಗೆ ವಿದಾಯ ಹೇಳುತ್ತೇನೆ. ಮುಂದಿನ ತಿಂಗಳು ನಡೆಯಲಿರುವ ಕುವೈತ್ ತಂಡದ ವಿರುದ್ಧ ಪಂದ್ಯದಲ್ಲಿ ಕೊನೆಯ ಬಾರಿ ಭಾರತ ತಂಡವನ್ನು ಪ್ರತಿನಿಧಿಸುವೆ' ಎಂದು 39 ವರ್ಷದ ಚೆಟ್ರಿ ಗುರುವಾರ ಘೋಷಿಸಿದ್ದಾರೆ.

ಸುನಿಲ್ ನಿವೃತ್ತಿಯೆಂದರೆ ಭಾರತದ ಫುಟ್‌ಬಾಲ್ ಕ್ರೀಡೆಯ ಒಂದು ಯುಗದ ಅಂತ್ಯವೇ ಸರಿ. ಭರ್ತಿ 19 ವರ್ಷಗಳ ಕಾಲ ಆಡಿದ ಸುನಿಲ್ ಈ ಕ್ರೀಡೆಗೆ ಕೊಟ್ಟ ಕಾಣಿಕೆಗಳು ಹಲವಾರು.

ಹಾಗೆ ನೋಡಿದರೆ; ಸಿಕಂದರಾಬಾದಿನಲ್ಲಿ ಜನಿಸಿದ್ದ ಸುನಿಲ್‌ಗೆ ಬಾಲ್ಯದಲ್ಲಿ ಫುಟ್‌ಬಾಲ್ ಬಗ್ಗೆ ಅಷ್ಟೇನೂ ಒಲವಿರಲಿಲ್ಲ. ಆದರೆ ಪ್ರತಿಭೆ ಅವರ ರಕ್ತದಲ್ಲಿಯೇ ಇತ್ತು. ಸೇನಾಧಿಕಾರಿಯೂ ಆಗಿದ್ದ ತಂದೆ ಕೆ.ಬಿ. ಚೆಟ್ರಿ ಫುಟ್‌ಬಾಲ್ ಪ್ರೇಮಿಯಾಗಿದ್ದವರು. ಅಲ್ಲದೇ ತಾಯಿ ಸುಶೀಲಾ ಅವರು ನೇಪಾಳ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಆಟಗಾರ್ತಿಯಾಗಿದ್ದರು. ಅದರಿಂದಾಗಿ ಸುನಿಲ್ ಅವರನ್ನು ಫುಟ್‌ಬಾಲ್ ಕಲಿಕೆಗೆ ಅಕಾಡೆಮಿಗೆ ಕಳಿಸಿದರು. ಹೈದರಾಬಾದ್, ದೆಹಲಿ, ಕೋಲ್ಕತ್ತ ಮತ್ತು ಬೆಂಗಳೂರಿನಲ್ಲಿ ಫುಟ್‌ಬಾಲ್ ಆಟದ ಪಾಠ ಕಲಿತರು.

'ನಾನು ವೃತ್ತಿಪರ ಫುಟ್‌ಬಾಲ್ ಆಟಗಾರನಾಗುತ್ತೇನೆ ಎಂದುಕೊಂಡಿರಲಿಲ್ಲ. ಕಾಲೇಜು ದಿನಗಳಲ್ಲಿದ್ದಾಗ ದೆಹಲಿಯ ಕ್ಲಬ್ ಪರವಾಗಿ ಡುರಾಂಡ್ ಕಪ್ ಟೂರ್ನಿಯಲ್ಲಿ ಆಡಿದ್ದೆ. ಆಗ ನನ್ನ ಆಟವನ್ನು ನೋಡಿ ಮೋಹನ್ ಬಾಗನ್ ಕ್ಲಬ್ ತನ್ನ ಅಕಾಡೆಮಿಗೆ ಆಹ್ವಾನಿಸಿತು. ಬಳಿಕ ನನ್ನೊಂದಿಗೆ ಒಪ್ಪಂದ ಕೂಡ ಮಾಡಿಕೊಂಡಿತು. ಅಲ್ಲಿಂದ ಪಯಣ ಆರಂಭವಾಯಿತು' ಎಂದು ಕೆಲವರ್ಷಗಳ ಹಿಂದೆ ಚೆಟ್ರಿ ಹೇಳಿಕೊಂಡಿದ್ದರು.

ಆ ಕಾಲಘಟ್ಟದಲ್ಲಿ ಭಾರತದಲ್ಲಿ ಫುಟ್‌ಬಾಲ್ ಪ್ರೇಮಿಗಳ ಕಣ್ಮಣಿಯಾಗಿದ್ದ ಭೈಚುಂಗ್ ಭುಟಿಯಾ ಅವರು ಉತ್ತುಂಗ ಲಯದಲ್ಲಿದ್ದರು. ಯುವ ಆಟಗಾರರ ಪ್ರೇರಣೆಯಾಗಿದ್ದರು. 2011ರಲ್ಲಿ ಅವರು ನಿವೃತ್ತಿಯಾಗುವ ಆರು ವರ್ಷ ಮುನ್ನ ಚೆಟ್ರಿ ಭಾರತ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದರು. ಭೈಚುಂಗ್ ವಿದಾಯ ಹೇಳಿದ ನಂತರ ದೇಶದ ಫುಟ್‌ಬಾಲ್ ಜ್ಯೋತಿಯನ್ನು ತಮ್ಮ ಕೈಗೆತ್ತಿಕೊಂಡು ಇಲ್ಲಿಯವರೆಗೆ ಪ್ರಜ್ವಲಿಸುವಂತೆ ನೋಡಿಕೊಂಡಿದ್ದಾರೆ. ಅವರ ಆಟದ ಸಾಧನೆಗಳನ್ನು ಅಂಕಿ ಸಂಖ್ಯೆಗಳ ಮೂಲಕ ಗುರುತಿಸಿಬಹುದು.

ಅಂತರರಾಷ್ಟ್ರೀಯ ಫುಟ್‌ಬಾಲ್ ಅತಿ ಹೆಚ್ಚು ಗೋಲು ಗಳಿಸಿರುವವರ ಯಾದಿಯಲ್ಲಿ ಸುನಿಲ್ ಅವರು, ದಿಗ್ಗಜರಾದ ಪೋರ್ಚುಗಲ್ ದೇಶದ ಕ್ರಿಸ್ಟಿಯಾನೊ ರೊನಾಲ್ಡೊ, ಇರಾನಿನ ಅಲಿ ದಾಲಿ ಹಾಗೂ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ನಂತರದ ಸ್ಥಾನದಲ್ಲಿದ್ದಾರೆ. ಅವರ ನಾಯಕತ್ವದ ಕಾಲಘಟ್ಟದಲ್ಲಿ ಭಾರತ ತಂಡವು ಫಿಫಾ ರ‍್ಯಾಂಕಿಂಗ್‌ನಲ್ಲಿ 100ರೊಳಗೆ ಬಂದು ನಿಂತಿದ್ದು ಸಣ್ಣ ಸಾಧನೆಯಲ್ಲ. ಆದರೆ ಫಿಫಾ ವಿಶ್ವಕಪ್ ಮತ್ತು ಒಲಿಂಪಿಕ್ಸ್‌ನಲ್ಲಿ ಅವರ ನಾಯಕತ್ವದ ತಂಡ ಆಡುವುದನ್ನು ನೋಡುವ ಭಾರತೀಯರ ಕನಸು ಮಾತ್ರ ನನಸಾಗಲಿಲ್ಲ. ಆದರೆ ಭವಿಷ್ಯದಲ್ಲಿ ಈ ಕನಸನ್ನು ನನಸು ಮಾಡುವಂತ ಸ್ಫೂರ್ತಿದಾಯಕ ವಾತಾವರಣವನ್ನು ಅವರು ನಿರ್ಮಿಸಿರುವುದಂತೂ ಸತ್ಯ.

ನಾನು ಇಂಥ ಶ್ರೇಷ್ಠ ಆಟಗಾರನಿಂದ ಮಾರ್ಗದರ್ಶನ ಪಡೆದ ಭಾಗ್ಯಶಾಲಿ. ಅಣ್ಣಾ, ಇನ್ನೂ ಕಾಲಮಿಂಚಿಲ್ಲ. ನಿವೃತ್ತಿ ಪ್ರಕಟಿಸಿದ ವಿಡಿಯೊ ಅಳಿಸಿಹಾಕಿ, ತಮಾಷೆಗೆಂದು ಹೇಳಿಬಿಡು. ನಾನು ಇನ್ನೂ ಆಡುವೆ ಎಂದು ಹೇಳು.
–ಗುರುಪ್ರೀತ್ ಸಿಂಗ್ ಸಂಧು
ಭಾರತ ತಂಡದ ಗೋಲ್‌ಕೀಪರ್

ಆಡಿದ ತಂಡಗಳು

ಭಾರತ, ಮೋಹನ್ ಬಾಗನ್, ಜೆಸಿಟಿ, ಈಸ್ಟ್ ಬೆಂಗಾಲ್, ಡೆಂಪೊ, ಕೆನ್ಸಾಸ್ ಸ್ಪೋರ್ಟ್ಸ್ ವಿಜಾರ್ಡ್ಸ್, ಚಿರಾಗ್ ಯುನೈಟೆಡ್, ಸ್ಪೋರ್ಟಿಂಗ್ ಸಿಪಿ ಬಿ, ಚರ್ಚಿಲ್ ಬ್ರದರ್ಸ್ (ಲೋನ್), ಮುಂಬೈ ಸಿಟಿ, ಬೆಂಗಳೂರು ಎಫ್‌ಸಿ.

'ಗೋಲ್ಡನ್ ಟ್ವೀಟ್'

ಮುಂಬೈನಲ್ಲಿ 2018ರಲ್ಲಿ ಇಂಟರ್‌ಕಾಂಟಿನೆಂಟಲ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ನಡೆದಾಗ ಸುನಿಲ್ ಚೆಟ್ರಿ ಮಾಡಿದ್ದ ಟ್ವೀಟ್ (ಈಗ ಎಕ್ಸ್) ಸಂದೇಶವೊಂದು ಭಾರಿ ಸಂಚಲನ ಮೂಡಿಸಿತ್ತು.

'ಇವತ್ತು ಕ್ರೀಡಾಂಗಣಕ್ಕೆ ಬಂದು ಬೆಂಬಲಿಸಿದವರಿಗೆ ನನ್ನ ಧನ್ಯವಾದಗಳು. ಆದರೆ ಈ ವಿಡಿಯೊ ಮಾಡುತ್ತಿರುವುದು ತಮಗಾಗಿ ಅಲ್ಲ. ಇಲ್ಲಿಗೆ ಬರದೇ ಇರುವವರಿಗಾಗಿ. ನಾನು ಮಾತಾಡುತ್ತಿರುವುದು, ಮನವಿ ಮಾಡುತ್ತಿರುವುದು ಫುಟ್‌ಬಾಲ್ ಅಭಿಮಾನಿಯಲ್ಲದವರಿಗಾಗಿ. ದಯವಿಟ್ಟು ಬನ್ನಿ. ಎರಡು ಕಾರಣಗಳಿಗಾಗಿ ನಾವು ಆಡುವುದನ್ನು ನೋಡಿ. ಮೊದಲನೆಯದು ಇದು ಜಗತ್ತಿನ ಅತ್ಯಂತ ಶ್ರೇಷ್ಠ ಕ್ರೀಡೆ, ಎರಡನೇಯದ್ದು ನಾವು ದೇಶಕ್ಕಾಗಿ ಆಡುತ್ತಿರುವುದು. ಒಮ್ಮೆ ನೀವು ಇಲ್ಲಿ ಬಂದು ನೋಡಿ. ತಾವೆಲ್ಲರೂ ಮರಳುವಾಗ ಮನಪರಿವರ್ತನೆಯೊಂದಿಗೆ ತೆರಳುವುದು ಖಂಡಿತ ಎಂಬ ಭರವಸೆ ನಮಗಿದೆ. ಯುರೋಪಿಯನ್ ಕ್ಲಬ್ ಫುಟ್‌ಬಾಲ್ ನೋಡುವವರಿಗೂ ಒಂದು ಮಾತು. ಆ ಪಂದ್ಯಗಳಿಗೂ ನಮ್ಮಲ್ಲಿಯ ಆಟಕ್ಕೂ ಸಾಟಿಯಿಲ್ಲ. ಅವರ ಸಮೀಪಕ್ಕೂ ಇಲ್ಲಿಯ ಆಟವಿಲ್ಲ. ಸರಿ. ಆದರೆ ನಮ್ಮ ಗುರಿ, ಸಮರ್ಪಣೆ ಮತ್ತು ಶ್ರಮ ಕೂಡ ಅದೇ ಮಟ್ಟದ್ದು. ಬನ್ನಿ ನೋಡಿ. ನಿಮ್ಮ ಸಮಯ ವ್ಯರ್ಥವಾಗುವುದಿಲ್ಲ ಎಂಬ ಭರವಸೆ ನೀಡುತ್ತೇನೆ. ಭಾರತದ ಫುಟ್‌ಬಾಲ್ ಬಗ್ಗೆ ವಿಶ್ವಾಸ ಕಳೆದುಕೊಂಡವರಲ್ಲೂ ಮನವಿ ಮಾಡುತ್ತೇನೆ. ನಿಮ್ಮಲ್ಲಿ ಮತ್ತೆ ಭರವಸೆ ಹುಟ್ಟಿಸುವ ಪ್ರಯತ್ನ ನಮ್ಮದು' ಎಂದು ಚೆಟ್ರಿ ಅವರು ವಿಡಿಯೊದಲ್ಲಿ ಭಾವುಕರಾಗಿ ಹೇಳಿದ್ದ ಮಾತುಗಳಿವು.

ಅವರಿಗೆ ಕ್ರಿಕೆಟಿಗ ವಿರಾಟ್ ಕೊಹ್ಲಿ ಸೇರಿದಂತೆ ಹಲವು ಆಟಗಾರರೂ ಅಭಿಮಾನಿಗಳಿಗೆ ಮನವಿ ಮಾಡುವ ಸಂದೇಶಗಳನ್ನು ಹಾಕಿದರು.

ಚೆಟ್ರಿ ಅವರ ಸಂದೇಶಕ್ಕೆ ಟ್ವಿಟರ್ ತಾಣವು 'ಗೋಲ್ಡನ್ ಟ್ವೀಟ್' ಗೌರವ ಕೊಟ್ಟಿತ್ತು. ಅವರ ಮಾತುಗಳು ಅಭಿಮಾನಿಗಳ ಮನ ತಟ್ಟಿದವು. ನಂತರದ ಪಂದ್ಯಕ್ಕೆ ಮೈದಾನ ಕಿಕ್ಕಿರಿದು ತುಂಬಿತು.

ಪ್ರಮುಖ ಟೂರ್ನಿಗಳಲ್ಲಿ ಸಾಧನೆ

ವರ್ಷ	ಕಪ್	ಸ್ಥಾನ
2008	ಎಫ್‌ಸಿ ಚಾಲೆಂಜ್ ಕಪ್	ವಿಜೇತ
2011	ಸ್ಯಾಫ್ ಚಾಂಪಿಯನ್‌ಷಿಪ್	ವಿಜೇತ
2015	ಸ್ಯಾಫ್ ಚಾಂಪಿಯನ್‌ಷಿಪ್	ವಿಜೇತ
2021	ಸ್ಯಾಫ್ ಚಾಂಪಿಯನ್‌ಷಿಪ್	ವಿಜೇತ
2023	ಸ್ಯಾಫ್ ಚಾಂಪಿಯನ್‌ಷಿಪ್	ವಿಜೇತ
2008	ಸ್ಯಾಫ್ ಚಾಂಪಿಯನ್‌ಷಿಪ್	ರನ್ನರ್ಸ್ ಅಪ್
2013	ಸ್ಯಾಫ್ ಚಾಂಪಿಯನ್‌ಷಿಪ್	ರನ್ನರ್ಸ್ ಅಪ್

ವಿರಾಟ್ ಜೊತೆಗೆ ಬ್ಯಾಟಿಂಗ್

ಕ್ರಿಕೆಟ್ ಆಟದ ರನ್ ಯಂತ್ರ ವಿರಾಟ್ ಕೊಹ್ಲಿ ಮತ್ತು ಸುನಿಲ್ ಚೆಟ್ರಿ ಅವರು ಆಪ್ತಮಿತ್ರರು. 2019ರಲ್ಲಿ ವಿರಾಟ್ ಮತ್ತು ಚೆಟ್ರಿ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಿದ್ದರು. ಆ ವರ್ಷ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ ತಂಡವು ಚಾಂಪಿಯನ್ ಆಗಿತ್ತು. ಅದೇ ಹೊತ್ತಿನಲ್ಲಿ ಬೆಂಗಳೂರಿನಲ್ಲಿ ಅಭ್ಯಾಸ ಮಾಡುತ್ತಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರನ್ನು ಹುರಿದುಂಬಿಸಲು ಚೆಟ್ರಿ ಕ್ರೀಡಾಂಗಣಕ್ಕೆ ಬಂದಿದ್ದರು.

ಅವತ್ತು ನೆಟ್ಸ್‌ನಲ್ಲಿ ಕ್ರಿಕೆಟ್ ಆಡುವ ಕೌಶಲಗಳನ್ನು ವಿರಾಟ್ ಅವರು ಚೆಟ್ರಿಗೆ ಕಲಿಸಿದ್ದರು. ಅಲ್ಲಿಂದ ಅವರಿಬ್ಬರ ಸ್ನೇಹ ಗಾಢವಾಗಿ ಬೆಳೆಯಿತು. ಅವರು ದೀರ್ಘ ಕಾಲ ಮಾಡಿದ ಚಾಟಿಂಗ್ ವಿಡಿಯೊಗಳು ಕೋವಿಡ್ ಸಂದರ್ಭದಲ್ಲಿ ಕ್ರೀಡಾಭಿಮಾನಿಗಳ ಗಮನ ಸೆಳೆದಿದ್ದವು.

'ನನ್ನ ಹೆಮ್ಮೆಯ ಸಹೋದರ' ಎಂದು ವಿರಾಟ್ ಕೊಹ್ಲಿ ಎಕ್ಸ್‌ನಲ್ಲಿ ಚೆಟ್ರಿ ನಿವೃತ್ತಿಗೆ ಶುಭ ಹಾರೈಸಿದ್ದಾರೆ.

'ಚಾಣಾಕ್ಷ ಆಟಗಾರ'

ಬೆಂಗಳೂರು: 'ಸುನಿಲ್ ಚೆಟ್ರಿ ಚಾಣಾಕ್ಷ ಆಟಗಾರ. ಗಂಭೀರ ಗಾಯಗಳಾಗದಂತೆ ತಮ್ಮನ್ನು ತಾವು ರಕ್ಷಿಸಿಕೊಂಡು ಸಾಧನೆ ಮಾಡಿದ ಅಪರೂಪದ ವ್ಯಕ್ತಿ' ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವೈದ್ಯಕೀಯ ಸಮಿತಿಯ ಚೇರ್ಮನ್ ಆಗಿರುವ ಧಾರವಾಡದ ಡಾ. ಕಿರಣ ಕುಲಕರ್ಣಿ ಹೇಳಿದ್ದಾರೆ. '2011ರಲ್ಲಿ ದೋಹಾದಲ್ಲಿ ಏಷ್ಯನ್ ಕಪ್ ಟೂರ್ನಿಯಲ್ಲಿ ಭಾರತ ಆಡಿತ್ತು. ಆಗ ಭೈಚುಂಗ್ ಭುಟಿಯಾ ನಾಯಕರಾಗಿದ್ದರು. ಸುನಿಲ್ ಚೆಟ್ರಿ ತಂಡದಲ್ಲಿದ್ದರು. ಆ ತಂಡಕ್ಕೆ ನಾನು ಕ್ರೀಡಾ ವೈದ್ಯನಾಗಿ ಕಾರ್ಯನಿರ್ವಹಿಸಿದ್ದೆ. ಇಬ್ಬರೂ ಆಟಗಾರರಿಗೆ ನಿಕಟವಾಗಿದ್ದೆ. ಚೆಟ್ರಿ ಒಳ್ಳೆಯ ಆಟಗಾರ ಅಷ್ಟೇ ಅಲ್ಲ. ಸಹೃದಯಿ ವ್ಯಕ್ತಿಯಾಗಿದ್ದರು. ಭುಟಿಯಾ ನಂತರ ತಂಡವನ್ನು ಸಮರ್ಥವಾಗಿ ನಡೆಸಿದ್ದಾರೆ' ಎಂದರು. 'ಭೈಚುಂಗ್ ಮತ್ತು ಚೆಟ್ರಿ ಅವರಿಬ್ಬರೂ ಅಪ್ರತಿಮರು. ತಮಗೆ ಸಿಕ್ಕ ಅವಕಾಶಗಳು ಮತ್ತು ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಂಡು ಭಾರತದ ಫುಟ್‌ಬಾಲ್ ಬೆಳೆಸಿದರು. ಎಂದು ಫಿಫಾ–ಎಎಫ್‌ಸಿಯ ಡೋಪಿಂಗ್ ಕಂಟ್ರೋಲ್ ಅಧಿಕಾರಿಯೂ ಆಗಿರುವ ಕುಲಕರ್ಣಿ ಹೇಳುತ್ತಾರೆ.

ಎಎಪಿ ಸಂಸದೆ ಮೇಲಿನ ಹಲ್ಲೆ ಪ್ರಕರಣ: ಬಿಭವ್ ವಿರುದ್ಧ ಎಫ್‌ಐಆರ್ ದಾಖಲು

ಕೇಜ್ರಿವಾಲ್ ಆಪ್ತನಿಗೆ ಎನ್‌ಸಿಡಬ್ಲ್ಯು ನೋಟಿಸ್

ನವದೆಹಲಿ (ಪಿಟಿಐ): ರಾಜ್ಯಸಭೆ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗವು (ಎನ್‌ಸಿಡಬ್ಲ್ಯು), ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿಗೆ ನೋಟಿಸ್ ನೀಡಿದೆ.

ಸ್ವಾತಿ ಮಾಲಿವಾಲ್

ಮಾಧ್ಯಮ ವರದಿಯನ್ನು ಆಧರಿಸಿ ಸ್ವಯಂಪ್ರೇರಿತವಾಗಿ ನೋಟಿಸ್ ನೀಡಿರುವ ಆಯೋಗವು, ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ವಿಚಾರಣೆಗೆ ಬರುವಂತೆ ಆಪ್ತ ಕಾರ್ಯದರ್ಶಿ ಬಿಭವ್ ಕುಮಾರ್‌ರಿಗೆ ಸೂಚಿಸಿದೆ. ಗೈರುಹಾಜರಾದರೆ ವ್ಯತಿರಿಕ್ತ ಪರಿಣಾಮ ಎದುರಿಸಬೇಕಾದಿತು ಎಂದು ಎಚ್ಚರಿಸಿದೆ.

ಈ ನಡುವೆ, ಬಿಭವ್ ಕುಮಾರ್ ವಿರುದ್ಧ ದೆಹಲಿಯ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸಕ್ಕೆ ತೆರಳಿದ್ದಾಗ, ಅವರ ಕಾರ್ಯದರ್ಶಿಯಾಗಿರುವ ಬಿಭವ್ ಕುಮಾರ್ ತಮ್ಮ ಜೊತೆಗೆ ಅನುಚಿತವಾಗಿ ವರ್ತಿಸಿದ್ದು, ದೈಹಿಕವಾಗಿ ಹಲ್ಲೆ ನಡೆಸಿದ್ದರು' ಎಂದು ಸಂಸದೆ ಸ್ವಾತಿ ಮಾಲಿವಾಲ್ ಅವರು ಆರೋಪಿಸಿದ್ದರು.

ಸಿ.ಎಂ ಕಚೇರಿಯಲ್ಲಿ ಪ್ರಮುಖ ಸ್ಥಾನದಲ್ಲಿರುವ ಬಿಭವ್ ಕುಮಾರ್ ವಿರುದ್ಧ ಕೇಳಿಬಂದ ಆರೋಪವು ಈಗ ವಿವಾದಕ್ಕೆ ತಿರುಗಿದ್ದು, ಪ್ರತಿಪಕ್ಷಗಳ ತೀವ್ರ ಟೀಕೆಗೂ ಗುರಿಯಾಗಿದೆ. ಎಎಪಿಯ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಅವರು ಕೂಡ ಹಲ್ಲೆ ಕೃತ್ಯವನ್ನು ಖಂಡಿಸಿದ್ದರು.

ಮಾಹಿತಿ ಸಂಗ್ರಹ: ಈ ಮುನ್ನ, ಹೆಚ್ಚುವರಿ ಪೊಲೀಸ್ ಆಯುಕ್ತ ಪಿ.ಎಸ್. ಕುಶ್ವಾಹಾ ನೇತೃತ್ವದ ದೆಹಲಿ ಪೊಲೀಸರ ತಂಡವು ಗುರುವಾರ ಮಾಲಿವಾಲ್ ಅವರ ನಿವಾಸಕ್ಕೆ ಭೇಟಿ ನೀಡಿತು. ಮಾಲಿವಾಲ್ ಅವರಿಂದ ನಾಲ್ಕು ತಾಸು ಮಾಹಿತಿ ಕಲೆಹಾಕಿತು.

ನನಗೆ ಆಗಿರುವ ನೋವಿಗೆ ನ್ಯಾಯ ಬೇಕು. ಬಿಜೆಪಿ ಇದನ್ನು ರಾಜಕೀಯಗೊಳಿಸುವುದು ಬೇಡ. ಪೊಲೀಸರು ನನ್ನ ಹೇಳಿಕೆ ದಾಖಲಿಸಿಕೊಂಡಿದ್ದಾರೆ.
ಸ್ವಾತಿ ಮಾಲಿವಾಲ್
ರಾಜ್ಯಸಭೆ ಸದಸ್ಯೆ, ಎಎಪಿ

ಪ್ರತಿಕ್ರಿಯೆಗೆ ಕೇಜ್ರಿವಾಲ್ ನಕಾರ, ಬಿಜೆಪಿ ವಿರುದ್ಧ ಎಎಪಿ ವಾಗ್ದಾಳಿ

ಲಖನೌ (ಪಿಟಿಐ): ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಆರೋಪ ಕುರಿತು ಪ್ರತಿಕ್ರಿಯಿಸಲು ದೆಹಲಿ ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ (ಎಎಪಿ) ಸಂಚಾಲಕ ಅರವಿಂದ ಕೇಜ್ರಿವಾಲ್ ಗುರುವಾರ ಇಲ್ಲಿ ನಿರಾಕರಿಸಿದರು.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಪಕ್ಷದ ಮುಖಂಡ ಸಂಜಯ್ ಸಿಂಗ್ ಅವರೊಂದಿಗೆ ಇಲ್ಲಿ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಕುರಿತ ಪ್ರಶ್ನೆ ಎದುರಾದಾಗ ಪ್ರತಿಕ್ರಿಯಿಸಲಿಲ್ಲ.

ಈ ಪ್ರಶ್ನೆ ಬರುತ್ತಿದ್ದಂತೆ ಮೈಕ್ ಅನ್ನು ಎಳೆದುಕೊಂಡ ಅಖಿಲೇಶ್ ಯಾದವ್ ಅವರು, 'ಸದ್ಯ, ಇದಕ್ಕಿಂತಲೂ ಪ್ರಮುಖವಾದ ಇನ್ನೂ ಹಲವು ಪ್ರಮುಖ ಸಂಗತಿಗಳಿವೆ' ಎಂದು ಪ್ರತಿಕ್ರಿಯಿಸಿದರು.

ಅವರಿಂದ ಮೈಕ್ ಕಸಿದುಕೊಂಡ ಎಎಪಿ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್, ಬಿಜೆಪಿಯ ವಿರುದ್ಧ ಹರಿಹಾಯ್ದರು. ಮಣಿಪುರದಲ್ಲಿ ಮಹಿಳೆಯರ ನಗ್ನ ಮೆರವಣಿಗೆ, ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣ ವಿಷಯ ಪ್ರಸ್ತಾಪಿಸಿದರು.

'ಮಣಿಪುರದಲ್ಲಿ ಮಹಿಳೆಯರ ನಗ್ನ ಮೆರವಣಿಗೆ ಕುರಿತು ಇಡೀ ದೇಶಕ್ಕೇ ನೋವಿದೆ. ಸಾವಿರಾರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದ ಪ್ರಜ್ವಲ್ ರೇವಣ್ಣರಿಗೆ ದೇಶ ಬಿಟ್ಟು ಹೋಗಲು ಬಿಜೆಪಿ ಅವಕಾಶ ಕಲ್ಪಿಸಿದೆ' ಎಂದು ಹರಿಹಾಯ್ದರು.

ದೆಹಲಿಯಲ್ಲಿ ಮಹಿಳಾ ಕುಸ್ತಿಪಟುಗಳು ಧರಣಿ ನಡೆಸುವಾಗ, ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಸ್ವಾತಿ ತೆರಳಿದ್ದರು. ಆಗ ಪೊಲೀಸರೇ ಎಳೆದಾಡಿ, ಹಲ್ಲೆ ನಡೆಸಿದ್ದರು. ಕುಲದೀಪ್ ಸಿಂಗ್ ಸೆಂಗರ್, ಹಾಥರಸ್ ಪ್ರಕರಣಗಳಲ್ಲೂ ಪ್ರಧಾನಿ ಇದುವರೆಗೂ ಒಂದೇ ಒಂದು ಮಾತು ಆಡಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

'ಗೂಂಡಾ' ರೀತಿ ಕೇಜ್ರಿವಾಲ್ ವರ್ತನೆ–ಬಿಜೆಪಿ

ನವದೆಹಲಿ (ಪಿಟಿಐ): ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ 'ಮೌನ' ತಳೆದಿದ್ದಾರೆ. ಅವರು ಕೂಡ ಹೆಚ್ಚು ಕಡಿಮೆ ಗೂಂಡಾ ರೀತಿ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ಟೀಕಿಸಿದೆ.

'ದೂರಿನ ಪ್ರಕಾರ, ಕೇಜ್ರಿವಾಲ್ ಅವರೇ ಪ್ರಮುಖ ಕ್ರಿಮಿನಲ್ ಆಗಿದ್ದಾರೆ. ಅವರ ಆಪ್ತರು ಸ್ವಾತಿ ಅವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಕೇಜ್ರಿವಾಲ್ ಅವರ 'ಮೌನ'ಕ್ಕೆ ಹೆಚ್ಚಿನ ಅರ್ಥಗಳಿವೆ. ಜೈಲಿನಿಂದ ಹೊರಬಂದಿರುವ ಅವರು ಮುಖ್ಯಮಂತ್ರಿಗಿಂತಲೂ ಹೆಚ್ಚಾಗಿ ಗೂಂಡಾ ರೀತಿ ವರ್ತಿಸುತ್ತಿದ್ದಾರೆ. ಆರೋಪಿ ಬಿಭವ್ ಕುಮಾರ್ ಗುರುವಾರ ಮುಖ್ಯಮಂತ್ರಿ ಅವರ ಜೊತೆಗೆ ಕಾಣಿಸಿಕೊಂಡಿದ್ದು, ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಾಗಿದೆ ಎಂದು ಆಗ್ರಹಿಸಿದರು.

ಮತಾಂತರ ಪ್ರಕರಣ: ವಿಚಾರಣೆಗೆ ತಡೆ

ನವದೆಹಲಿ (ಪಿಟಿಐ): ಹಿಂದೂಗಳನ್ನು ಕ್ರೈಸ್ತರನ್ನಾಗಿ ಅಕ್ರಮವಾಗಿ ಮತಾಂತರಗೊಳಿಸಿದ ಆರೋಪದ ಅಡಿ 'ಸ್ಯಾಮ್ ಹಿಗ್ಗಿನ್‌ಬಾಟಮ್ ಕೃಷಿ, ತಂತ್ರಜ್ಞಾನ ಮತ್ತು ವಿಜ್ಞಾನ ವಿಶ್ವವಿದ್ಯಾಲಯ'ದ ಕುಲಪತಿ ಹಾಗೂ ಇತರರ ವಿರುದ್ಧ ದಾಖಲಿಸಿದ ಎಫ್‌ಐಆರ್ ಆಧರಿಸಿ ಉತ್ತರ ಪ್ರದೇಶದ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಆರೋಪಿಗಳಿಗೆ ಬಂಧನದಿಂದ ರಕ್ಷಣೆ ಹಾಗೂ ಜಾಮೀನು ನೀಡಿರುವ ಸುಪ್ರೀಂ ಕೋರ್ಟ್, ವಿಚಾರಣಾ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಯಲು ಅವಕಾಶ ಕೊಡಬೇಕು ಎಂದು ಉತ್ತರ ಪ್ರದೇಶ ಸರ್ಕಾರ ಮಂಡಿಸಿದ್ದ ಕೋರಿಕೆಯನ್ನು ಒಪ್ಪಲಿಲ್ಲ.

'ಎಫ್‌ಐಆರ್‌ಗಳ ವಿಚಾರವಾಗಿ ವಿಚಾರಣಾ ನ್ಯಾಯಾಲಯದಲ್ಲಿ ವಿಚಾರಣೆಯು ಮುಂದುವರಿಯಬಾರದು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು ಆದೇಶದಲ್ಲಿ ಹೇಳಿದೆ.

ವಿಶ್ವವಿದ್ಯಾಲಯದ ಕುಲಪತಿ ರಾಜೇಂದ್ರ ಬಿಹಾರಿ ಲಾಲ್ ಮತ್ತು ಇತರರ ವಿರುದ್ಧದ ವಿಚಾರಣೆಗೆ ತಡೆ ನೀಡಬೇಕು ಎಂದು ಅವರ ಪರ ವಕೀಲರು ಮನವಿ ಮಾಡಿದ್ದರು. ಯಾವೊಬ್ಬ ಸಂತ್ರಸ್ತರ ಹೇಳಿಕೆಯನ್ನೂ ಪೊಲೀಸರು ದಾಖಲಿಸಿಲ್ಲ ಎಂದು ವಕೀಲರು ಪೀಠಕ್ಕೆ ತಿಳಿಸಿದ್ದರು.

'ನಗದು ಪತ್ತೆಯಾಗಿದ್ದ ಫ್ಲ್ಯಾಟ್ ಸಚಿವರದ್ದೆ'

ರಾಂಚಿ (ಪಿಟಿಐ): ₹32 ಕೋಟಿ ನಗದು ಪತ್ತೆಯಾಗಿದ್ದ ರಾಂಚಿಯ ಫ್ಲ್ಯಾಟ್ ಸಚಿವ ಆಲಂಗೀರ್ ಆಲಂ ಅವರದ್ದೇ ಆಗಿದೆ. ತಮ್ಮ ಇಲಾಖೆಯಿಂದ ಅನುಮೋದನೆ ನೀಡಲಾಗುತ್ತಿದ್ದ ಎಲ್ಲ ಟೆಂಡರ್‌ಗಳಿಗೂ ಶೇ 1.5 ಕಮಿಷನ್ ಅನ್ನು ಅವರು ನಿಗದಿಪಡಿಸಿದ್ದರು ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಗುರುವಾರ ಆರೋಪಿಸಿದೆ.

ಕಳೆದ ವಾರ ಆಲಂ ಅವರ ಆಪ್ತ ಸಹಾಯಕ ಸಂಜೀವ್ ಕುಮಾರ್ ಲಾಲ್ ಮತ್ತು ಅವರ ಮನೆಗೆಲಸ ಮಾಡುತ್ತಿದ್ದ ಜಹಾಂಗೀರ್ ಆಲಂ ಅವರು ಇದ್ದ ಪ್ರದೇಶದಲ್ಲಿ ನಗದು ಪತ್ತೆಯಾಗಿತ್ತು. ನಂತರ ಇಬ್ಬರನ್ನೂ ಇ.ಡಿ ಬಂಧಿಸಿತ್ತು. ಬುಧವಾರ ಆಲಂ ಅವರನ್ನೂ ಬಂಧಿಸಿದ್ದ ಇ.ಡಿ, ಗುರುವಾರ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)ಯ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಹಾಜರುಪಡಿಸಿತು.

ಕಳೆದ ವರ್ಷ ಗ್ರಾಮೀಣಾಭಿವೃದ್ಧಿ ಇಲಾಖೆಯ ಮುಖ್ಯ ಎಂಜಿನಿಯರ್ ವೀರೇಂದ್ರ ಕುಮಾರ್ ಅವರನ್ನು ಬಂಧಿಸಲಾಗಿತ್ತು. ಟೆಂಡರ್‌ಗಳಿಗೆ ಅನುಮೋದನೆ ನೀಡಲು ಅವರು ಶೇ 1.5ರಷ್ಟು ಕಮಿಷನ್ ನಿಗದಿಪಡಿಸಿದ್ದು, ಸಚಿವ ಆಲಂ ಅವರ ಪರವಾಗಿ ಅದನ್ನು ಸಂಗ್ರಹಿಸುತ್ತಿದ್ದರು. ಸಂಗ್ರಹವಾದ ಕಮಿಷನ್‌ನಲ್ಲಿ ಎಲ್ಲರಿಗೂ ಪಾಲು ಹಂಚುವ ಹೊಣೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ವಿಶೇಷ ವಿಭಾಗ ಹಾಗೂ ಕಾಮಗಾರಿ ಹಂಚಿಕೆ ವಿಭಾಗದಲ್ಲಿ ಕೆಲಸ ಮಾಡುವ ಸಹಾಯಕ ಎಂಜಿನಿಯರ್‌ಗಳಿಗೆ ವಹಿಸಲಾಗಿತ್ತು ಎಂದೂ ಇ.ಡಿ.

ಆಲಂ ಆರು ದಿನ ಇ.ಡಿ. ಕಸ್ಟಡಿಗೆ

ಬಂಧನಕ್ಕೆ ಒಳಗಾಗಿರುವ ಸಚಿವ ಆಲಂಗೀರ್ ಆಲಂ ಅವರನ್ನು ಗುರುವಾರ ಆರು ದಿನಗಳ ಅವಧಿಗೆ ಇ.ಡಿ. ಕಸ್ಟಡಿಗೆ ನೀಡಿ ಪಿಎಂಎಲ್‌ಎ ವಿಶೇಷ ನ್ಯಾಯಾಲಯ ಆದೇಶಿಸಿದೆ ಎಂದು ವಕೀಲರು ತಿಳಿಸಿದರು.

ಶುಕ್ರವಾರದಿಂದ ಆಲಂಗೀರ್ ಅವರ ಇ.ಡಿ. ಕಸ್ಟಡಿಯ ಆರು ದಿನಗಳ ಅವಧಿ ಪ್ರಾರಂಭವಾಗಲಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಅವರ ಮೇಲೆ ನಿರ್ದಿಷ್ಟ ಆರೋಪಗಳು ಇಲ್ಲ. ಯಾರಿಗೆ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಕೂಡ ಹೇಳುತ್ತಿಲ್ಲ. ಎಲ್ಲವೂ ಅಸ್ಪಷ್ಟವಾಗಿದೆ. ಆಲಂ ಅವರಿಗೆ ಉಸಿರಾಟದ ಸಮಸ್ಯೆ ಇದೆ. ಎಂದು ಆಲಂ ಅವರ ವಕೀಲ ಕಿಶ್ಲೆ ಪ್ರಸಾದ್ ಹೇಳಿದರು.

ಅಗತ್ಯ ಔಷಧ ಹಾಗೂ ಔಷಧೋಪಕರಣವನ್ನು ಕಸ್ಟಡಿಯಲ್ಲಿ ಇರುವ ಅವಧಿಯಲ್ಲಿ ಸಚಿವರಿಗೆ ಒದಗಿಸಲಾಗುವುದು ಎಂದೂ ನ್ಯಾಯಾಲಯ ತಿಳಿಸಿದೆ.

ಕೈ ಬದಲು ನಾಲಗೆ ಆಪರೇಷನ್

ಕೋಯಿಕ್ಕೋಡ್ (ಪಿಟಿಐ): ಸರ್ಕಾರಿ ಆಸ್ಪತ್ರೆಯ ವೈದ್ಯನೊಬ್ಬ, 4 ವರ್ಷದ ಹೆಣ್ಣು ಮಗುವಿನ ಕೈಗೆ ಶಸ್ತ್ರಚಿಕಿತ್ಸೆ ಮಾಡುವ ಬದಲು ಮಗುವಿನ ನಾಲಗೆಗೆ ಶಸ್ತ್ರಚಿಕಿತ್ಸೆ ಮಾಡಿರುವ ವಿಚಿತ್ರ ಘಟನೆ ಕೇರಳದಲ್ಲಿ ನಡೆದಿದೆ. ಇಂಥದ್ದೊಂದು ಅಚಾತುರ್ಯ ಮಾಡಿರುವ ನಿರ್ಲಕ್ಷ್ಯ ವೈದ್ಯನನ್ನು ಅಮಾನತುಗೊಳಿಸಲಾಗಿದೆ.

ಆಗಿದ್ದೇನು?: ಮಗುವಿನ ಒಂದು ಕೈಯಲ್ಲಿ 6 ಬೆರಳುಗಳಿವೆ. ಈ ಆರನೇ ಬೆರಳನ್ನು ತೆಗೆಸಲು ಮೆಡಿಕಲ್ ಕಾಲೇಜು ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರದಲ್ಲಿ ಶಸ್ತ್ರಚಿಕಿತ್ಸೆಗೆ ನಿರ್ಧರಿಸಲಾಗಿತ್ತು. ಶಸ್ತ್ರಚಿಕಿತ್ಸೆಗೆ ನಿಗದಿಯಾಗಿದ್ದ ವೈದ್ಯ ಅಸೋಸಿಯೇಟ್ ಪ್ರೊಫೆಸರ್ ಡಾ. ಬಿಜಾನ್ ಜಾನ್ಸನ್ ಅವರು ಮಗುವಿನ ನಾಲಗೆಗೆ ಶಸ್ತ್ರಚಿಕಿತ್ಸೆಗೆ ಮಾಡಿಬಿಟ್ಟಿದ್ದಾರೆ.

ಮಗುವಿನ ಬಾಯಿಯಲ್ಲಿ ಹತ್ತಿಯನ್ನು ತುಂಬಿರುವುದನ್ನು ಗಮನಿಸಿ ನೋಡಿದಾಗ ಕೈ ಬದಲಾಗಿ ನಾಲಗೆಗೆ ಶಸ್ತ್ರಚಿಕಿತ್ಸೆ ಮಾಡಿರುವ ದೋಷವು ಬೆಳಕಿಗೆ ಬಂದಿದೆ ಎಂದು ಮಗುವಿನ ಪೋಷಕರು ತಿಳಿಸಿದ್ದಾರೆ. ಸದ್ಯ ಮಗುವಿನ ನಾಲಗೆಗೆ ಯಾವುದೇ ತೊಂದರೆ ಇಲ್ಲ.

ಪ್ರಕರಣದಲ್ಲಿ ವೈದ್ಯ ಜಾನ್ಸನ್ ಅವರನ್ನು ಅಮಾನತುಗೊಳಿಸಲಾಗಿದೆ.

ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಘಟನೆ ಕುರಿತು ತನಿಖೆಗೆ ಆದೇಶಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಮಗುವಿನ ಪೋಷಕರು ಪೊಲೀಸರಿಗೆ ದೂರು ನೀಡಿದ್ದಾರೆ.

2 ಶಸ್ತ್ರಚಿಕಿತ್ಸೆ ಇದ್ದುದೇ ಕಾರಣ

ಒಂದೇ ದಿನಾಂಕದಂದು ಇಬ್ಬರು ಮಕ್ಕಳ ಶಸ್ತ್ರಚಿಕಿತ್ಸೆಯನ್ನು ನಿಗದಿಪಡಿಸಲಾಗಿತ್ತು. ಈ ಪೈಕಿ ಒಂದು ಮಗುವಿಗೆ ನಾಲಗೆಯ ಮತ್ತು ಇನ್ನೊಂದು ಮಗುವಿಗೆ ಬೆರಳಿಗೆ ಶಸ್ತ್ರಚಿಕಿತ್ಸೆ ನಡೆಸಬೇಕಿತ್ತು. ಹೀಗಾಗಿ ಗೊಂದಲದಿಂದ ಘಟನೆ ನಡೆದಿದೆ ಎಂದು ಆಸ್ಪತ್ರೆ ತಿಳಿಸಿದೆ ಎಂದು ಮಗುವಿನ ಪೋಷಕರು ತಿಳಿಸಿದ್ದಾರೆ.

ಫಲಕ ಬಿದ್ದ ಸ್ಥಳದಲ್ಲಿ ಕಾರ್ಯಾಚರಣೆ ಅಂತ್ಯ

ಮುಂಬೈ (ಪಿಟಿಐ): ಇಲ್ಲಿಯ ಘಾಟ್‌ಕೋಪರ್‌ನ ಛೇಡಾ ನಗರ ಪ್ರದೇಶದಲ್ಲಿ ಬೃಹತ್ ಜಾಹೀರಾತು ಫಲಕ ಉರುಳಿ ಬಿದ್ದು ಅದರಡಿಯಲ್ಲಿ ಸಿಲುಕಿದ್ದವರ ರಕ್ಷಣಾ ಕಾರ್ಯಾಚರಣೆಯನ್ನು ಗುರುವಾರ ಬೆಳಿಗ್ಗೆ ಮುಕ್ತಾಯಗೊಳಿಸಲಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ತಿಳಿಸಿದೆ. ಈ ದುರ್ಘಟನೆಯಲ್ಲಿ ಒಟ್ಟು 16 ಮಂದಿ ಮೃತಪಟ್ಟಿದ್ದಾರೆ.

ಮುಂಬೈನಲ್ಲಿ ಸೋಮವಾರ ಸಂಜೆ ಇದ್ದಕ್ಕಿದ್ದ ಹಾಗೆ ಭಾರಿ ಗಾಳಿಯೊಂದಿಗೆ ಮಳೆ ಬಂದಿತ್ತು. ಆಗ ಬೃಹತ್ ಗಾತ್ರದ ಜಾಹೀರಾತು ಫಲಕವು ಪೆಟ್ರೋಲ್ ಪಂಪ್ ಮೇಲೆ ಉರುಳಿತ್ತು.

66 ಗಂಟೆಗಳ ಕಾಲ ನಡೆದ ರಕ್ಷಣಾ ಕಾರ್ಯವು ಗುರುವಾರ ಮುಕ್ತಾಯವಾಯಿತು. ಸ್ಥಳದಲ್ಲಿ ಬೇರೆ ಯಾರೂ ಸಿಲುಕಿರುವುದು ಕಂಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಅವಶೇಷಗಳನ್ನು ಸ್ವಚ್ಛಗೊಳಿಸುವ ಕೆಲಸ ನಡೆಯುತ್ತಿದೆ ಎಂದು ಬೃಹನ್‌ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಆಯುಕ್ತ ಭೂಷಣ್ ಗಾಗ್ರಾನಿ ಅವರು ಮಾಹಿತಿ ನೀಡಿದ್ದಾರೆ.

ಅಕ್ರಮ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಅಕ್ರಮ ಜಾಹೀರಾತು ಫಲಕ ಅಳವಡಿಸಿದ್ದ ಕಂಪನಿಯ ನಿರ್ದೇಶಕ ಭಾವೇಶ್ ಭಿಂಡೆಯನ್ನು ರಾಜಸ್ಥಾನದಲ್ ಉದಯಪುರಲ್ಲಿ ಗುರುವಾರ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಪ್ವಾರದಲ್ಲಿ ಉಗ್ರರ ಸಹಚರನ ಬಂಧನ, ಶಸ್ತ್ರಾಸ್ತ್ರ ವಶ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಗುರುವಾರ ಉಗ್ರರ ಸಹಚರನನ್ನು ಬಂಧಿಸಿದ್ದು, ಆತನಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಇಲ್ಲಿ ತಿಳಿಸಿದ್ದಾರೆ.

ಬಿಜೆಪಿ ನಾಯಕನ ಹತ್ಯೆ ಮೂವರು ನಕ್ಸಲರ ಬಂಧನ



ಬಿಜಾಪುರ(ಛತ್ತೀಸಗಢ) (ಪಿಟಿಐ): ಬಿಜೆಪಿ ಮುಖಂಡರೊಬ್ಬರ ಹತ್ಯೆಯಲ್ಲಿ ಪಾತ್ರವಿದೆ ಎಂಬ ಆರೋಪ ಎದುರಿಸುತ್ತಿದ್ದ ಮೂವರು ನಕ್ಸಲರನ್ನು ಬಿಜಾಪುರ ಜಿಲ್ಲೆಯಲ್ಲಿ ಗುರುವಾರ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ನಕ್ಸಲರ ಗುಂಪಿನ ಕಮಾಂಡರ್ ಮುನ್ನಾ ಮುದ್ಮಾ(32), ಮುಖಂಡ ಲಖ್ಮು ಮುದ್ಮಾ (39) ಹಾಗೂ ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್ ಸಂಘಟನೆಯ ರಾಜು ಮುದ್ಮಾ(31) ಬಂಧಿತರು. ಎಲ್ಲರೂ ಬಿಜಾಪುರ ಜಿಲ್ಲೆಯ ಚಿಂತನಪಲ್ಲಿ ಗ್ರಾಮದವರು.

'ಬಿಜಾಪುರ ಜಿಲ್ಲೆಯ ಜನಪಾಡ್ ಗ್ರಾಮ ಪಂಚಾಯಿತಿ ಸದಸ್ಯ ತಿರುಪತಿ ಕಟ್ಲಾ ಎಂಬುವವರ ಕೊಲೆಯಲ್ಲಿ ಮೂವರ ಪಾತ್ರವಿದೆ ಎಂಬ ಆರೋಪವಿದೆ. ತಿರುಪತಿ ಅವರು ತೋಯ್ನಾರ್ ಗ್ರಾಮದಲ್ಲಿ ನಡೆಯುತ್ತಿದ್ದ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳಿದ್ದಾಗ, ಆರೋಪಿಗಳು ಹರಿತವಾದ ಆಯುಧಗಳಿಂದ ಅವರ ಮೇಲೆ ಹಲ್ಲೆ ನಡೆಸಿ, ಹತ್ಯೆಗೈದಿದ್ದರು ಎಂಬ ಆರೋಪ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೇರಳ: ಮೇ 18ರಿಂದ 20ರ ವರೆಗೆ ಮಳೆ ಬಿರುಸುಗೊಳ್ಳುವ ಸಾಧ್ಯತೆ

ಹಲವು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ತಿರುವನಂತಪುರ (ಪಿಟಿಐ): ಮುಂದಿನ ಕೆಲವು ದಿನಗಳ ವರೆಗೆ ಕೇರಳದಲ್ಲಿ ಮಳೆ ಬಿರುಸುಗೊಳ್ಳುವ ಸಾಧ್ಯತೆಯಿದೆ. ಭಾರತೀಯ ಹವಾಮಾನ ಇಲಾಖೆಯು ಗುರುವಾರ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೇ 18ರಿಂದ 20ರವರೆಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಪಾಲಕ್ಕಾಡ್ ಮತ್ತು ಮಲಪ್ಪುರಜಿಲ್ಲೆಗಳಲ್ಲಿ ಮೇ 18, ಪತ್ತಣಂತಿಟ್ಟ, ಅಲಪ್ಪುಳ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ಮೇ 19 ಹಾಗೂ ಇನ್ನುಳಿದ ಏಳು ಜಿಲ್ಲೆಗಳಲ್ಲಿ ಮೇ 20ರಂದು 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಆಂಧ್ರಪ್ರದೇಶದಲ್ಲಿ 4 ದಿನ ಮಳೆ ಸಾಧ್ಯತೆ (ಅಮರಾವತಿ ವರದಿ): ಆಂಧ್ರಪ್ರದೇಶ ಹಾಗೂ ರಾಯಲಸೀಮಾದಲ್ಲಿ ಮೇ 17ರಿಂದ 20ರವರೆಗೆ ಗುಡುಗು, ಮಿಂಚು ಸೇರಿದಂತೆ ಬಿರುಗಾಳಿ ಸಹಿತ ಮಳೆಯಾಗುವ ಮುನ್ಸೂಚನೆ ನೀಡಿದೆ. ಆಂಧ್ರಪ್ರದೇಶದ ಉತ್ತರ, ದಕ್ಷಿಣ ಕರಾವಳಿ ಸೇರಿದಂತೆ ರಾಯಲಸೀಮಾ ಭಾಗದಲ್ಲಿ ಮಳೆಯಾಗುವ ನಿರೀಕ್ಷೆಯಿದೆ.

ಹಲವೆಡೆ ಸಾಧಾರಣ ಮಳೆ (ಚೆನ್ನೈ ವರದಿ): ತಮಿಳುನಾಡಿನ ಚೆನ್ನೈ ಹಾಗೂ ಸುತ್ತಲಿನ ಜಿಲ್ಲೆಗಳಲ್ಲಿ ಗುರುವಾರ ಸಾಧಾರಣ ಮಳೆಯಾಗಿದ್ದು, ತಾಪಮಾನದಿಂದ ಬಿಡುವು ದೊರೆತಂತಾಗಿದೆ.

ಹೈದರಾಬಾದ್‌ನಲ್ಲಿ ಗುರುವಾರ ಭಾರಿ ಮಳೆಯಾಗಿದೆ –ಪಿಟಿಐ ಚಿತ್ರ

ಸಿಡಿಲು ಬಡಿದು 11 ಸಾವು

ಮಾಲ್ಡಾ ವರದಿ (ಪಶ್ಚಿಮ ಬಂಗಾಳ): ಜಿಲ್ಲೆಯ ವಿವಿಧೆಡೆ ಗುರುವಾರ ಸಿಡಿಲು ಬಡಿದು 11 ಮಂದಿ ಮೃತಪಟ್ಟಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದ್ದು, ಹಲವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದೆ.

ಉತ್ತರ ಭಾರತಕ್ಕೆ ಉಷ್ಣ ಗಾಳಿ

ನವದೆಹಲಿ: ಭಾರತದ ವಾಯವ್ಯ ಭಾಗದ ರಾಜ್ಯಗಳಿಗೆ ಮುಂದಿನ ಐದು ದಿನಗಳಲ್ಲಿ ಉಷ್ಣ ಗಾಳಿ ಅಪ್ಪಳಿಸುವ ಸಾಧ್ಯತೆಯಿದೆ. ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ದೆಹಲಿ ಮೇಲೆ ತೀವ್ರ ಪರಿಣಾಮ ಬೀರುವ ಸಾಧ್ಯತೆ ಇದೆ. ಭಾರತೀಯ ಹವಾಮಾನ ಇಲಾಖೆಯು 'ಆರೆಂಜ್ ಅಲರ್ಟ್' ಘೋಷಿಸಿದೆ. ಶನಿವಾರ ದೆಹಲಿಯಲ್ಲಿ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ಸಾಧ್ಯತೆಯಿದೆ.

ಸಿಬಿಐ ಹೆಚ್ಚುವರಿ ನಿರ್ದೇಶಕರಾಗಿ ಕೃಷ್ಣ, ವೇಣುಗೋಪಾಲ್

ನವದೆಹಲಿ: ಹಿರಿಯ ಐಪಿಎಸ್ ಅಧಿಕಾರಿಗಳಾದ ಎ.ವೈ.ವಿ. ಕೃಷ್ಣ ಮತ್ತು ಎನ್. ವೇಣುಗೋಪಾಲ್ ಅವರು ಸಿಬಿಐನ ಹೆಚ್ಚುವರಿ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ.

ಇವರಿಬ್ಬರೂ 1995ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಗಳಾಗಿದ್ದು, ಎ.ವೈ.ವಿ. ಕೃಷ್ಣ ಅವರು(ಅಸ್ಸಾಂ–ಮೇಘಾಲಯ ಕೇಡರ್) ಪ್ರಸ್ತುತ ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿ(ಸಿಆರ್‌ಪಿಎಫ್) ಮಹಾ ನಿರೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವೇಣುಗೋಪಾಲ್ ಅವರು (ಹಿಮಾಚಲ ಪ್ರದೇಶ ಕೇಡರ್) ಪ್ರಸ್ತುತ ಸಿಬಿಐನ ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೃಷ್ಣ ಅವರು ಆ.6, 2028ರ ವರೆಗೆ ಹಾಗೂ ವೇಣುಗೋಪಾಲ್ ಅವರು ಮೇ 24, 2027ರವರೆಗೆ ಸಿಬಿಐನ ಹೆಚ್ಚುವರಿ ನಿರ್ದೇಶಕ ಹುದ್ದೆಯಲ್ಲಿ ಇರಲಿದ್ದಾರೆ ಎಂದು ಆಡಳಿತ ಮತ್ತು ಸಿಬ್ಬಂದಿ ಸಚಿವಾಲಯವು ತನ್ನ ಪ್ರತ್ಯೇಕ ಆದೇಶಗಳಲ್ಲಿ ತಿಳಿಸಿದೆ.

ಆಂಧ್ರಪ್ರದೇಶ: ಪೆಟ್ರೋಲ್ ಬಾಂಬ್, ಕಚ್ಚಾ ಶಸ್ತ್ರಾಸ್ತ್ರ ಪೊಲೀಸ್ ವಶಕ್ಕೆ

ಆಂಧ್ರಪ್ರದೇಶ (ಪಿಟಿಐ): ಮತದಾನದ ವೇಳೆ ಹಿಂಸಾಚಾರ ನಡೆದಿದ್ದ, ಆಂಧ್ರಪ್ರದೇಶದ ಪಿನ್ನೆಲಿ ಗ್ರಾಮದಲ್ಲಿ 50 ಪೆಟ್ರೋಲ್ ಬಾಂಬ್, ಕಲ್ಲುಗಳು, ಕುಡುಗೋಲುಗಳು ಮತ್ತು ಮದ್ಯದ ಒಡೆದಿರುವ ಸೀಸೆಗಳು ತುಂಬಿದ್ದ ಎರಡು ಚೀಲಗಳನ್ನು ಪೊಲೀಸರು ಗುರುವಾರ ವಶಪಡಿಸಿಕೊಂಡಿದ್ದಾರೆ.

'ಗ್ರಾಮದ ಎರಡು ಮನೆಗಳಿಂದ ಕಚ್ಚಾ ಮತ್ತು ದೇಶಿಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಾಧವ್ ಗರಿಕಾಪತಿ ಅವರು ತಿಳಿಸಿದ್ದಾರೆ.

'ಉದ್ವಿಗ್ನ ಪರಿಸ್ಥಿತಿಯಿರುವ ಗ್ರಾಮದಲ್ಲಿ ಮುಂಜಾಗ್ರತ ಕ್ರಮವಾಗಿ ಪ್ರತಿಯೊಂದು ಮನೆಯಲ್ಲಿ ಪರಿಶೀಲನೆ ನಡೆಸುವುದು ಉತ್ತಮ ಎಂದು ಭಾವಿಸಿ ಕಾರ್ಯಾಚರಣೆ ನಡೆಸಲಾಯಿತು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟಿರುವವರ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಮಳೆಯಿಂದಾಗಿ ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯ ರದ್ದು

ಪ್ಲೇ ಆಫ್‌ಗೆ ಸನ್‌ರೈಸರ್ಸ್ ಲಗ್ಗೆ

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ಮತ್ತು ಗುಜರಾತ್ ಟೈಟನ್ಸ್ ನಡುವಣ ಐಪಿಎಲ್ ಪಂದ್ಯ ಗುರುವಾರ ಮಳೆಯಿಂದಾಗಿ ನಡೆಯಲಿಲ್ಲ.

ಒಂದೂ ಎಸೆತ ಕಾಣದೇ ಪಂದ್ಯ ರದ್ದಾಗಿ ಉಭಯ ತಂಡಗಳಿಗೆ ತಲಾ ಒಂದು ಪಾಯಿಂಟ್ ದೊರೆಯಿತು. ಪರಿಣಾಮ ಸನ್‌ರೈಸರ್ಸ್ ತಂಡ 13 ಪಂದ್ಯಗಳಿಂದ 15 ಪಾಯಿಂಟ್ಸ್ ಕಲೆಹಾಕಿ ಪ್ಲೇಆಫ್‌ಗೆ ಸ್ಥಾನ ಖಚಿಪಡಿಸಿದ ಮೂರನೇ ತಂಡ ಎನಿಸಿತು.

ಕೋಲ್ಕತ್ತ ನೈಟ್ ರೈಡರ್ಸ್ (13 ಪಂದ್ಯಗಳಿಂದ 19 ಪಾಯಿಂಟ್) ಮತ್ತು ರಾಜಸ್ಥಾನ ರಾಯಲ್ಸ್ (16 ಪಾಯಿಂಟ್) ಇದಕ್ಕೆ ಮೊದಲೇ ಪ್ಲೇ ಆಫ್ ಸ್ಥಾನ ಖಚಿತಪಡಿಸಿಕೊಂಡಿದ್ದವು. ಸನ್‌ರೈಸರ್ಸ್ ತಂಡ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿಯಿತು.

ಆ ತಂಡಕ್ಕೆ ಇನ್ನೊಂದು ಪಂದ್ಯ (ಮೇ 19ರಂದು ಪಂಜಾಬ್ ಕಿಂಗ್ಸ್ ವಿರುದ್ಧ) ಆಡಲು ಇದೆ. 2022ರ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡಕ್ಕೆ ಎರಡನೇ ಬಾರಿ ಮಳೆ ಕಾಡಿತು. ಅದು 14 ಪಂದ್ಯಗಳಿಂದ 12 ಪಾಯಿಂಟ್ಸ್ ಕಲೆಹಾಕಿ ಲೀಗ್ ವ್ಯವಹಾರ ಪೂರೈಸಿತು. ಅಹಮದಾಬಾದಿನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯವೂ ಮಳೆಯ ಪಾಲಾದ ಪರಿಣಾಮ ಅದರ ಪ್ಲೇ ಆಫ್ ಆಸೆಯೂ ಕೊಚ್ಚಿಹೋಗಿತ್ತು.

ರಾತ್ರಿ 10.05ಕ್ಕೆ ಅಂಪೈರ್‌ಗಳಾದ ನಂದಕಿಶೋರ್ ಮತ್ತು ವಿರೇಂದರ್ ಶರ್ಮಾ ಕೊಡೆ ಹಿಡಿದುಕೊಂಡೇ ಕ್ರೀಡಾಂಗಣಕ್ಕೆ ಇಳಿದರು. ಮೈದಾನದ ಸಿಬ್ಬಂದಿ ಜೊತೆ ಮಾತುಕತೆ ನಡೆಸಿದರು. ಆದರೆ ಮಳೆ ನಿಲ್ಲುವ ಸೂಚನೆ ಕಾಣಲಿಲ್ಲ.

ಹೀಗಾಗಿ ನಿಗದಿತ ಸಮಯಕ್ಕೆ (10.56) ಕಾಯದೇ 10.10 ಗಂಟೆಗೆ ಪಂದ್ಯ ರದ್ದುಗೊಳಿಸುವ ನಿರ್ಧಾರ ಕೈಗೊಳ್ಳಲಾಯಿತು.

ಇನ್ನುಳಿದ ಒಂದು ಸ್ಥಾನಕ್ಕೆ ನಾಲ್ಕು ತಂಡಗಳ ಪೈಪೋಟಿಯಿದೆ. ಚೆನ್ನೈ ಸೂಪರ್ ಕಿಂಗ್ಸ್ (14), ರಾಯಲ್ ಚಾಲೆಂಜರ್ಸ್ ಬೆಂಗಳೂರು (12), ಲಖನೌ ಸೂಪರ್ ಜೈಂಟ್ಸ್ (12) ಕೂಡ ಪ್ಲೇ ಆಫ್ ಕಣದಲ್ಲಿವೆ. ಲಖನೌ ಶುಕ್ರವಾರ ಮುಂಬೈ ವಿರುದ್ಧ ಗೆದ್ದಲ್ಲಿ ಅದೂ 14 ಪಾಯಿಂಟ್ಸ್ ಗಳಿಸಲಿದೆ.

ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ನಡುವಣ ಪಂದ್ಯ ನಿರ್ಣಾಯಕವಾಗಲಿದೆ. ಈ ಪಂದ್ಯ ಬೆಂಗಳೂರಿನಲ್ಲಿ ಇದೇ 18ರಂದು ನಡೆಯಲಿದೆ. ಚೆನ್ನೈ (13 ಪಂದ್ಯಗಳಿಂದ 14 ಪಾಯಿಂಟ್) ಈಗ ನಾಲ್ಕನೇ ಸ್ಥಾನದಲ್ಲಿದ್ದರೆ, ಬೆಂಗಳೂರಿನ ತಂಡ (13 ಪಂದ್ಯಗಳಿಂದ 12) ಆರನೇ ಸ್ಥಾನದಲ್ಲಿದೆ. ಪಂದ್ಯಕ್ಕೆ ಮಳೆಯಿಂದ ಅಡ್ಡಿಯಾದಲ್ಲಿ ಚೆನ್ನೈ ಹಾದಿ ಸುಗಮವಾಗಲಿದೆ.

ಒಂದೊಮ್ಮೆ ಆರ್‌ಸಿಬಿ, ಕೊನೆಯ ಪಂದ್ಯದಲ್ಲಿ ಗೆದ್ದಲ್ಲಿ ಅದೂ 14 ಪಾಯಿಂಟ್ಸ್ ಗಳಿಸಲಿದೆ. ಆದರೆ ಕನಿಷ್ಠ 18 ರನ್‌ಗಳಿಂದ ಅಥವಾ 11 ಎಸೆತಗಳಿರುವಂತೆ ಗೆದ್ದಲ್ಲಿ ಮಾತ್ರ ಆರ್‌ಸಿಬಿಯ ನಿವ್ವಳ ರನ್ ದರ ಹೆಚ್ಚಿ ಪ್ಲೇಆಫ್ ಅವಕಾಶ ಸಿಗಲಿದೆ

ಅರಳಿದ ನಗು.. ಹೈದರಾಬಾದಿನ ರಾಜೀವ ಗಾಂಧಿ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ನಾಯಕ ಪ್ಯಾಟ್ ಕಮಿನ್ಸ್, ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ ಮತ್ತು ಮ್ಯಾಥ್ಯೂ ವೇಡ್ ಸ್ವಾರಸ್ಯಕರ ಚರ್ಚೆಯಲ್ಲಿ ತೊಡಗಿದರು. ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	13	9	3	19	1.428
ರಾಜಸ್ಥಾನ ರಾಯಲ್ಸ್	13	8	5	16	0.273
ಸನ್‌ರೈಸರ್ಸ್ ಹೈದರಾಬಾದ್	13	7	5	15	0.406
ಚೆನ್ನೈ ಸೂಪರ್ ಕಿಂಗ್ಸ್	13	7	6	14	0.528
ಡೆಲ್ಲಿ ಕ್ಯಾಪಿಟಲ್ಸ್	14	7	7	14	-0.377
ಆರ್‌ಸಿಬಿ	13	6	7	12	0.387
ಲಖನೌ ಸೂಪರ್ ಜೈಂಟ್ಸ್	13	6	7	12	-0.787
ಗುಜರಾತ್ ಟೈಟನ್ಸ್	14	5	7	12	-1.063
ಪಂಜಾಬ್ ಕಿಂಗ್ಸ್	13	5	8	10	-0.347
ಮುಂಬೈ ಇಂಡಿಯನ್ಸ್	13	4	9	8	-0.271

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (661)

ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್, ಪಂಜಾಬ್ ಕಿಂಗ್ಸ್ (22 ವಿಕೆಟ್)

ಗೆಲುವಿನೊಡನೆ ನಿರಾಶೆ ಮರೆಯುವ ಯತ್ನ

ಮುಂಬೈ ಇಂಡಿಯನ್ಸ್–ಲಖನೌ ಸೂಪರ್ ಜೈಂಟ್ಸ್: ಅಂತಿಮ ಲೀಗ್ ಪಂದ್ಯ ಇಂದು

ಮುಂಬೈ (ಪಿಟಿಐ): ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ಮತ್ತು ತಾಂತ್ರಿಕವಾಗಿಯಷ್ಟೇ ರೇಸ್‌ನಲ್ಲಿರುವ ಲಖನೌ ಸೂಪರ್ ಜೈಂಟ್ಸ್ ತಂಡಗಳು ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್‌ನ ತಮ್ಮ ಕೊನೆಯ ಲೀಗ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಎರಡೂ ತಂಡಗಳ ಗುರಿ– ನಿರಾಶಾದಾಯಕ ಅಭಿಯಾನವನ್ನು ಗೆಲುವಿನೊಡನೆ ಮುಗಿಸುವುದಾಗಿದೆ.

ಹಾರ್ದಿಕ್ ಪಾಂಡ್ಯ ನೇತೃತ್ವದ ಮುಂಬೈ ಇಂಡಿಯನ್ಸ್ ಹಾಲಿ ಆವೃತ್ತಿಯಲ್ಲಿ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದ ಮೊದಲ ತಂಡ ಎನಿಸಿತ್ತು. ಲಖನೌ ತಂಡಕ್ಕೆ ಕ್ಷೀಣ ಅವಕಾಶವಿದೆ. ಇದಕ್ಕಾಗಿ ಅದು ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಮುಂಬೈ ವಿರುದ್ಧ ಭಾರಿ ಅಂತರದಿಂದ ಗೆಲ್ಲಬೇಕು.

ಸತತ ಮೂರು ಸೋಲುಗಳಿಂದ ಕಂಗಾಲಾಗಿರುವ ಲಖನೌ ತಂಡ ಅಮೂಲ್ಯ ಪಾಯಿಂಟ್‌ಗಳನ್ನು ಕಳೆದುಕೊಂಡಿದೆಯಷ್ಟೇ ಅಲ್ಲ, ಅದರ ರನ್ ರೇಟ್ ಕೂಡ ಗಣನೀಯವಾಗಿ ಕುಸಿದಿದೆ.

ಮುಂಬೈ ಬ್ಯಾಟರ್‌ಗಳಿಂದ ಹೇಳಿಕೊಳ್ಳುವ ಪ್ರದರ್ಶನ ಬಂದಿಲ್ಲ. ಬೌಲಿಂಗ್‌ನಲ್ಲಿ ಬೂಮ್ರಾ (13 ಪಂದ್ಯಗಳಿಂದ 20 ವಿಕೆಟ್) ಪರಿಣಾಮಕಾರಿ ಎನಿಸಿದ್ದಾರೆ. ಆದರೆ ಇತರ ಬೌಲರ್‌ಗಳ ನಿರ್ವಹಣೆ ನಿರಾಸೆ ಮೂಡಿಸಿದೆ.

ಈ ಹಿಂದಿನ ಆರು ಇನಿಂಗ್ಸ್‌ಗಳಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರ ಗರಿಷ್ಠ ಗಳಿಕೆ ಎಂದರೆ 19! ನಾಯಕ ಪಾಂಡ್ಯ ಅವರೂ ತಂಡ ದಲ್ಲಿ ಸ್ಫೂರ್ತಿ ಮೂಡಿಸಲು ಶಕ್ತರಾಗಿಲ್ಲ.

ಪಂದ್ಯ ಆರಂಭ: ರಾತ್ರಿ 7.30. ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಜಸ್‌ಪ್ರೀತ್ ಬೂಮ್ರಾ. ಪಿಟಿಐ ಚಿತ್ರ

ಟಿ20 ರ್‍ಯಾಂಕಿಂಗ್: ಸೂರ್ಯ ಸ್ಥಾನ ಅಬಾಧಿತ

ದುಬೈ (ಪಿಟಿಐ): ಹಾರ್ದಿಕ್ ಪಾಂಡ್ಯ, ಐಸಿಸಿ ಟಿ20 ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಏಳನೇ ಕ್ರಮಾಂಕದಲ್ಲಿದ್ದು, ಉನ್ನತ ಸ್ಥಾನದಲ್ಲಿರುವ ಭಾರತದ ಆಟಗಾರ ಎನಿಸಿದ್ದಾರೆ. ಬಾಂಗ್ಲಾದೇಶದ ಶಕೀಬ್ ಅವರ ಜೊತೆಗೆ ಈಗ ಶ್ರೀಲಂಕಾದ ಸ್ಪಿನ್ನರ್ ವನಿಂದು ಹಸರಂಗ ಜಂಟಿಯಾಗಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಸೂರ್ಯಕುಮಾರ್ ಯಾದವ್ ಅಗ್ರಸ್ಥಾನ ಮುಂದುವರಿದಿದೆ.

ಪಾಂಡ್ಯ 185 ಪಾಯಿಂಟ್ಸ್ ಹೊಂದಿದ್ದು, ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ ಅವರಿಗಿಂತ ಒಂದು ಸ್ಥಾನ ಕೆಳಗಿದ್ದಾರೆ.

ಹಸರಂಗ ಮತ್ತು ಶಕೀಬ್ ತಲಾ 228 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅಫ್ಗಾನಿಸ್ತಾನದ ಮೊಹಮ್ಮದ್ ನಬಿ (218), ಜಿಂಬಾಬ್ವೆಯ ಸಿಕಂದರ್ ರಝಾ (210) ನಂತರದ ಸ್ಥಾನಗಳಲ್ಲಿದ್ದಾರೆ. ರಝಾ ಎರಡು ಸ್ಥಾನ ಬಡ್ತಿ ಪಡೆದಿದ್ದಾರೆ.

ದಕ್ಷಿಣ ಆಫ್ರಿಕಾದ ಏಡೆನ್ ಮರ್ಕರಂ (205) ಅವರು ಐದನೇ ಸ್ಥಾನದಲ್ಲಿದ್ದಾರೆ.

ಸೂರ್ಯಗೆ ಅಗ್ರಸ್ಥಾನ: ಬ್ಯಾಟರ್‌ಗಳ ಪಟ್ಟಿಯಲ್ಲಿ ಭಾರತದ ಸೂರ್ಯಕುಮಾರ್ ಯಾದವ್ (861 ಪಾಯಿಂಟ್ಸ್) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಂಗ್ಲೆಂಡ್‌ನ ಫಿಲ್ ಸಾಲ್ಟ್ (802) ಅವರಿಗಿಂತ ಸಾಕಷ್ಟು ಹಿಂದೆಯಿದ್ದಾರೆ.

ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ (781), ಬಾಬರ್ ಆಜಂ (761) ಮತ್ತು ದಕ್ಷಿಣ ಆಫ್ರಿಕಾದ ಏಡೆನ್ ಮರ್ಕರಂ (755) ನಂತರದ ಸ್ಥಾನಗಳಲ್ಲಿ ಇದ್ದಾರೆ. ಯಶಸ್ವಿ ಜೈಸ್ವಾಲ್ (714) ಆರನೇ ಸ್ಥಾನದಲ್ಲಿದ್ದಾರೆ.

ಚರ್ಚೆಗೆ ಗ್ರಾಸವಾದ ವಿರಾಟ್ ವಿಡಿಯೊ

ನಿವೃತ್ತಿಗೂ ಮುನ್ನ ಎಲ್ಲ ಸಾಧಿಸುವ ಛಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟಿಂಗ್ ತಾರೆ ವಿರಾಟ್ ಕೊಹ್ಲಿ ಅವರು ಗುರುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ವಿಡಿಯೊ ಅಭಿಮಾನಿಗಳ ವಲಯದಲ್ಲಿ ಸಂಚಲನ ಮೂಡಿಸಿದೆ.

‘ಆಟ ಮುಗಿಸುವ ಮುನ್ನ ಎಲ್ಲವನ್ನೂ ಸಾಧಿಸಬೇಕು. ಯಾವುದೇ ಕೊರಗು ಉಳಿಯಬಾರದು. ಏಕೆಂದರೆ; ಒಮ್ಮೆ ಆಟ ಮುಗಿಸಿದರೆ ಒಂದಷ್ಟು ಸಮಯ ಯಾರಿಗೂ ಕಾಣಿಸಿಕೊಳ್ಳುವುದಿಲ್ಲ’ ಎಂದು ವಿರಾಟ್ ಆ ವಿಡಿಯೊದಲ್ಲಿ ಹೇಳಿದ್ದಾರೆ.

ಇದರಿಂದಾಗಿ 35 ವರ್ಷದ ವಿರಾಟ್ ಅವರು ತಮ್ಮ ಕ್ರಿಕೆಟ್ ನಿವೃತ್ತಿಯ ಕುರಿತು ಈ ಮಾತುಗಳನ್ನು ಹೇಳಿದ್ದಾರೆಂದು ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುತ್ತಿದ್ದಾರೆ. ಅವರು ಹಾಕಿರುವ ಕೆಲವು ನಿಮಿಷಗಳ ವಿಡಿಯೊದಲ್ಲಿರುವ ಮಾತುಗಳು ನಿವೃತ್ತಿಯ ಕುರಿತ ಸಂದೇಹವನ್ನು ಹುಟ್ಟುಹಾಕುವಂತಿವೆ.

‘ಯಾವುದೇ ಕಾರ್ಯವನ್ನು ಅಪೂರ್ಣವಾಗಿ ಬಿಟ್ಟು ಹೋಗಬಾರದು. ಯಾವುದೇ ಕೊರಗು ಕೂಡ ಉಳಿಯದಂತೆ ನಾನು ಕಾರ್ಯ ಮುಗಿಸುತ್ತೇನೆಂಬ ಅಚಲ ವಿಶ್ವಾಸ ಇದೆ. ಒಮ್ಮೆ ಹೋದರೆ ಬಹಳಷ್ಟು ಸಮಯ ಕಾಣಸಿಗುವುದಿಲ್ಲ’ ಎಂದು ವಿರಾಟ್ ಹೇಳಿದ್ದಾರೆ.

‘ನಾನು ಆಡುವಷ್ಟು ಕಾಲ ಎಲ್ಲ ಸಾಮರ್ಥ್ಯವನ್ನೂ ವಿನಿಯೋಗಿಸುತ್ತೇನೆ. ಅಂತಹ ರೂಢಿಯೇ ನಾನು ನಿರಂತರವಾಗಿ ಮುಂದುವರಿಯಲು ಪ್ರೇರಣೆ’ ಎಂದು ವಿರಾಟ್ ತಮ್ಮ ಸಾಧನೆಯ ಹಸಿವಿನ ಬಗ್ಗೆ ಹೇಳಿದರು.

ವಿರಾಟ್ ಕೊಹ್ಲಿ

‘ಒಬ್ಬ ಕ್ರೀಡಾಪಟುವಾಗಿ ನನಗನಿಸುವುದೇನೆಂದರೆ; ನಮಗೆ ವೃತ್ತಿಯಲ್ಲಿ ಒಂದು ಮುಕ್ತಾಯದ ದಿನ ಇದ್ದೇ ಇರುತ್ತದೆ. ಆ ಹಿನ್ನೆಲೆಯಲ್ಲಿಯೇ ನಾನೂ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಅದು ಮಾಡಬೇಕಿತ್ತು, ಇದು ಮಾಡಬೇಕಿತ್ತು ಎಂಬುದು ಮನದಲ್ಲಿ ಉಳಿಯದಂತೆ ಎಲ್ಲವನ್ನೂ ಮಾಡಿಯೇ ವೃತ್ತಿಜೀವನ ಮುಗಿಸುವುದು ನನ್ನ ಗುರಿ’ ಎಂದಿದ್ದಾರೆ.

ಕೊಹ್ಲಿ ಅವರು ಯಾವಾಗಲೂ ತಮ್ಮ ವೃತ್ತಿ ಹಾಗೂ ವೈಯಕ್ತಿಕ ಜೀವನಗಳಿಗೆ ಆದ್ಯತೆ ಮೇರೆಗೆ ಸಮಯ ನೀಡಿದ್ದಾರೆ.

ಅವರು ಈಚೆಗೆ ತಮ್ಮ ಪತ್ನಿಯು ಎರಡನೇ ಮಗುವಿಗೆ ಜನ್ಮ ನೀಡುವ ಸಂದರ್ಭದಲ್ಲಿ ದೀರ್ಘ ರಜೆ ಪಡೆದಿದ್ದರು. ಅದಕ್ಕಾಗಿ ಐದು ಟೆಸ್ಟ್ ಗಳ ಸರಣಿಯಲ್ಲಿ ಆಡಿರಲಿಲ್ಲ. ಆದರೆ ಒಮ್ಮೆ ಆಟವಾಡಲು ಅಂಗಳಕ್ಕಿಳಿದರೆ ತಮ್ಮಲ್ಲಿರುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕಿಡುವ ಛಲಗಾರ. ರಜೆ ಮುಗಿಸಿ ಬಂದ ಮೇಲೆ ಐಪಿಎಲ್‌ನಲ್ಲಿ ಅವರು ಆಡುತ್ತಿದ್ದಾರೆ. 13 ಪಂದ್ಯಗಳಿಂದ 661 ರನ್ ಗಳಿಸಿರುವ ಅವರು ಆರೆಂಜ್ ಕ್ಯಾಪ್ ಧರಿಸಿದ್ದಾರೆ. 2008ರಿಂದ ಇಲ್ಲಿಯವರೆಗೆ ಅವರು ಆರ್‌ಸಿಬಿ ತಂಡದಲ್ಲಿ ಆಡುತ್ತಿದ್ದಾರೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡದ ಆಟಗಾರ ರಜತ್ ಪಾಟೀದಾರ್ ಅವರು ಅಭ್ಯಾಸ ನಡೆಸಿದರು. ಪ್ರಜಾವಾಣಿ ಚಿತ್ರ /ಎಸ್‌.ಕೆ.ದಿನೇಶ್

ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಮೀರಬಾ

ಬ್ಯಾಂಕಾಕ್ (ಪಿಟಿಐ): ಯಶಸ್ಸಿನ ಓಟದಲ್ಲಿರುವ ಯುವ ಷಟ್ಲರ್ ಮೀರಬಾ ಲುವಾಂಗ್ ಮೈಸ್ನಂ ಅವರು ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿದರು. ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಕೂಡ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಐದನೇ ಶ್ರೇಯಾಂಕದ ಎಚ್‌.ಎಸ್‌. ಪ್ರಣಯ್ ಅವರನ್ನು ಬುಧವಾರ ಅನಿರೀಕ್ಷಿತವಾಗಿ ಸೋಲಿಸಿದ್ದ 21 ವರ್ಷದ ಮೀರಬಾ ಎರಡನೇ ಸುತ್ತಿನ ಪಂದ್ಯದಲ್ಲಿ 21–14, 22–20ರಲ್ಲಿ ಡೆನ್ಮಾರ್ಕ್‌ನ ಮಾಡ್ಸ್ ಕ್ರಿಸ್ಟೋಫರ್‌ಸನ್ ಅವರನ್ನು ಸೋಲಿಸಿದರು. ಈ ಪಂದ್ಯ 50 ನಿಮಿಷ ನಡೆಯಿತು.

ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಮೀರಬಾ ಅವರಿಗೆ ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಹಾಗೂ ಸ್ಥಳೀಯ ಆಟಗಾರ ಕುನ್ಲಾವುತ್ ವಿಟಿಡ್‌ಸರ್ನ್ ಅವರು ಎದುರಾಳಿಯಾಗಿದ್ದು, ಸತ್ವ ಪರೀಕ್ಷೆ ಎದುರಾಗಿದೆ. 2022ರಲ್ಲಿ ಇರಾನ್‌ನಲ್ಲಿ ಫಜರ್ ಇಂಟರ್ ನ್ಯಾಷನಲ್ ಹಾಗೂ ಇಂಡಿಯಾ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಮೀರಬಾ ಚಾಂಪಿಯನ್ ಆಗಿದ್ದರು.

ಡಬಲ್ಸ್‌ನಲ್ಲಿ ವಿಶ್ವದ ಮೂರನೇ ನಂಬರ್ ಆಟಗಾರರಾದ ಸಾತ್ವಿಕ್–ಚಿರಾಗ್ ಜೋಡಿ ಎರಡನೇ ಸುತ್ತಿನಲ್ಲಿ 21–16, 21–11 ರಿಂದ ಚೀನಾದ ಷಿ ಸಾವೊ ನಾನ್– ಝೆಂಗ್ ವೀ ಹಾನ್ ಜೋಡಿಯನ್ನು ಸೋಲಿಸಿತು. ಚೀನಾ ಜೋಡಿ ವಿಶ್ವ ಕ್ರಮಾಂಕದಲ್ಲಿ 69ನೇ ಸ್ಥಾನದಲ್ಲಿದೆ.

ಟಿಟಿ: ಒಲಿಂಪಿಕ್ಸ್‌ಗೆ ತಂಡ ಪ್ರಕಟ, ಕರ್ನಾಟಕದ ಅರ್ಚನಾಗೆ ಅವಕಾಶ

ಸವಾಲು ಮುನ್ನಡೆಸಲಿರುವ ಶರತ್, ಮಣಿಕಾ

ನವದೆಹಲಿ (ಪಿಟಿಐ): ಅನುಭವಿ ಆಟಗಾರ ಶರತ್ ಕಮಲ್ ಮತ್ತು ವಿಶ್ವ ರ್‍ಯಾಂಕಿಂಗ್‌ನಲ್ಲಿ 24ನೇ ಸ್ಥಾನದಲ್ಲಿರುವ ಮಣಿಕಾ ಬಾತ್ರಾ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಭಾರತದ ಪುರುಷರ ಮತ್ತು ಮಹಿಳಾ ತಂಡಗಳನ್ನು ಮುನ್ನಡೆಸಲಿದ್ದಾರೆ.

ಟೇಬಲ್ ಟೆನಿಸ್ ಫೆಡರೇಷನ್ ಆಫ್ ಇಂಡಿಯಾದ ಆಯ್ಕೆ ಸಮಿತಿಯು ಗುರುವಾರ ಒಲಿಂಪಿಕ್ಸ್ ಮಾನದಂಡದಂತೆ ಆರು ಸದಸ್ಯರ ತಂಡವನ್ನು (ಪ್ರತಿ ವಿಭಾಗದಲ್ಲಿ ಮೂವರು) ಆಯ್ಕೆ ಮಾಡಿದೆ.

ಪುರುಷರ ವಿಭಾಗದಲ್ಲಿ ಶರತ್, ಹರ್ಮೀತ್ ದೇಸಾಯಿ ಮತ್ತು ಮಾನವ್ ಠಕ್ಕರ್ ತಂಡದಲ್ಲಿದ್ದರೆ, ಮಹಿಳಾ ವಿಭಾಗದಲ್ಲಿ ಮಣಿಕಾ, ಶ್ರೀಜಾ ಅಕುಲಾ ಮತ್ತು ಕರ್ನಾಟಕದ ಅರ್ಚನಾ ಕಾಮತ್ ತಂಡದ ಸದಸ್ಯರಾಗಿದ್ದಾರೆ.

ಜಿ.ಸತ್ಯನ್ ಮತ್ತು ಐಹಿಕಾ ಮುಖರ್ಜಿ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಬದಲಿ ಆಟಗಾರರಾಗಿರುತ್ತಾರೆ. ಪುರುಷರ ಸಿಂಗಲ್ಸ್‌ನಲ್ಲಿ ಶರತ್ ಮತ್ತು ಹರ್ಮೀತ್ ಸ್ಪರ್ಧಿಸಲಿದ್ದು, ಮಹಿಳಾ ವಿಭಾಗದಲ್ಲಿ ಮಣಿಕಾ ಮತ್ತು ಶ್ರೀಜಾ ಸ್ಪರ್ಧಿಸಲಿದ್ದಾರೆ.

ಇತ್ತೀಚಿನ ವಿಶ್ವ ರ್‍ಯಾಂಕಿಂಗ್ ಆಧಾರದ ಮೇಲೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 2004ರ ಒಲಿಂಪಿಕ್ಸ್‌ನಲ್ಲಿ ಪದಾರ್ಪಣೆ ಮಾಡಿದ್ದ 41 ವರ್ಷದ ಶರತ್ ಅವರಿಗೆ ಇದು ಐದನೇ ಹಾಗೂ ಅಂತಿಮ ಒಲಿಂಪಿಕ್ಸ್.

ಮಹಿಳಾ ತಂಡಕ್ಕೆ ಮೂರನೇ ಆಟಗಾರ್ತಿಯ ಬಗ್ಗೆ ಚರ್ಚೆ ನಡೆಯಿತು. ಮಣಿಕಾ ಮತ್ತು ಶ್ರೀಜಾ ಅಕುಲಾ ರ್‍ಯಾಂಕಿಂಗ್‌ನಲ್ಲಿ (ಅಗ್ರ 50) ಸ್ಥಾನ ಪಡೆದ ನಂತರ, ಅರ್ಚನಾ ಕಾಮತ್ (103) ಮೂರನೇ ಆಟಗಾರ್ತಿಯಾಗಿ ತಂಡದಲ್ಲಿ ಸ್ಥಾನ ಪಡೆದರು.

ಬೆಂಗಳೂರಿನ ಅರ್ಚನಾ ಅವರು ರ್‍ಯಾಂಕಿಂಗ್ ಸೇರಿದಂತೆ ಹಲವಾರು ವಿಷಯಗಳಲ್ಲಿ ಐಹಿಕಾ ಮುಖರ್ಜಿ (133) ಅವರನ್ನು ಹಿಂದಿಕ್ಕಿದ್ದಾರೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಪುರುಷರ ವಿಭಾಗದಲ್ಲಿ ಶರತ್ 40ನೇ ಸ್ಥಾನದಲ್ಲಿದ್ದರೆ, ಹರ್ಮೀತ್ 63ನೇ ಮತ್ತು ಮಾನವ್ 62ನೇ ಸ್ಥಾನ ಪಡೆದಿದ್ದಾರೆ. ರಾಷ್ಟ್ರೀಯ ಚಾಂಪಿಯನ್ ಹರ್ಮೀತ್ ಅವರ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರದರ್ಶನಗಳ ಆಧಾರದ ಮೇಲೆ ಆಯ್ಕೆದಾರರು ಅವಕಾಶ ನೀಡಿದ್ದಾರೆ.

ಬದಲಿ ಆಟಗಾರರಾದ ಸತ್ಯನ್ ಮತ್ತು ಐಹಿಕಾ ತಂಡದೊಂದಿಗೆ ಪ್ಯಾರಿಸ್‌ಗೆ ಪ್ರಯಾಣಿಸಲಿದ್ದಾರೆ. ಆದರೆ ಅವರು ಕ್ರೀಡಾ ಗ್ರಾಮದಲ್ಲಿ ಉಳಿಯುವುದಿಲ್ಲ. ಆಟಗಾರರು ಗಾಯಾಳಾದ ಸಂದರ್ಭದಲ್ಲಿ ಅವರನ್ನು ಆಡಿಸಲಾಗುತ್ತದೆ.

ತಂಡಗಳು: ಪುರುಷರ ವಿಭಾಗ: ಶರತ್ ಕಮಲ್, ಹರ್ಮೀತ್ ದೇಸಾಯಿ, ಮಾನವ ಠಕ್ಕರ್. ಬದಲಿ ಆಟಗಾರ: ಜಿ.ಸತ್ಯನ್

ಮಹಿಳಾ: ಮಣಿಕಾ ಬಾತ್ರಾ, ಶ್ರೀಜಾ ಅಕುಲಾ, ಅರ್ಚನಾ ಕಾಮತ್. ಬದಲಿ ಆಟಗಾರ್ತಿ: ಐಹಿಕಾ ಮುಖರ್ಜಿ

ಶರತ್ ಕಮಲ್

ಮಣಿಕಾ ಬಾತ್ರಾ

ಪದಕ ಗೆಲ್ಲುವ ವಿಶ್ವಾಸ: ಅರ್ಚನಾ

‘ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಟೇಬಲ್ ಟೆನಿಸ್ ತಂಡವನ್ನು ಪ್ರತಿನಿಧಿಸಲು ಅವಕಾಶ ದೊರೆತಿರುವುದು ಸಂತಸ ಮೂಡಿಸಿದೆ. ಕೋಚ್. ತಂದೆ– ತಾಯಿ ಹಾಗೂ ಇತರರು ಸಾಕಷ್ಟು ಪ್ರೋತ್ಸಾಹ ಹಾಗೂ ಸಹಕಾರ ನೀಡಿದ್ದಾರೆ. ತಂಡದಲ್ಲಿ ಈ ಬಾರಿ ಅವಕಾಶ ಸಿಗುತ್ತದೆ ಎಂಬ ನಿರೀಕ್ಷೆ ಇತ್ತು. ಕಳೆದ ವರ್ಷದಿಂದ ಭಾರತ ತಂಡ ಉತ್ತಮ ಪ್ರದರ್ಶನ ನೀಡುತ್ತಿದೆ. ಅನ್ಯ ದೇಶಗಳ ತಂಡಗಳಿಂದಲೂ ಕಠಿಣ ಸ್ಪರ್ಧೆ ಇರಲಿದೆ. ಭಾರತ ಪದಕ ಗೆಲ್ಲುವ ವಿಶ್ವಾಸ ಇದೆ’ ಎಂದು ಅರ್ಚನಾ ಕಾಮತ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಹ ಆಟಗಾರ್ತಿಯರಾದ ಮಣಿಕಾ, ಶ್ರೀಜಾ ಅವರು ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಕಠಿಣ ಸ್ಪರ್ಧೆ ಇರುವುದು ಸಹಜ. ದೊರೆತಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುತ್ತೇನೆ. ಉತ್ತಮ ಪ್ರದರ್ಶನ ನೀಡಲು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ’ ಎಂದರು.

ಅರ್ಚನಾ ಕಾಮತ್

ALVA'S NEET ACADEMY
Vidyagiri-Moodubidire - 574 227
LONG TERM NEET/JEE 2025
ADMISSIONS OPEN
28 YEARS EXPERIENCE IN COACHING FOR COMPETITIVE EXAMS
REPEATERS' BATCH
NEET/JEE RANK ENHANCEMENT PROGRAM
Special fee concession available for meritorious students
- Experienced Faculty.
- Weekly NEET/JEE mock tests.
- Cumulative testing.
- Affordable fees.
- Individual attention.
- Everyday Doubt solving Sessions.
- Daily guided study hours.
- Extensive chapterwise study material.
- Separate Hostel for Boys & Girls within Campus.
- More than 300 NTA-NEET model papers with solution.
- 24x7 Medical Facility.

First Batch Starts from 15th May 2024
More than 500 students are expected to join MBBS this year
8884477588, 8884499727, 8884499737, 8884499747
Visit: www.edu.alvas.org

3 ಅಥವಾ ಹೆಚ್ಚಿನ ಸೀರೆಗಳ ಖರೀದಿಗೆ ಕನಿಷ್ಠ 10% ರಿಯಾಯಿತಿ* ಪಡೆಯಿರಿ
Shop online at TANEIRA.com | +91 8147 349 464 | Shop on call 1800 266 0123
BANGALORE: Banashankari 3rd stage: 298, 7th Block, 100ft Ring Road, Ph: 8904431212 | Phoenix Mall of Asia: S-10, Second Floor, Ph: 080 68572691 | Sarjapur: No.60, Plot no 1, Opp Wipro Gate, Ph: 9591934592 | Indiranagar: 283, 100 Feet Road, HAL 2nd Stage, Ph: 080-48540026 | Jayanagar: 3rd Block, 11th Main Road, Ph: 080-48528312 | Malleshwaram: 116/5, 11th Cross, Margosa Road, Ph: 080-49703080 | Orion Mall: 116, 2nd Floor, Dr. Rajkumar Road, Ph: 080-22682310 | Phoenix Market City Mall: LG-28 Lower Ground Floor, Mahadevpura, Ph: 080-49626263 | HSR layout: No.818, 27th Main Road, 1st Sector, Ph: 080-29913275 | Kammanahalli: 401/B, Kammanahalli Main Road, HRBR Layout 2nd Block, Near Tanishq Showroom, Ph: 080-46014779
Scan QR code to shop this collection online